ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 18 ಶುಕ್ರವಾರ 2022


ಸಂಪುಟ: 43 | ಸಂಚಿಕೆ: 211 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೆಬಿಜಿಯವರ
ಛೂಮಂತ್ರ... ಛೂಮಂತ್ರ...



ಗೋವೆಯಲ್ಲಿ ಆಚರಿಸಿದ ದೀಪಾವಳಿ–2

ಪೋರ್ಚುಗೀಸ್ ಆಡಳಿತದ ಕುರುಹುಗಳ ನಡುವೆ ಮೈದಳೆದು ಬಂದ ನರಕಾಸುರ

■ ಪುಟ–4

ಒಳಪುಟಗಳಲ್ಲಿ

ಮೈಸೂರಿನ ಎಲೆ ತೋಟದಲ್ಲಿ ಸೆರೆ ಸಿಕ್ಕ ಮೊಸಳೆ

ನಿರಂತರ ಕಾರ್ಯಾಚರಣೆ ನಂತರ ಅಂತೂ ಬಲೆಗೆ ಬಿತ್ತು

ಪ್ರತ್ಯಕ್ಷವಾಗಿದ್ದ ಮೊಸಳೆಗೂ, ಇದಕ್ಕೂ ಸಾಕಷ್ಟು ವ್ಯತ್ಯಾಸ

ಬಲ ಮುಂಗಾಲು ಇಲ್ಲದ, 45 ವರ್ಷದ ಮೊಸಳೆ ಸೆರೆ

ಮೈಸೂರು, ನ.17(ಎಂಟಿವೈ)– ಮೈಸೂರಿನ ರಾಮಾನುಜ ರಸ್ತೆಯ 9ನೇ ಕ್ರಾಸ್‌ನ ಪಕ್ಕದ ಎಲೆ ತೋಟದಲ್ಲಿ ಕಳೆದ ಒಂದು ತಿಂಗಳಿಂದ ಕಣ್ಣಾಮುಚ್ಚಾಲೆ ಆಡುತ್ತ, ಸುತ್ತಮುತ್ತಲ ಜನರಲ್ಲಿ ಭೀತಿ ಹುಟ್ಟಿಸಿದ್ದ ಮೊಸಳೆಯನ್ನು ಇಂದು ಸೆರೆ ಹಿಡಿಯಲಾಗಿದೆ. ಇದು ಸುಮಾರು 45 ವರ್ಷದ ಮೊಸಳೆ ಇರಬಹುದು ಎಂದು ಅಂದಾಜಿಸಿದ್ದು, ಇಲ್ಲಿ ಇನ್ನಷ್ಟು ಮೊಸಳೆ ಇರುವ ಆತಂಕ ವ್ಯಕ್ತವಾಗಿದೆ.

ಕೆಲವು ದಿನಗಳಿಂದ ಪದೇ ಪದೆ ಪ್ರತ್ಯಕ್ಷವಾಗಿ ಸ್ಥಳೀಯರಲ್ಲಿ ಭಯದ ವಾತಾವರಣ ಉಂಟು ಮಾಡಿದ್ದ ಮೊಸಳೆ ಸೆರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ಮುಂದುವರೆಸಿತ್ತು. ನ.13 ರಂದು ಕರುವೊಂದನ್ನು ಬಲಿ ಪಡೆದಿತ್ತು. ಅಲ್ಲದೆ ಜನರ ಮೇಲೂ ದಾಳಿ ಮಾಡಬಹುದೆಂಬ ಆತಂಕ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಕಳೆದ ಎರಡು ದಿನಗಳಿಂದ ಮೊಸಳೆ ಸೆರೆ ಕಾರ್ಯಾಚರಣೆ ಮುಂದುವರೆದಿತ್ತು. ಈ ನಡುವೆ ಎಲೆ ತೋಟದ ಗುಂಡಿಯಲ್ಲಿದ್ದ ಕೊಳಚೆ ನೀರನ್ನು ಮೋಟಾರ್ ಪಂಪ್ ಬಳಸಿ ಚರಂಡಿಗೆ ಬಿಡಲಾಗಿತ್ತು. ಆದರೂ ಗುಂಡಿಯಲ್ಲಿ ನೀರು ತುಂಬುತ್ತಲೇ ಇತ್ತು. ಇದನ್ನು ಗಮನಿಸಿದ ಅರಣ್ಯ ಇಲಾಖೆ, ಪಾಲಿಕೆ ವತಿಯಿಂದ ಟ್ರಂಚ್ ನಿರ್ಮಿಸಿ ಅಲ್ಲಿ ಸಂಗ್ರಹವಾಗಿರುವ ನೀರನ್ನು ಹೊರ ಹಾಕಿ, ಮೊಸಳೆ ಸೆರೆ ಕಾರ್ಯಾಚರಣೆ ನಡೆಸುವುದಾಗಿ ಪಾಲಿಕೆಗೆ ಪತ್ರ ಬರೆಯಲಾಗಿತ್ತು. ಅದೇ ರೀತಿ ಗುರುವಾರ



ಕಂಡಿದ್ದು ಒಂದು, ಸೆರೆ ಸಿಕ್ಕಿದ್ದು ಮತ್ತೊಂದೇ?

ಸೆರೆ ಸಿಕ್ಕ ಮೊಸಳೆಗೆ ಮುಂಭಾಗ ಒಂದು ಕಾಲಿಲ್ಲ. ಇದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಕಳೆದ ಕೆಲವು ದಿನಗಳಿಂದ ಪ್ರತ್ಯಕ್ಷವಾಗುತ್ತಿದ್ದ ಮೊಸಳೆಗೆ ನಾಲ್ಕೂ ಕಾಲುಗಳಿದ್ದವು. ಆದರೆ ಸೆರೆ ಸಿಕ್ಕಿರುವ ಈ ಮೊಸಳೆಗೆ ಬಲ ಮುಂಗಾಲಿಲ್ಲ. ಆದರೆ ಹಳೆ ಗಾಯದ ಗುರುತು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಎಲೆತೋಟದ ರಸ್ತೆಯಲ್ಲಿ ಪ್ರತ್ಯಕ್ಷವಾಗುತ್ತಿದ್ದ ಮೊಸಳೆಯೇ ಬೇರೆ, ಸೆರೆ ಸಿಕ್ಕಿರುವ ಮೊಸಳೆಯೇ ಬೇರೆ ಎಂಬ ಅನುಮಾನ ದಟ್ಟವಾಗಿದೆ. ಇಂದು ಸೆರೆ ಸಿಕ್ಕ ಮೊಸಳೆ ಮೂರು ತಿಂಗಳ ಹಿಂದೆ ಸಿವೇಜ್ ಫಾರಂನಲ್ಲಿ ಕಂಡು ಬಂದಿತ್ತು ಎನ್ನಲಾಗಿದೆ. ಕೆಲ ದಿನಗಳ ಹಿಂದೆ ಸೆರೆ ಹಿಡಿಯುವ ಪ್ರಯತ್ನ ನಡೆದಿತ್ತು. ಆದರೆ, ಆ ಮೊಸಳೆ ಚರಂಡಿ ನೀರಲ್ಲಿ ಕಣ್ಮರೆಯಾಗಿತ್ತು. ಇದೀಗ ಎಲೆತೋಟದ ಬಳಿ ಸೆರೆ ಸಿಕ್ಕಿದೆ. ಎಲೆತೋಟದ ಆಸುಪಾಸಲ್ಲಿ ಇನ್ನೂ ಮೊಸಳೆ ಗಳು ಇರುವ ಆತಂಕ ದಟ್ಟವಾಗಿದೆ. ಪತ್ತೆ ಕಾರ್ಯಾಚರಣೆ ನಡೆಸುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

ಬೆಳಗ್ಗೆಯಿಂದಲೇ ಕಾರ್ಯಾಚರಣೆ ಚುರುಕುಗೊಳಿಸಿದ ಪಾಲಿಕೆ ಹಾಗೂ ಅರಣ್ಯ ಇಲಾಖೆ ತಂಡ ಎಲೆತೋಟದ ಸುತ್ತಮುತ್ತಲ ಚರಂಡಿಗೆ ಬಲೆ ಹಾಕಿ ಮೊಸಳೆಗಾಗಿ ▶ 8ನೇ ಪುಟಕ್ಕೆ

ಕಾಂಗ್ರೆಸ್ ಗಂಭೀರ ಆರೋಪ; ಜಾಗೃತಿ ಮೂಡಿಸುವ ನೆಪದಲ್ಲಿ ಮತದಾರರ ಡಾಟಾಗೆ ಕನ್ನ

● ಖಾಸಗಿ ಸಂಸ್ಥೆಯ ಮೂಲಕ ಬಿಜೆಪಿ ಸರ್ಕಾರದಿಂದಲೇ 'ಮತದಾರರ ಆಪರೇಷನ್'!
● ಮುಖ್ಯಮಂತ್ರಿ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳ ರಾಜೀನಾಮೆಗೆ ಆಗ್ರಹ

ಬೆಂಗಳೂರು, ನ.17(ಕೆಎಂಶಿ)– ರಾಜ್ಯದಲ್ಲಿ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರಲು ಮತದಾರರನ್ನೇ ಆಪರೇಷನ್ ಮಾಡಲು ಬಿಜೆಪಿ ಸರ್ಕಾರ ಮುಂದಾಗಿದೆ ಎಂದು ಕಾಂಗ್ರೆಸ್ ಇಂದಿಲ್ಲಿ ಗಂಭೀರವಾಗಿ ಆರೋಪಿಸಿದೆ.

ಆಪರೇಷನ್ ಕಮಲದ ಮೂಲಕ ಅಧಿಕಾರಕ್ಕೆ ಬಂದ ಬಿಜೆಪಿ ಇದೀಗ ಮುಂದಿನ ಚುನಾವಣೆಯಲ್ಲಿ ಮತದಾರರನ್ನೇ ಆಪರೇಷನ್ ಕಾರ್ಯಾಚರಣೆಗೆ ಒಳಪಡಿಸಿ, ಅಧಿಕಾರಕ್ಕೆ ಬರಲು ಹೊರಟಿದೆ ಎಂದು ದಾಖಲೆ ಸಮೇತ ದೂರಿದ್ದಾರೆ. ಮತದಾರರ ಜಾಗೃತಿ ಹೆಸರಲ್ಲಿ ಮತದಾರರ ಡಾಟಾ ಕಳ್ಳತನಕ್ಕೆ ಇಳಿದಿರುವ ಬಿಜೆಪಿ ಸರ್ಕಾರ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಹೈಜಾಕ್ ಮಾಡಲು ಮುಂದಾಗಿದೆ ಎಂದು ಆರೋಪಿಸಲಾಗಿದೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ್, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ▶ 8ನೇ ಪುಟಕ್ಕೆ



ಇದೊಂದು ಆಧಾರ ರಹಿತ ಆರೋಪ: ಸಿಎಂ ಬೊಮ್ಮಾಯಿ



ಬೆಂಗಳೂರು: ಕಾಂಗ್ರೆಸ್‌ನವರು ತಮ್ಮ ವಿಚಾರಗಳಲ್ಲಿ ದಿವಾಳಿಯಾಗಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದೂರಿದ್ದಾರೆ. ಮತದಾರರ ಸಮೀಕ್ಷೆ ಹೆಸರಿನಲ್ಲಿ ಮತದಾರರ ಖಾಸಗೀತನಕ್ಕೆ ಕನ್ನ ಹಾಕಲಾಗಿದೆ ಎಂಬ ಕಾಂಗ್ರೆಸ್ ಆರೋಪದ ಬಗ್ಗೆ ಸುದ್ದಿಗಾರರಿಗೆ ಮಾಹಿತಿ ನೀಡಿದ ಮುಖ್ಯಮಂತ್ರಿಗಳು, ಚುನಾವಣಾ ಆಯೋಗ ಸ್ವೀಪ್ ಕಾರ್ಯಕ್ರಮ ಕೈಗೊಳ್ಳಲು ಬಿಬಿಎಂಪಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ವಹಿಸಿರುತ್ತಾರೆ. ▶ 8ನೇ ಪುಟಕ್ಕೆ

ಮತದಾರರ ಸಮೀಕ್ಷೆಗೆ ಯಾರಿಗೂ ಅನುಮತಿ ನೀಡಿಲ್ಲ



ಬೆಂಗಳೂರು: ಕಾಂಗ್ರೆಸ್ ನಾಯಕರ ಮತ ಪಟ್ಟಿ ಪರಿಷ್ಕರಣೆ ಅಕ್ರಮ ಆರೋಪ ಸಂಬಂಧ ಸ್ಪಷ್ಟೀಕರಣ ನೀಡಿರುವ ಚುನಾವಣಾ ಆಯೋಗದ ಜಿಲ್ಲಾ ಚುನಾ ವಣಾಧಿಕಾರಿ, ಬಿಬಿಎಂಪಿ ಯಾವುದೇ ಸಂಸ್ಥೆಗೆ ಸಮೀಕ್ಷೆ ನಡೆಸಲು ಅನುಮತಿ ನೀಡಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಜಿಲ್ಲಾ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, ಕೆಲವು ನ್ಯೂಸ್ ಪೋರ್ಟಲ್ ಮತ್ತು ದೃಶ್ಯ ಮಾಧ್ಯಮಗಳಲ್ಲಿ ▶ 8ನೇ ಪುಟಕ್ಕೆ

ಕಾಂಗ್ರೆಸ್ ಮಾಡಿದ್ದನ್ನೇ ಈಗ ಬಿಜೆಪಿ ಮಾಡುತ್ತಿದೆ: ಹೆಚ್‌ಡಿಕೆ



ರಾಮನಗರ, ನ.17–ಮತದಾರರ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ಬಿಜೆಪಿ ಅಕ್ರಮವೆಸಗಿದೆ ಎಂಬ ಕಾಂಗ್ರೆಸ್ ಆರೋಪಕ್ಕೆ ಸಂಬಂಧಿಸಿದಂತೆ ಹಿಂದೆ ಕಾಂಗ್ರೆಸ್ಸಿಗರು ಮಾಡಿದ ಕೆಲಸವನ್ನು ಇಂದು ಬಿಜೆಪಿಯವರು ಮಾಡುತ್ತಿದ್ದಾರೆ. ಚುನಾವಣೆಯಲ್ಲಿ ಅಕ್ರಮ ಮಾಡಲು ಖಾಸಗಿ ಸಂಸ್ಥೆಗೆ ಗುತ್ತಿಗೆ ಕೊಟ್ಟಿದ್ದಾರೆ. ಇದು ಮಂತ್ರಿಗಳ ಬೇನಾಮಿ ಹೆಸರಿನಲ್ಲಿ ಇರುವ ಕಂಪನಿ ಎಂದು ಪರೋಕ್ಷವಾಗಿ ಅಶ್ವಥ್ ನಾರಾಯಣ ವಿರುದ್ಧ ಮಾಜಿ ಸಿಎಂ ▶ 8ನೇ ಪುಟಕ್ಕೆ

ಬ್ರಾಹ್ಮಣ ಸಮುದಾಯದ ಬಗ್ಗೆ ಅವಹೇಳನಕಾರಿ ಹೇಳಿಕೆ

ಚಿಂತಕ ಪ.ಮಲ್ಲೇಶ್ ವಿರುದ್ಧ ಜಾತಿ ನಿಂದನೆ ಕೇಸ್ ದಾಖಲು



ಮೈಸೂರು, ನ.17(ಎಸ್‌ಬಿಡಿ)– ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಸಮಾಜವಾದಿ ಪ.ಮಲ್ಲೇಶ್ ವಿರುದ್ಧ ಗುರುವಾರ ಜಾತಿ ನಿಂದನೆ ದೂರು ದಾಖಲಿಸಲಾಗಿದೆ.

ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ನ.15ರಂದು ನಡೆದ 'ಸಿದ್ದರಾಮಯ್ಯ 75' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪ.ಮಲ್ಲೇಶ್ 'ಬ್ರಾಹ್ಮಣರನ್ನು ಮತ್ತು ಬ್ರಾಹ್ಮಣಿಕೆಯನ್ನು ನಂಬಬೇಡಿ', '... ಬ್ರಾಹ್ಮಣರು' ಎಂದು ಅವಹೇಳನಕಾರಿ ಪದ ಬಳಕೆ ಮಾಡಿ ಜಾತಿ ನಿಂದನೆ ಮಾಡಿದ್ದಾರೆ. ಅದೇ ವೇಳೆ ಸಂವಿಧಾನಾತ್ಮಕವಾಗಿ ನೀಡಿರುವ ಶೇ.10 ದುರ್ಬಲ ವರ್ಗದ ಮೀಸಲಾತಿ ಬಗ್ಗೆಯೂ ಅವಹೇಳನ ಮಾಡಿದ್ದಾರೆ. ಆ ಮೂಲಕ ಈ ಮೀಸಲಾತಿ ಸಂವಿಧಾನಾತ್ಮಕ ಎಂದಿರುವ ನ್ಯಾಯಾಲಯವನ್ನೂ ನಿಂದಿಸಿದ್ದಾರೆ. ಈ ಹೇಳಿಕೆಗಳಿಂದ ಬ್ರಾಹ್ಮಣ ಸಮಾಜದವರ ಮನಸ್ಸಿಗೆ ನೋವಾಗಿದ್ದು, ಸಮಾಜದ ಸ್ವಾಸ್ಥ್ಯ ಕೆಡಿಸಲು ಪ್ರಚೋದನಾಕಾರಿ ಮಾತನಾಡಿರುವ ಪ.ಮಲ್ಲೇಶ್ ವಿರುದ್ಧ ಕಲಂ–153(ಎ), 295, 295(ಎ) ಐಪಿಸಿ ರೀತ್ಯಾ ಸೂಕ್ತ ಕ್ರಮ ಜರುಗಿಸಬೇಕೆಂದು ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕುವೆಂಪುನಗರ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಕೋರಿದ್ದಾರೆ. ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಡಿ.ಟಿ.ಪ್ರಕಾಶ್, ಬ್ರಾಹ್ಮಣ ಸಮುದಾಯವನ್ನು ಅವಹೇಳನ ಮಾಡಿರುವ ಪ.ಮಲ್ಲೇಶ್ ವಿರುದ್ಧ ಜಾತಿ ನಿಂದನೆ ದೂರು ನೀಡಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಿಸುವುದಾಗಿ ಪೊಲೀಸ್ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಪೂರ್ವಭಾವಿ ಸಭೆಯಲ್ಲಾದ ತೀರ್ಮಾನದಂತೆ ನ.21ರಂದು ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಿದ್ದು, 3 ಸಾವಿರಕ್ಕೂ ಹೆಚ್ಚು ಜನ ಭಾಗಿಯಾಗಲಿದ್ದಾರೆ. ಮಠಾಧೀಶರನ್ನು ಕಂಡು ಬೆಂಬಲ ಕೋರಲಿದ್ದು, ಸಮುದಾಯದ ಎಲ್ಲಾ ರಾಜಕೀಯ ಮುಖಂಡರು, ವಿವಿಧ ಸಂಘಟನೆಯವರು ಭಾಗಿಯಾಗಲಿರುವ ಈ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಿದ್ದೇವೆ. ಬಹಿರಂಗವಾಗಿ ನಿಂದಿಸಿ, ಮನೆಯಲ್ಲಿ ಕುಳಿತು ಕ್ಷಮೆ ಯಾಚಿಸಿದರೆ ಯಾರೂ ಒಪ್ಪುವುದಿಲ್ಲ. ಪ.ಮಲ್ಲೇಶ್ ಅವರು ಮಾಧ್ಯಮಗಳ ಮುಂದೆ ಬಹಿರಂಗವಾಗಿ ಕ್ಷಮೆ ಕೇಳಬೇಕೆಂದು ಆಗ್ರಹಿಸಿದರು. ಮುಡಾ ಮಾಜಿ ▶ 8ನೇ ಪುಟಕ್ಕೆ

ಮೈಸೂರಲ್ಲಿ ಈಗ 'ಗುಂಬಜ್' ತಂಗುದಾಣದ್ದೇ ಸದ್ದು!

ಬಿಜೆಪಿ ಸಂಸದ ಪ್ರತಾಪ್ ಸಿಂಹ, ಶಾಸಕ ಎಸ್.ಎ.ರಾಮದಾಸ್‌ರದ್ದು ಧ್ವನಿ–ಪ್ರತಿಧ್ವನಿ

ನಾ ಹೋರಾಟದಿಂದ ಹಿಂದೆ ಸರಿಯಲ್ಲ

ರಾಮದಾಸ್ ಅವರಿಗೆ ಕಿರುಕುಳ ಕೊಡುವಷ್ಟು ದೊಡ್ಡ ವ್ಯಕ್ತಿ ನಾನಲ್ಲ: ಸಂಸದ ಪ್ರತಾಪ್ ಸಿಂಹ



ಮೈಸೂರು, ನ.17(ಆರ್‌ಕೆ)–ರಾಷ್ಟ್ರೀಯ ಹೆದ್ದಾರಿಯಲ್ಲಿ ಬಸ್ ತಂಗುದಾಣ ನಿರ್ಮಿಸುವಾಗ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI)ದ ನಿರಾಕ್ಷೇಪಣಾ ಪತ್ರ (NOC)ಪಡೆದು ನಕ್ಷೆಗೆ ಅನುಮೋದನೆ ಪಡೆಯಬೇಕೆಂಬುದು ನನ್ನ ವಾದವೇ ಹೊರತು, ಯಾರಿಗೋ ಕಿರುಕುಳ ನೀಡಬೇಕೆಂಬುದಲ್ಲ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಬಸ್ ಶೆಲ್ಟರ್ ನಿರ್ಮಾಣ ವಿವಾದ ಸಂಬಂಧ ಕಿರುಕುಳ ನೀಡಲಾಗುತ್ತಿದೆ ಎಂಬ ಶಾಸಕ ಎಸ್.ಎ.ರಾಮದಾಸ್ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿರುವ ಅವರು, 29 ವರ್ಷಗಳ ಹಿಂದೆಯೇ ಶಾಸಕರಾಗಿದ್ದ ರಾಮದಾಸ್ ಅವರು, ತಾವು ಮಾಡಿದ ಸಾಧನೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಂದ ಬೆನ್ನಿಗೆ ಗುದ್ದಿಸಿಕೊಂಡು ಮೆಚ್ಚುಗೆ ಪಡೆದುಕೊಂಡವರು. ಅವರಿಗೆ ಕಿರುಕುಳ ಕೊಡುವಷ್ಟು ನಾನು ದೊಡ್ಡವನಲ್ಲ ಎಂದು ಮಾರ್ಮಿಕವಾಗಿ ನುಡಿದರು. ಟಿಪ್ಪು ಅನುಯಾಯಿಗಳಿಗೆ ಕಿರುಕುಳ ನೀಡಬೇಕೇ ಹೊರತು, ಶಿವಾಜಿ ಮಹಾರಾಜರ ಅನುಯಾಯಿಗಳಿಗಲ್ಲ. ರಾಮದಾಸ್ ಅವರು ಯಾವ ಕಾರಣಕ್ಕಾಗಿ ಈ ರೀತಿ ಹೇಳಿದ್ದಾರೋ ಗೊತ್ತಿಲ್ಲ. ಅವರು ಇನ್ನೂ 10–15 ಬಸ್ ಶೆಲ್ಟರ್ ಕಟ್ಟಲಿ. ಆದರೆ ಮೂಲ ವಿನ್ಯಾಸಕ್ಕನುಗುಣವಾಗಿ ನಿರ್ಮಿಸಲಿ. ನನ್ನದೇನೂ ▶ 2ನೇ ಪುಟಕ್ಕೆ



ಮೈಸೂರು–ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು ಬಳಿ ನಿರ್ಮಿಸಿರುವ ಗುಂಬಜ್ ಬಸ್ ತಂಗುದಾಣ

ಮೈಸೂರು, ನ.17(ಆರ್‌ಕೆ)–ಮೈಸೂರಿನ ಜೆಎಸ್‌ಎಸ್ ಕಾಲೇಜು ಬಳಿ ಊಟಿ ರಸ್ತೆಯಲ್ಲಿ ನಿರ್ಮಿಸಲಾಗಿರುವ 'ಗುಂಬಜ್' ಪ್ರಯಾಣಿಕರ ತಂಗುದಾಣದ ವಿವಾದ ದಿನದಿಂದ ದಿನಕ್ಕೆ ತಾರಕಕ್ಕೇರುತ್ತಿದೆ. ಪ್ರಯಾಣಿಕರ ತಂಗುದಾಣ ಸಂಬಂಧ ಬಿಜೆಪಿಯ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಹಾಗೂ ಅದೇ ಪಕ್ಷದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ನಡುವಿನ ವಾಗ್ಯುದ್ಧವೂ ಮುಂದುವರೆದಿದ್ದು, ಸಾರ್ವಜನಿಕ ವಲಯದಲ್ಲಿ ಅಚ್ಚರಿ, ನಾನಾ ಅನುಮಾನಕ್ಕೆ ▶ 2ನೇ ಪುಟಕ್ಕೆ

> “ರಾಮದಾಸ್ ಅವರು ನಿನ್ನೆ ನನ್ನನ್ನು ಭೇಟಿ ಮಾಡಿ, ತಜ್ಞರ ಸಮಿತಿಯನ್ನು ಮೈಸೂರಿಗೆ ಕಳುಹಿಸುವಂತೆ ಲಿಖಿತವಾಗಿ ಕೋರಿದ್ದಾರೆ. ಹೀಗಾಗಿ ತಜ್ಞರ ಸಮಿತಿಯನ್ನು ಕಳುಹಿಸುತ್ತಿದ್ದೇನೆ. ವಿವಾದದ ಬಗ್ಗೆ ನಾನು ಏನು ಹೇಳುವುದಿಲ್ಲ. ಮಾಡಿರುವ ಕೆಲಸ ಸರಿಯಾಗಿದೆಯೇ ಇಲ್ಲವೇ ಎಂಬುದಷ್ಟೇ ವಿಚಾರ.
> –ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ನಾನು ತಪ್ಪು ಮಾಡಿದ್ದರೆ ಶಿಕ್ಷೆ ಕೊಡಲಿ

ಮಾಧ್ಯಮಗಳ ಮುಂದೆ ಗದ್ಗದಿತರಾದ ಶಾಸಕ ಎಸ್.ಎ.ರಾಮದಾಸ್



ಮೈಸೂರು, ನ.17(ಆರ್‌ಕೆ)–ಬಸ್ ತಂಗುದಾಣ ನಿರ್ಮಿಸುವ ವಿಚಾರದಲ್ಲಿ ನಾನು ತಪ್ಪು ಮಾಡಿದ್ದರೆ ಶಿಕ್ಷೆ ಕೊಡಲಿ. ಆ ನಷ್ಟದ ಹಣವನ್ನು ನನ್ನ ಸಂಬಳದಿಂದ ಭರಿಸುತ್ತೇನೆ ಎಂದು ಶಾಸಕ ಎಸ್.ಎ.ರಾಮದಾಸ್, ಇಂದು ಮಾಧ್ಯಮಗಳ ಮುಂದೆ ಗದ್ಗದಿತರಾದರು.

ಮೈಸೂರು–ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜು ಬಳಿ ಸಾರ್ವಜನಿಕರ ಅನುಕೂಲಕ್ಕಾಗಿ ಪಾರಂಪರಿಕ ಶೈಲಿಯ ಬಸ್ ತಂಗುದಾಣವನ್ನು ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನದಿಂದ ಕೆಆರ್‌ಐಡಿಎಲ್ ಮೂಲಕ ನಿರ್ಮಿಸಲಾಗಿದೆ. ಅದರ ಗೋಪುರಗಳು ಪುರಾತತ್ವ ಮತ್ತು ಪಾರಂಪರಿಕ ವಿನ್ಯಾಸದಂತೆ ಇವೆಯೇ ಹೊರತು, ಬೇರೆ ಧರ್ಮದ ಶೈಲಿಯದ್ದಲ್ಲ ಎಂದು ಅವರು ಸಮರ್ಥಿಸಿಕೊಂಡರು. ಪಾರಂಪರಿಕ ತಜ್ಞರ ಸಮಿತಿ ರಚಿಸಲಿ. ಒಂದು ವೇಳೆ ಅದು ಸರಿ ಇಲ್ಲ ಎಂದು ಅಭಿಪ್ರಾಯಪಟ್ಟರೆ, ವಿನ್ಯಾಸ ಬದಲಿಸುತ್ತೇವೆ. ಅಥವಾ ಈ ವಿಚಾರದಲ್ಲಿ ಶಿಕ್ಷೆ ಕೊಡಲಿ, ಆ ನಷ್ಟದ ಹಣವನ್ನು ನನ್ನ ಸಂಬಳದ ಹಣದಲ್ಲಿ ಭರಿಸುತ್ತೇನೆ ಎಂದ ಅವರು, ಈ ಬಗ್ಗೆ ನಿನ್ನೆ ಬೆಂಗಳೂರಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಮನವಿ ನೀಡಿದ್ದೇನೆ ಎಂದರು. ಶಾಸಕನಾಗಿ ನಾನು ಅಭಿವೃದ್ಧಿ ಬಗ್ಗೆ ಮಾತ್ರ ಚಿಂತನೆ ಮಾಡುತ್ತೇನೆ. ▶ 2ನೇ ಪುಟಕ್ಕೆ

'ಪಾಲಿಕೆ ಅದಾಲತ್' ಎಂಬುದೇ ಸಾರ್ವಜನಿಕರಿಗೆ ಕಿರಿಕಿರಿ

ಜನನ, ಮರಣ ಪ್ರಮಾಣ ಪತ್ರ ನೀಡಲಿಕ್ಕೂ ಅದಾಲತ್ ಬೇಕೇ?: ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಪ್ರಶ್ನೆ



ಮೈಸೂರು,ನ.17(ಆರ್‌ಕೆಬಿ)– ಮೈಸೂರು ಮಹಾನಗರಪಾಲಿಕೆ ನಡೆಸುತ್ತಿರುವ 'ಪಾಲಿಕೆ ಅದಾಲತ್' ಸಾರ್ವಜನಿಕರಿಗೆ ನೀಡುತ್ತಿರುವ ಕಿರುಕುಳ ಎಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಆರೋಪಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗಾಗಿ ಅರ್ಜಿ ಕೊಡುತ್ತಾರೆ. ಅದನ್ನು ನಿಗದಿತ ಸಮಯದಲ್ಲಿ ವಿಲೇವಾರಿ ಮಾಡಬೇಕಾದದ್ದು ಅಧಿಕಾರಿಗಳ ಕರ್ತವ್ಯ. ಆದರೆ ಅದನ್ನು ಬಿಟ್ಟು ಅರ್ಜಿ ನೀಡಿರುವ ಸಾರ್ವಜನಿಕರಿಗೆ ಮತ್ತೆ ಅರ್ಜಿ ನೀಡಿ ಎಂದು ಅದಾಲತ್ ನಡೆಸಿರುವುದು ಅಧಿಕಾರಿಗಳ ಕರ್ತವ್ಯ ಲೋಪಕ್ಕೆ ನಿದರ್ಶನವಾಗಿದೆ ಎಂದು ದೂರಿದರು.

ಜನನ, ಮರಣ ಪ್ರಮಾಣಪತ್ರಕ್ಕೂ ಅದಾಲತ್ ಬೇಕಿತ್ತೇ? ಎಂದು ಪ್ರಶ್ನಿಸಿದ ಅವರು, ಅರ್ಜಿ ಕೊಟ್ಟಿರುವುದರ ಬಗ್ಗೆ ಆಯುಕ್ತರು, ತಮ್ಮ ನೌಕರರಿಗೆ ಅದಾಲತ್ ನಡೆಸಿ, ಅರ್ಜಿಗೆ ನೀಡಿದ ಸಮಯದಲ್ಲಿ ಅರ್ಜಿದಾರನ ಸಮಸ್ಯೆ ಬಗೆಹರಿಸದಿರುವ ಬಗ್ಗೆ ನೌಕರರ ಮೇಲೆ ಕ್ರಮ ತೆಗೆದುಕೊಳ್ಳಬೇಕಿತ್ತು. ಆದರೆ ಪಾಲಿಕೆ ಯಲ್ಲೇ ಐಎಎಸ್ ಅಧಿಕಾರಿ ಇದ್ದರೂ ಸಾರ್ವಜನಿಕರಿಗೆ ಅದಾಲತ್ ಹೆಸರಿನಲ್ಲಿ ನೀಡುತ್ತಿರುವ ಕಿರುಕುಳವಿದು. ಆಯುಕ್ತರು ಕೈಚೆಲ್ಲಿದ್ದಾರೆ ಎಂಬಂತೆ ಕಾಣುತ್ತಿದೆ ಎಂದು ಆರೋಪಿಸಿದರು.

ನಗರಪಾಲಿಕೆ ಅಧಿಕಾರಿಗಳು ಇನ್ನೂ ಶೇ.30ರಿಂದ 40ರಷ್ಟು ತೆರಿಗೆ ಹಣವನ್ನೇ ಸಂಗ್ರಹಿಸಿಲ್ಲ. ಆದರೆ ಅದಾಲತ್ ಎಂಬ ನಾಟಕ ನಡೆಯುತ್ತಿದೆ ಅಷ್ಟೆ ಎಂದು ಭೈರಪ್ಪ ದೂರಿದರು. ಸುದ್ದಿಗೋಷ್ಠಿಯಲ್ಲಿ ಬಳಗದ ವಾಸು, ವೆಂಕಟೇಶ್ ಉಪಸ್ಥಿತರಿದ್ದರು.

ಪಾಲಿಕೆ ಅದಾಲತ್‌ನಲ್ಲಿ ಈವರೆಗೆ 158 ಅರ್ಜಿ ಸಲ್ಲಿಕೆ

ಮೈಸೂರು,ನ.17(ಆರ್‌ಕೆಬಿ)–ಮೈಸೂರು ನಗರಪಾಲಿಕೆ ಆವರಣದಲ್ಲಿ ಆಯೋಜಿಸಿರುವ 'ಪಾಲಿಕೆ ಅದಾಲತ್'ನಲ್ಲಿ ಗುರುವಾರ 47 ಅರ್ಜಿಗಳು ಸ್ವೀಕೃತಗೊಂಡವು. ಕಂದಾಯ ಮತ್ತು ನಗರ ಯೋಜನಾ ಶಾಖೆಯಲ್ಲಿ ತಲಾ 8 ಅರ್ಜಿ, ಆಶ್ರಯ ಶಾಖೆಯಲ್ಲಿ 10, ಒಳಚರಂಡಿ ವಿಭಾಗ ಮತ್ತು ವಾಣಿ ವಿಲಾಸ ನೀರು ಸರಬರಾಜು ಶಾಖೆಯಲ್ಲಿ 7, ಅಭಿವೃದ್ಧಿ ಮತ್ತು ತಾಂತ್ರಿಕ ಶಾಖೆ ಹಾಗೂ ಬಡತನ ನಿರ್ಮೂಲನಾ ಶಾಖೆಯಲ್ಲಿ ತಲಾ 4, ಲೆಕ್ಕಪತ್ರ ಮತ್ತು ಆಡಳಿತ ಶಾಖೆಯಲ್ಲಿ 1, ಆರೋಗ್ಯ ಶಾಖೆಯಲ್ಲಿ 2 ಇತರೆ 3 ಅರ್ಜಿಗಳು ಸೇರಿ 47 ಅರ್ಜಿಗಳು ಸಲ್ಲಿಕೆಯಾದವು. ಒಟ್ಟಾರೆ 4 ದಿನಗಳಲ್ಲಿ ಅದಾಲತ್‌ನಲ್ಲಿ ಇದುವರೆಗೆ 158 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಲಲಿತಮ್ಮ ನಿಧನ



ಮೈಸೂರು, ನ.17–ಮೈಸೂರಿನ ಗಾಂಧಿನಗರದ ಶ್ರೀ ದುರ್ಗಾದೇವಿ ದೇವಸ್ಥಾನದ ರಸ್ತೆ ನಿವಾಸಿ ಮತ್ತು ಲೇಟ್ ಮಹದೇವಯ್ಯ ಅವರ ಪತ್ನಿ ಲಲಿತಮ್ಮ (73) ನಿಧನರಾದರು. ಮೃತರು ಮಕ್ಕಳಾದ ಸ್ವಾಮಿ, ರಾಜು, ಅಂಬಿಕಾ, ಶಶಿಕಲಾ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿತು.

ಒಂದನೇ ಪುಟದಿಂದ

'ಗುಂಬಜ್' ತಂಗುದಾಣದ್ದೇ ಸದ್ದು!

ಆಸ್ಪದ ಮಾಡಿಕೊಟ್ಟಿದೆ. ಈ ನಡುವೆ ನಿನ್ನೆ ರಾತ್ರೋರಾತ್ರಿ ಗೋಲ್ಡ್ ಕಲರ್ ಬಣ್ಣವಿದ್ದ ಗೋಪುರಗಳಿಗೆ ಕೆಂಪು ಬಣ್ಣ ಬಳಿದಿದ್ದು, ವಿವಾದ ಹೊಸ ತಿರುವು ಪಡೆದುಕೊಂಡಿದೆ. ಅಲ್ಲದೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸುತ್ತೂರು ಮಹಾ ಸಂಸ್ಥಾನ ಮಠದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವ ಯೋಗಿ ಮಹಾ ಸ್ವಾಮೀಜಿ ಹಾಗೂ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಭಾವಚಿತ್ರಗಳಿರುವ ಫಲಕ ಅಳವಡಿಸಲಾಗಿದೆ. ಪ್ರಯಾಣಿಕರ ತಂಗುದಾಣದ ಮೇಲೆ ಗುಂಬಜ್ ನಿರ್ಮಿಸಿರುವ ಬಗ್ಗೆ ಸಾಮಾಜಿಕ ಜಾಲ ತಾಣಗಳಲ್ಲಿ ಮೂರು ದಿನಗಳ ಹಿಂದೆ ನಿರಂತರವಾಗಿ ಹಾಕಲಾಗಿದ್ದ ಪೋಸ್ಟ್‌ಗಳಲ್ಲಿ ಗುಂಬಜ್ ಮಾದರಿ ನಿರ್ಮಾಣ ಹಾಗೂ ಅವುಗಳ ನಿರ್ಮಾಣದ ಗುತ್ತಿಗೆದಾರನ ಬಗ್ಗೆ ವ್ಯಾಪಕ ಟೀಕೆ–ಟಿಪ್ಪಣಿ ವ್ಯಕ್ತವಾಗಿದ್ದವು. ಈ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್ ಸಿಂಹ, ಮಹಮದೀಯ ಶೈಲಿ ಹಾಗೂ ಗುಂಬಜ್ ಆಕಾರದ ಗೋಪುರಗಳ ನಿರ್ಮಿಸಲಾಗಿದೆ ಎಂದು ಗಂಭೀರ ಆರೋಪ ಮಾಡಿದ್ದಲ್ಲದೆ, ಅದನ್ನು ತಾವೇ ಒಡೆದು ಹಾಕುವುದಾಗಿ ಹೇಳಿದ್ದರು.

ಅದಕ್ಕೆ ಪ್ರತಿಕ್ರಿಯಿಸಿದ್ದ ಶಾಸಕ ರಾಮದಾಸ್ ಅವರು, ಅದು ಭಾರತೀಯ ಶೈಲಿಯ ಪಾರಂಪರಿಕ ವಿನ್ಯಾಸದ ಗೋಪುರಗಳಾಗಿದ್ದು, ಹಿಂದೂ ಧರ್ಮಕ್ಕೆ ಸೇರಿದ ಗುತ್ತಿಗೆದಾರರೇ ಕಾಮಗಾರಿ ಮಾಡುತ್ತಿದ್ದಾರೆ. ಅದನ್ನು ಪರಿಶೀಲಿಸಲು ಪಾರಂಪರಿಕ ತಜ್ಞರ ಸಮಿತಿ ರಚಿಸಲಿ. ವಿನ್ಯಾಸ ಬದಲಿಸಬೇಕೆಂದು ಸಲಹೆ ನೀಡಿದಲ್ಲಿ ಅದರಂತೆ ಕ್ರಮ ವಹಿಸಲು ಸಿದ್ಧ ಎಂದು ತಿಳಿಸಿದರು. ಈ ವಿವಾದದಿಂದ ಬೇಸರಗೊಂಡ ಎಸ್.ಎ.ರಾಮದಾಸ್ ಅವರು ಬುಧವಾರ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರನ್ನು ಭೇಟಿ ಮಾಡಿ, ವಿವಾದದ ಬಗ್ಗೆ ವಿವರಿಸಿದ್ದರಲ್ಲದೇ, ತಜ್ಞರ ಸಮಿತಿ ರಚಿಸಿ ಪರಿಶೀಲನೆ ನಡೆಸಿ, ಒಂದು ವೇಳೆ ನಿರ್ಮಿಸಿರುವ ಬಸ್ ಶೆಲ್ಟರ್ ವಿನ್ಯಾಸದಲ್ಲಿ ತಪ್ಪಿದ್ದರೆ ಸರಿಪಡಿಸಲು ತಾವು ಸಿದ್ಧರಿರುವುದಾಗಿ ತಿಳಿಸಿದ್ದರು.

ಪೊಲೀಸರ ಭೇಟಿ: ವಿವಾದ ತಾರಕಕ್ಕೇರುತ್ತಿದ್ದಂತೆಯೇ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಡಿಸಿಪಿ ಪ್ರದೀಪ್ ಗುಂಟಿ, ಕೆ.ಆರ್.ಉಪ ವಿಭಾಗದ ಎಸಿಪಿ ಎಸ್.ಇ.ಗಂಗಾಧರ ಸ್ವಾಮಿ ಹಾಗೂ ಕೆ.ಆರ್. ಠಾಣೆ ಇನ್ಸ್‌ಪೆಕ್ಟರ್ ಮಹೇಶ್‌ರೊಂದಿಗೆ ಬುಧವಾರ ಊಟಿ ರಸ್ತೆಯ ಪ್ರಯಾಣಿಕರ ತಂಗುದಾಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಮುನ್ನೆಚ್ಚರಿಕೆಯಾಗಿ ಇಲ್ಲಿ ಪೊಲೀಸ್ ಕಾವಲು ಹಾಕಲಾಗಿದೆ.

ತಂಗುದಾಣ ತೆರವಿಗೆ ಸೂಚನೆ: ಅಲ್ಲದೆ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (NHAI)ದ ಯೋಜನೆ ನಿರ್ದೇಶಕರು ಮಂಗಳವಾರ ಸಂಜೆಯೇ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ನೋಟಿಸ್ ಜಾರಿ ಮಾಡಿದ್ದು, ಪ್ರಯಾಣಿಕರ ತಂಗುದಾಣ ಸೇರಿದಂತೆ ಮೈಸೂರು–ನಂಜನಗೂಡು ಹೆದ್ದಾರಿಯಲ್ಲಿ ತಲೆ ಎತ್ತಿರುವ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವಂತೆ ಸೂಚನೆ ನೀಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ 766ನಲ್ಲಿರುವ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಬೇಕಾ ಗಿರುವುದು ಮೈಸೂರು ಮಹಾನಗರ ಪಾಲಿಕೆ ಮತ್ತು ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ (KRIDL) ಎರಡೂ ಸಂಸ್ಥೆಗಳ ಜವಾಬ್ದಾರಿಯಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರು ನೀಡಿರುವ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ನೋಟಿಸ್ ತಲುಪಿಲ್ಲ: ಆದರೆ, ನಮಗೆ ಈವರೆಗೆ ಪ್ರಾಧಿಕಾರದಿಂದ ಯಾವುದೇ ನೋಟಿಸ್ ಪ್ರತಿ ತಲುಪಿಲ್ಲ. ಒಂದು ವೇಳೆ ನೋಟಿಸ್ ಬಂದಲ್ಲಿ ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸುತ್ತೇವೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾತ ರೆಡ್ಡಿ ಅವರು ಪ್ರತಿಕ್ರಿಯಿಸಿದ್ದಾರೆ.

ವಿದ್ಯಾರ್ಥಿಗಳ ಬೇಸರ: ಈ ಮಧ್ಯೆ 'ಗುಂಬಜ್' ವಿಷಯವನ್ನು ಮುಂದಿಟ್ಟುಕೊಂಡು ಗೊಂದಲ ಮೂಡಿಸುತ್ತಿರುವ ಜನಪ್ರತಿನಿಧಿಗಳ ಬಗ್ಗೆ ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರಿಗೆ ಆಶ್ರಯವಾಗಿರುವ ಇಂತಹ ತಂಗುದಾಣವನ್ನು ಮುಂದಿಟ್ಟುಕೊಂಡು ಕೆಲವು ಮುಖಂಡರು ರಾಜಕೀಯ ಮಾಡುತ್ತಿದ್ದಾರೆ ಎಂದು ಅಸಮಧಾನ ವ್ಯಕ್ತಪಡಿಸಿದ್ದಾರೆ.

ಹೋರಾಟದಿಂದ ಹಿಂದೆ ಸರಿಯಲ್ಲ

ತಕರಾರಿಲ್ಲ. ಅವು ಮಹಾರಾಜರ ಪರಂಪರೆಗೆ ಪೂರಕವಾಗಿರಬೇಕು. ಗುಂಬಜ್‌ಗೂ ಇಂಡೋ ಸಾರ್ಸನಿಕ್ ಕಲೆಗೂ ತುಂಬಾ ವ್ಯತ್ಯಾಸವಿದೆ. ಅದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು. ಯಾರು ಏನೇ ಹೇಳಿದರೂ ಹಿಂದೆ ಸರಿಯುವ ಮಾತೇ ಇಲ್ಲ. ನಾಲ್ಕು ವರ್ಷಗಳ ಸತತ ಪ್ರಯತ್ನದಿಂದ ಟಿಪ್ಪು ಎಕ್ಸ್‌ಪ್ರೆಸ್ ರೈಲಿನ ಹೆಸರು ಬದಲಿಸಿದ್ದೇನೆ. ಮಹಿಷಾ ದಸರಾ ಮಟ್ಟ ಹಾಕಿದ್ದೇನೆ. ಬಸ್ ಶೆಲ್ಟರ್ ವಿಚಾರದಲ್ಲೂ ನನ್ನ ನಿಲುವು ಬದಲಾಗುವುದಿಲ್ಲ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಕೆ.ಆರ್.ಐ.ಡಿ.ಎಲ್. ನಿರ್ಣಯಕ್ಕೆ ಬದ್ಧನಾಗಿದ್ದೇನೆ. ಅವರು ಕೊಟ್ಟ ಮಾದರಿಯಂತೆ ಬಸ್ ತಂಗುದಾಣ ನಿರ್ಮಿಸಲು ನನ್ನ ಅಭ್ಯಂತರವಿಲ್ಲ ಎಂದ ಪ್ರತಾಪ್ ಸಿಂಹ, ಹೆದ್ದಾರಿಯಲ್ಲಿ ಯಾವುದೇ ನಿರ್ಮಾಣ ವಾಗಬೇಕಾದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅನುಮತಿ ಪಡೆಯಬೇಕು ಎಂದರು. ನಾನು ರಿಯಲ್ ಎಸ್ಟೇಟ್ ಮಾಡಿ ಹಣ ಗಳಿಸಲು ಸಂಸದನಾಗಿರುವ ರಾಜಕಾರಣಿಯಲ್ಲ. ಅಭಿವೃದ್ಧಿ ಕೆಲಸ ಮಾಡಲೆಂದು ಸಂಸದನಾದವನು. ಇದು ಸಾರ್ವಜನಿಕರ ತೆರಿಗೆ ಹಣದಿಂದ ಮಾಡಿರುವ ನಿರ್ಮಾಣ. ಯಾವ ಜನಪ್ರತಿನಿಧಿಯೂ 1 ರೂ. ಖರ್ಚು ಮಾಡಿಲ್ಲ. ಅನಧಿಕೃತವಾಗಿ ಯಾವ ನಿರ್ಮಾಣವೂ ಆಗಬಾರದು. ಈ ವಿಷಯದಲ್ಲಿ ಯಾರು ಏನೇ ಹೇಳಲಿ, ಹೋರಾಟದಿಂದ ನಾನು ಹಿಂದೆ ಸರಿಯುವುದಿಲ್ಲ ಎಂದು ಪ್ರತಾಪ್ ಸಿಂಹ ತಿಳಿಸಿದರು.

ನಾನು ತಪ್ಪು ಮಾಡಿದ್ದರೆ ಶಿಕ್ಷೆ ಕೊಡಲಿ

ಪಾರ್ಕ್, ಸ್ಮಶಾನ ಅಭಿವೃದ್ಧಿ ನನ್ನ ಕನಸು. ಸಾಯುವ ಮುನ್ನ ಸಾಧನೆ ಮಾಡಬೇಕೆಂಬುದೇ ನನ್ನ ಗುರಿ. 30 ವರ್ಷಗಳಲ್ಲಿ ಕಿರುಕುಳ ನೀಡಿದ್ದರಿಂದ ಬಿಜೆಪಿಯ 11 ಶಾಸಕರು ಬೇರೆ ಪಕ್ಷಕ್ಕೆ ಹೊರಟು ಹೋದರು. ಉಳಿದಿರುವವನು ನಾನೊಬ್ಬನೇ. ಇರುವವರೆಗೆ ಕ್ಷೇತ್ರದ ಜನರಿಗೆ ಒಳ್ಳೆಯ ಕೆಲಸ ಮಾಡಲು ಬಿಡಿ. ಬಸ್ ಶೆಲ್ಟರ್ ವಿಷಯದಲ್ಲಿ ಏನನ್ನೂ ಕೇಳಬೇಡಿ. ದಯಮಾಡಿ ನನ್ನನ್ನು ಬಿಟ್ಟು ಬಿಡಿ, ಪ್ಲೀಸ್... ಎಂದು ಹೇಳಿ ರಾಮದಾಸ್ ಗದ್ಗದಿತರಾಗಿ ಮಾಧ್ಯಮ ಪ್ರತಿನಿಧಿಗಳಿಗೆ ಕೈಮುಗಿದರು. ಬಸ್ ಶೆಲ್ಟರ್ ವಿಚಾರದಲ್ಲಿ ಅಪಪ್ರಚಾರ ಮಾಡುತ್ತಿರುವ ಸಾಮಾಜಿಕ ಜಾಲತಾಣಗಳ ವಿರುದ್ಧವೂ ಕ್ರಮ ಕೈಗೊಳ್ಳುವಂತೆ ಸಿಎಂಗೆ ನೀಡಿರುವ ಮನವಿ ಪತ್ರದಲ್ಲಿ ಕೇಳಿಕೊಂಡಿದ್ದೇನೆ. ಕ್ಷೇತ್ರದ ಜನರಿಗಾಗಿ ಕೆಲಸ ಮಾಡಬೇಕೆಂಬುದೇ ನನ್ನ ಉದ್ದೇಶವಾಗಿರುವುದರಿಂದ ನನ್ನನ್ನು ಬಿಟ್ಟು ಬಿಡಿ ಎಂದರು.

ಮುಡಾ ಬಡಾವಣೆಗಳ ಮೂಲೆ, ಮಧ್ಯಂತರ ನಿವೇಶನ, ಮನೆಗಳ ಹರಾಜು ಪ್ರಕ್ರಿಯೆ ರದ್ದುಗೊಳಿಸಿ

● ಎಂಎಲ್‌ಸಿ ಸಿ.ಎನ್.ಮಂಜೇಗೌಡ ಒತ್ತಾಯ ● ಮುಡಾ ಸಭೆಯಲ್ಲಿ ಅನುಮೋದನೆ ಪಡೆಯದೇ ಹರಾಜು ಸರಿಯಲ್ಲ

ಮೈಸೂರು,ನ.17(ಪಿಎಂ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿ ಮೂಲೆ, ಮಧ್ಯಂತರ ನಿವೇಶನ ಹಾಗೂ ಮನೆಗಳ ಹರಾಜು ಪ್ರಕ್ರಿಯೆ ರದ್ದುಗೊಳಿಸಬೇಕು. ಈ ಸಂಬಂಧ ಮುಡಾ ಆಯುಕ್ತರಿಗೂ ಪತ್ರ ಬರೆದಿದ್ದೇನೆ. ಮುಡಾ ಸಭೆಯಲ್ಲಿ ಅನುಮೋದನೆ ಪಡೆಯದೇ ಹರಾಜು ಪ್ರಕ್ರಿಯೆಗೆ ಮುಂದಾಗಿರುವುದು ಸರಿಯಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.



ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹರಾಜು ಪ್ರಕ್ರಿಯೆ ಸಂಬಂಧ ನ.15ರಂದು ಪ್ರಕಟಣೆ ನೀಡಲಾಗಿದೆ. ಮುಡಾ ಹೊಸ ಬಡಾವಣೆಗಳನ್ನು ನಿರ್ಮಿಸುತ್ತಿಲ್ಲ. ಇದೀಗ ಇರುವ ನಿವೇಶನಗಳನ್ನು ಹರಾಜು ಹಾಕುವ ಮೂಲಕ ಮುಡಾ ಮುಳುಗಿಸುವ ಕೆಲಸ ನಡೆಯುತ್ತಿದೆ ಎಂದು ದೂರಿದರು.

ಮುಡಾ ಆಸ್ತಿ ಮಾರಾಟ ಪ್ರಕ್ರಿಯೆಗೆ ಮುಡಾ ಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳಬೇಕು. ಆದರೆ ಯಾವುದೇ ಅನುಮೋದನೆ ಪಡೆಯದೇ ಹರಾಜು ಪ್ರಕ್ರಿಯೆ ಮಾಡಲಾಗುತ್ತಿದೆ. ಮುಡಾ ಸಭೆ ನಡೆದು 5 ತಿಂಗಳು ಕಳೆದಿದ್ದು, ಆದಷ್ಟು ಬೇಗ ಸಭೆ ನಡೆಸಬೇಕು ಎಂದು ಒತ್ತಾಯಿಸುವುದಾಗಿ ತಿಳಿಸಿದರು.

ಮುಡಾ ಅಭಿವೃದ್ಧಿಪಡಿಸಿದ ಬಡಾವಣೆಗಳಲ್ಲಿ ಮೂಲಭೂತ ಸೌಲಭ್ಯ ಪೂರ್ಣಗೊಳಿಸುವ ಪೂರ್ವದಲ್ಲಿ ನಗರಪಾಲಿಕೆಗೆ ಹಸ್ತಾಂತರಿಸಿರುವ ಬಡಾವಣೆಗಳಲ್ಲಿ ಬಾಕಿ ಕಾಮಗಾರಿಗಳನ್ನು ಒಂದು ಬಾರಿ ಕ್ರಮವಾಗಿ (ಓಟಿಎಂ) ಮುಡಾದ ಅಭಿವೃದ್ಧಿ ನಿಧಿ–1ರಲ್ಲಿ ಕ್ರೂಢೀಕರಿಸುವ ಸಂಪನ್ಮೂಲ ಬಳಸಿಕೊಳ್ಳಲು ಸರ್ಕಾರ ಅನುಮೋದನೆ ಪಡೆದು, 377 ಕೋಟಿ ರೂ.ಗಳನ್ನು ಬಳಸಿಕೊಳ್ಳಲಾಗುತ್ತಿದೆ. ಇದು ಸರ್ಕಾರದ ಹಣವಲ್ಲ. ಸಾರ್ವಜನಿಕರಿಂದ ಮುಡಾಗೆ ಸಂದಾಯವಾಗಿರುವ ಆದಾಯವಾಗಿದ್ದು, ಅದನ್ನು ಈ ರೀತಿಯಲ್ಲಿ ಪಾಲಿಕೆಗೆ ಹಸ್ತಾಂತರಿಸಿದ ಬಡಾವಣೆಗಳಲ್ಲಿ ಕಾಮಗಾರಿ ನಡೆಸಲು ಬಳಸುತ್ತಿರುವುದು ಸರಿಯಲ್ಲ ಎಂದು ಸಿ.ಎನ್.ಮಂಜೇಗೌಡ ಪ್ರತಿಪಾದಿಸಿದರು.

ಮಂತ್ರಿಗಳ ನೆಂಟರಿಗೆ ಕಾಮಗಾರಿ ಗುತ್ತಿಗೆ: ಓಟಿಎಂ ಅಡಿಯಲ್ಲಿ ಅಭಿವೃದ್ಧಿ ನಿಧಿ–1ರ ಹಣ ಬಳಸಿಕೊಂಡು ನಡೆಸುತ್ತಿರುವ ಕಾಮಗಾರಿಗಳ ಗುತ್ತಿಗೆಯನ್ನು ಮಂತ್ರಿಗಳು ಹಾಗೂ ಉನ್ನತಮಟ್ಟದ ಅಧಿಕಾರಿಗಳ ನೆಂಟರಿಷ್ಟರಿಗೆ ನೀಡಲಾಗಿದೆ. ಜೊತೆಗೆ ಕಳಪೆ ಕಾಮಗಾರಿ ನಡೆದಿವೆ. ಆ ಮೂಲಕ ಕಾಮಗಾರಿಗಳನ್ನು ಗುಣಮಟ್ಟದಲ್ಲಿ ಮಾಡದೇ ಸಾರ್ವಜನಿಕರ ಹಣ ಪೋಲು ಮಾಡಲಾಗುತ್ತಿದೆ. ಕೋಟ್ಯಾಂತರ ರೂ. ಮೊತ್ತದ ಕಾಮಗಾರಿಗಳನ್ನು ನಗರಾಭಿವೃದ್ಧಿ ಸಚಿವರ ಕಡೆಯ ಒಬ್ಬರಿಗೆ ಗುತ್ತಿಗೆ ನೀಡಿರುವುದು ನನ್ನ ಗಮನಕ್ಕೆ ಬಂದಿದೆ. –ಸಿ.ಎನ್.ಮಂಜೇಗೌಡ, ವಿಧಾನಪರಿಷತ್ ಸದಸ್ಯ

ಈಗಾಗಲೇ ಮುಡಾದಲ್ಲಿ ಆರ್ಥಿಕ ಸಂಪನ್ಮೂಲ ಕಡಿಮೆಯಾಗುತ್ತಿದ್ದು, ಇದೀಗ ಅಭಿವೃದ್ಧಿ ನಿಧಿ–1ರ ಆರ್ಥಿಕ ಸಂಪನ್ಮೂಲ ಬಳಕೆ ಮಾಡುತ್ತಿರುವುದು ತಪ್ಪು. ಇದರಿಂದ ಮುಡಾ ಆರ್ಥಿಕ ಸಂಪನ್ಮೂಲ ಬರಿದಾಗಲಿದೆ. ಪಾಲಿಕೆಗೆ ಹಸ್ತಾಂತರಿಸಿದಾಗ ಹಾಕಿದ್ದ ಡಾಂಬರು ಬಡಾವಣೆಗಳ ರಸ್ತೆಗಳಲ್ಲಿ ಕಿತ್ತು ಬಂದಿವೆ. ರಸ್ತೆಗಳಲ್ಲಿ ದೊಡ್ಡ ಹೊಂಡಗಳು ಬಿದ್ದಿವೆ. ನಿವೇಶನಗಳನ್ನು ಹಂಚಿ ಅಲ್ಲಿನ ನಿವಾಸಿಗಳಿಂದ ವಿವಿಧ ರೂಪದಲ್ಲಿ ಆದಾಯ ಸಂಗ್ರಹಿಸಿದರೂ ಅವರಿಗೆ ಮೂಲಭೂತ ಸೌಲಭ್ಯ ಸಮರ್ಪಕವಾಗಿ ಕಲ್ಪಿಸಿಲ್ಲ ಎಂದು ದೂರಿದರು.

ಪ್ರತಾಪ್ ಸಿಂಹ ಪುಂಗಿದಾಸ: ನಂಜನಗೂಡು ರಸ್ತೆ ಬಸ್ ತಂಗುದಾಣದ ವಿವಾದ ಸಂಬಂಧ ಪ್ರತಿಕ್ರಿಯಿಸಿ, ಸಂಸದ ಪ್ರತಾಪ್ ಸಿಂಹ ಪುಂಗಿದಾಸ ಎಂದು ಈ ಮೊದಲೇ ಹೇಳಿದ್ದೆ. ಚುನಾವಣೆ ವರ್ಷದಲ್ಲಿ ಗಿಮಿಕ್ ರಾಜಕಾರಣ ಮಾಡಬಾರದು. ಪ್ರತಾಪ್ ಸಿಂಹರ ಈ ವರ್ತನೆಯಿಂದ ಪ್ರಧಾನಿ ನರೇಂದ್ರಮೋದಿ ಮತ್ತು ಬಿಜೆಪಿ ಹೆಸರು ಕೆಡುತ್ತದೆ. ಪ್ರತಾಪ್‌ಸಿಂಹ ಈ ರೀತಿ ವರ್ತಿಸುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಬೆಟ್ಟಕ್ಕೆ ಹೆಚ್‌ಡಿಕೆ: ಜೆಡಿಎಸ್ ಪಂಚರತ್ನ ಕಾರ್ಯಕ್ರಮದ ಹಿನ್ನೆಲೆ ನಾಳೆ (ನ.18) ಚಾಮುಂಡಿಬೆಟ್ಟದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಕಾರ್ಯಕ್ರಮ ನಡೆಯುವ ಮುಳುಬಾಗಿಲಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಜಿಟಿಡಿ ಪಕ್ಷದಲ್ಲಿ ಸಕ್ರಿಯರು: ಶಾಸಕ ಜಿ.ಟಿ.ದೇವೇಗೌಡರು ಪಕ್ಷದಲ್ಲಿ ಸಕ್ರಿಯವಾಗಿದ್ದಾರೆಯೇ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಜಿ.ಟಿ.ದೇವೇಗೌಡರು ಜೆಡಿಎಸ್‌ನಲ್ಲಿ ಈಗ ಸಕ್ರಿಯವಾಗಿದ್ದಾರೆ. ಅವರ ಮನೆ ಮೇಲೆ ಜೆಡಿಎಸ್ ಬಾವುಟ ಹಾರುತ್ತಿದೆ ಎಂದರು.

ಮಾಧ್ಯಮ ನಿರ್ಬಂಧ ಸರಿಯಲ್ಲ: ಮುಡಾ ಸಭೆಗಳಿಗೆ ಮಾಧ್ಯಮ ನಿರ್ಬಂಧ ಏಕೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಮಾಧ್ಯಮದವರಿಗೆ ಅವಕಾಶ ನೀಡಬೇಕು ಎಂದು ಆಯುಕ್ತರಿಗೆ ಪತ್ರ ಬರೆಯುತ್ತೇನೆ. ಏಕೆಂದರೆ ಪಾರದರ್ಶಕತೆ ಇರಬೇಕು. ಮುಡಾದ ಯಾವುದೇ ಆಕ್ಟ್‌ನಲ್ಲೂ ಮಾಧ್ಯಮದವರ ಬರಬಾರದು ಎಂದಿಲ್ಲ ಎಂದು ಎಂಎಲ್‌ಸಿ ಮಂಜೇಗೌಡ ತಿಳಿಸಿದರು. ವಕೀಲ ಎನ್.ಮಹದೇವಸ್ವಾಮಿ ಸೇರಿದಂತೆ ಹಲವು ಮುಖಂಡರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮುಡಾದಲ್ಲಿ ಅವ್ಯವಹಾರ

"ಮುಡಾ ಆಡಳಿತದಲ್ಲಿ ಬಹಳ ಸುಧಾರಣೆ ಆಗಬೇಕು. ಇನ್ನು ಕೆಲವು ದಾಖಲಾತಿ ಕ್ರೂಢೀಕರಿಸುತ್ತಿದ್ದೇನೆ. ಸಿಎ ನಿವೇಶನಗಳ ಹಂಚಿಕೆಯಲ್ಲಿ ನಡೆದಿರುವ ಅವ್ಯವಹಾರ, ಸಿಎ ನಿವೇಶನಗಳನ್ನು ಕಾಯ್ದಿರಿಸಿದ್ದ ಉದ್ದೇಶದ ಹೊರತಾಗಿ ಬೇರೆ ಉದ್ದೇಶಕ್ಕೆ ಬಳಸಿರುವ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದೇನೆ. ಇದೆಲ್ಲವನ್ನೂ ಶೀಘ್ರದಲ್ಲಿ ದಾಖಲಾತಿ ಸಹಿತ ಮಾಧ್ಯಮಗಳಿಗೆ ಕೊಡುತ್ತೇನೆ.

–ಸಿ.ಎನ್.ಮಂಜೇಗೌಡ, ಎಂಎಲ್‌ಸಿ

ಸಂಸದ ಶ್ರೀನಿವಾಸಪ್ರಸಾದ್ ವರ್ತನೆಗೆ ತಿ.ನರಸೀಪುರ ಪುರಸಭಾ ಸದಸ್ಯ ಅರ್ಜುನ್ ರಮೇಶ್ ಆಕ್ಷೇಪ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿ.ನರಸೀಪುರ ಪುರಸಭಾ ಸದಸ್ಯ ಅರ್ಜುನ್ ರಮೇಶ್ ಮಾತನಾಡಿದರು. ಚಿತ್ರದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಇದ್ದಾರೆ.


ಮೈಸೂರು, ನ.17(ಆರ್‌ಕೆಬಿ)– ತಿ.ನರಸೀಪುರ ಪಟ್ಟಣದ ತಲಕಾಡು ಮುಖ್ಯ ರಸ್ತೆಯಲ್ಲಿ ಬುಧವಾರ ಲೋಕೋಪಯೋಗಿ ಇಲಾಖೆಯ ಉಪವಿಭಾಗದ ಕಚೇರಿ ಮತ್ತು ಅತೀ ಗಣ್ಯರ ಪ್ರವಾಸಿ ಮಂದಿರ ಅತಿಥಿಗೃಹದ ಉದ್ಘಾಟನಾ ಸಮಾರಂಭದ ವೇಳೆ ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು, ಮಾಜಿ ಎಂಎಲ್‌ಸಿ ಸಿ.ರಮೇಶ್ ಅವರನ್ನು ನಿಂದಿಸಿರುವ ಪ್ರಕರಣಕ್ಕೆ ಸಂಬಂಧಿಸದಿಂತೆ ಸಿ.ರಮೇಶ್ ಅವರ ಪುತ್ರ, ತಿ.ನರಸೀಪುರ ಪುರಸಭೆ ಸದಸ್ಯ ಅರ್ಜುನ್ ರಮೇಶ್, ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ ವರ್ತನೆಯನ್ನು ಖಂಡಿಸುವುದಾಗಿ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಎಂಎಲ್‌ಸಿ ಸಿ.ರಮೇಶ್ ಗೌರವಾನ್ವಿತರು. ಅವರನ್ನು ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು, ಈತನನ್ನು ಆಚೆ ಕಳಿಸಿ, ಎದ್ದು ಹೋಗಯ್ಯ, ನೀನೇನು ಎಂಬುದು ನನಗೆ ಗೊತ್ತು ಎಂದು ಬಹಿರಂಗವಾಗಿ ಹೇಳುವ ಮೂಲಕ ಮಾಜಿ ಶಾಸಕರ ಗೌರವಕ್ಕೆ ಕುಂದುಂಟು ಮಾಡಿದ್ದಾರೆ. ಶ್ರೀನಿವಾಸಪ್ರಸಾದ್ ಒಬ್ಬರಿಗೆ ಗೌರವ ಸಿಕ್ಕಿದರೆ ಸಾಕೇ? ರಮೇಶ್ ಅವರೂ ಸಾಕಷ್ಟು ವರ್ಷ ರಾಜಕಾರಣದಲ್ಲಿ ಸಂಸದರಷ್ಟೇ ಸಮಾನರಾಗಿ, ಶಾಸಕರಾಗಿ, ವಿವಿಧ ಸರ್ಕಾರಿ ನಿಗಮ, ಮಂಡಳಿಗಳಲ್ಲಿ ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸಿದವರು. ಅವರ ಬಗ್ಗೆ ಏಕಿಷ್ಟು ಅಗೌರವದಿಂದ ವರ್ತಿಸಿದರು ಎಂದು ಪ್ರಶ್ನಿಸಿದರು.

ಸರ್ಕಾರಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಮಾಜಿ ಶಾಸಕ ಸಿ.ರಮೇಶ್ ಮತ್ತು ಆ ಭಾಗದ ಪುರಸಭಾ ಸದಸ್ಯನಾದ ನಾನು ಸೇರಿದಂತೆ ಇಬ್ಬರ ಹೆಸರನ್ನು ಒಂದೇ ಆಹ್ವಾನ ಪತ್ರಿಕೆಯಲ್ಲಿ ಬರೆದು ನೀಡಿದ್ದಾರೆ. ಇದು ಶಿಷ್ಟಾಚಾರದ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಬಗ್ಗೆ ಪ್ರಶ್ನಿಸಿದರೆ ಆಹ್ವಾನಪತ್ರಿಕೆ ಕೊರತೆ ಇತ್ತು ಎಂಬ ಉತ್ತರವನ್ನು ಅಧಿಕಾರಿಗಳು ನೀಡಿದ್ದಾರೆ. ಹಾಗಾದರೆ ಸರ್ಕಾರಕ್ಕೆ ಆಹ್ವಾನ ಪತ್ರಿಕೆ ಮುದ್ರಿಸಲಾಗದಷ್ಟು ಬರ ಬಂದಿದೆಯೇ ಎಂದು ಪ್ರಶ್ನಿಸಿದರು. ಅಲ್ಲದೆ ಪುರಸಭಾ ಸದಸ್ಯನಾದ ನನ್ನ ಹೆಸರನ್ನು ಕಲ್ಲಿನಲ್ಲಿ ಹಾಕಿಸಿಲ್ಲ. ಇದನ್ನು ಪ್ರಶ್ನಿಸಿದ ನಂತರ ಸ್ಟಿಕ್ಕರ್‌ನಲ್ಲಿ ನನ್ನ ಹೆಸರು ಹಾಕಿದ್ದಾರೆ. ಮಾಜಿ ಶಾಸಕ, ಗೌರವಾನ್ವಿತ ಪುರಸಭಾ ಸದಸ್ಯರಿಗೆ ಒಂದೇ ಆಹ್ವಾನ ಪತ್ರಿಕೆ ನೀಡುವ ಮೂಲಕ ಶಿಷ್ಟಾಚಾರ ಉಲ್ಲಂಘಿಸಿರುವ ಎಇಇ, ಎಇ ವಿರುದ್ಧ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳದಿದ್ದರೆ, ಸೋಮವಾರದಿಂದ ನನ್ನ ವಾರ್ಡ್‌ನ ಪ್ರವಾಸಿಮಂದಿರದ ಎದುರು ಅನಿರ್ದಿಷ್ಟ ಕಾಲ ಪ್ರತಿಭಟನೆ ನಡೆಸುವುದಾಗಿ ಅರ್ಜುನ್ ರಮೇಶ್ ಎಚ್ಚರಿಕೆ ನೀಡಿದರು.

ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಹಿಂದಿನಿಂದಲೂ ಎಡಗೈ ಪಂಗಡದವರನ್ನು ತುಳಿಯುತ್ತಲೇ ಬಂದಿದ್ದಾರೆ. ಎಡಗೈ ಪಂಗಡದವರನ್ನು ಇದುವರೆಗೆ ಯಾರನ್ನಾದರೂ ಬೆಳೆಸಿದ್ದಾರೆಯೇ ಎಂದು ಪ್ರಶ್ನಿಸಿದ ಅವರು, ಹೀಗಾಗಿಯೇ ಸದಾಶಿವ ಆಯೋಗದ ವರದಿ ಜಾರಿಯಾಗಬೇಕು ಎಂಬ ಒತ್ತಾಯಗಳು ಹೆಚ್ಚುತ್ತಿವೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಾಬು ಜಗಜೀವನರಾಂ ಸಂಘದ ಪುಟ್ಟಸ್ವಾಮಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ನಿಲುಗಡೆ



ಮೈಸೂರು, ನ.17– ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ನವೆಂಬರ್ 19ರಂದು ಶನಿವಾರ ಬೆಳಗ್ಗೆ 10ರಿಂದ ಸಂಜೆ 5.30 ಗಂಟೆವರೆಗೆ ನಂಜುಮಳಿಗೆ ವೃತ್ತ, ಲಕ್ಷ್ಮೀಪುರಂ, ವಿದ್ಯಾರಣ್ಯಪುರಂ, ನಾರಾಯಣ ಶಾಸ್ತ್ರಿ ರಸ್ತೆ, ಕಾಕರವಾಡಿ, ನಾಲಾ ಬೀದಿ, ಹೊಸಕೇರಿ, ಅಗ್ರಹಾರ, ತ್ಯಾಗರಾಜ ರಸ್ತೆ, ಇಂಡಸ್ಟ್ರೀಯಲ್ ಸಬರ್ಬ್, ವಿಶ್ವೇಶ್ವರಯ್ಯ ನಗರ, ಕೃಷ್ಣಮೂರ್ತಿಪುರಂ, ನಾಚನಹಳ್ಳಿ ಪಾಳ್ಯ, ಗುಂಡೂರಾವ್ ನಗರ, ಕನಕಗಿರಿ, ಅಶೋಕಪುರಂ, ಸರಸ್ವತಿಪುರಂ, ರೈಲ್ವೆ ಕಾರ್ಯಾಗಾರ, ಮಹದೇವಪುರ, ರಮಾಬಾಯಿನಗರ, ಶ್ರೀರಾಂಪುರ, ಜಯನಗರ, ಕೆ.ಜಿ. ಕೊಪ್ಪಲ್, ಶಿವಪುರ, ದೇವಲಾಪುರ ಹೋಬಳಿ, ಆದಿಚುಂಚನಗಿರಿ ರಸ್ತೆ, ಜೆ.ಪಿ.ನಗರ, ಶ್ರೀರಾಂಪುರ 2ನೇ ಹಂತ, ರಮಾಬಾಯಿನಗರ, ಮಹದೇವಪುರ, ಜಯನಗರ, ಪರಸಯ್ಯನಹುಂಡಿ, ಶಿವಪುರ, ಕುವೆಂಪುನಗರ 'ಕೆ' ಬ್ಲಾಕ್, ಅಪೋಲೊ ಆಸ್ಪತ್ರೆಯ ಸುತ್ತ–ಮುತ್ತಲಿನ ಪ್ರದೇಶಗಳು, ಗೊರೂರು ಗ್ರಾಮ, ಕಳಲವಾಡಿ, ಕೋಟೆಹುಂಡಿ, ಯಡಹಳ್ಳಿ, ರಾಯನಕೆರೆ, ಸರಸ್ವತಿಪುರಂ 1ನೇ ಮುಖ್ಯ ರಸ್ತೆಯಿಂದ 6ನೇ ಮುಖ್ಯರಸ್ತೆ ಭಾಗಶಃ, ಕೆ.ಜಿ.ಕೊಪ್ಪಲು ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹಾಗೆಯೇ ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯಲ್ಲಿ ನಿರ್ವಹಣಾ ಕೆಲಸದ ನಿಮಿತ್ತ ನವೆಂಬರ್ 19ರ ಶನಿವಾರ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಶ್ರೀರಾಂಪುರ 2ನೇ ಹಂತ, ರಮಾಭಾಯಿನಗರ, ಮಹದೇವಪುರ, ಜಯನಗರ 1ರಿಂದ 20ನೇ ಕ್ರಾಸ್, ಪರಸಯ್ಯನಹುಂಡಿ, ಶಿವಪುರ, ಕುವೆಂಪುನಗರ ಕೆ ಬ್ಲಾಕ್, ಅಪೋಲೊ ಆಸ್ಪತ್ರೆಯ ಸುತ್ತಮುತ್ತಲಿನ ಪ್ರದೇಶಗಳು ಚಿಕ್ಕಹರದನಹಳ್ಳಿ, ಗೊರೂರು ಗ್ರಾಮ, ಕಳಲವಾಡಿ, ಕೋಟೆಹುಂಡಿ, ಯಡಹಳ್ಳಿ, ರಾಯನಕೆರೆ, ಸರಸ್ವತಿಪುರಂ 1ನೇ ಮುಖ್ಯರಸ್ತೆಯಿಂದ 6ನೇ ಮುಖ್ಯರಸ್ತೆ, ಭಾಗಶಃ ಕೆ.ಜಿ.ಕೊಪ್ಪಲು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.11.2022 ಶುಕ್ರವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮೀ, ನಕ್ಷತ್ರ : ಪೂಫ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಡಿ ಪೌಲ್ ಕಾಲೇಜು :** ಡಿಗ್ನೈಟ್ ಕಾರ್ಯಕ್ರಮ, ಭಾಗವಹಿಸುವವರು : ಎಕ್ಸೆಲ್ ಪಬ್ಲಿಕ್ ಶಾಲೆ ಪ್ರಾಂಶುಪಾಲ ಮ್ಯಾಥ್ಯೂ ಕೆ.ಜಿ., ಡಿ ಪೌಲ್ ಕಾಲೇಜು ಪ್ರಾಂಶುಪಾಲ ರೆ. ಡಾ. ಬೈಜು ಅಂತೋಣಿ, ಡಾ. ಶಿಜೋ ಅಂತೋಣಿ, ಹಣಕಾಸು ಅಧಿಕಾರಿ ಸ್ಯಾಂಟೋಯ್ ಕುರಿಯನ್, ಸ್ಥಳ: ಡಿಪೌಲ್ ಕಾಲೇಜು, ಬೆಳಗ್ಗೆ 9.30ಕ್ಕೆ.

■ **ವಿಶ್ವಮಾನವ ವಿದ್ಯಾನಿಕೇತನ ಟ್ರಸ್ಟ್ :** ವೆಬ್‌ಸೈಟ್ ಲೋಕಾರ್ಪಣೆ : ಡಾ. ಶ್ರೀಮತಿ ಜೆ.ಎಸ್. ಅರ್ಪಿತಾ ಸಿಂಹ, ಉಪಸ್ಥಿತರು : ಮಾರ್‌ಲ್ಯಾಬ್ಸ್ ಇನ್ಫೋಟೆಕ್ ಮುಖ್ಯಸ್ಥ ಕೆ.ಸಿ. ಚನ್ನಕೇಶವ, ಮಹಿಳಾ ಕೋ–ಆಪರೇಟಿವ್ ಬ್ಯಾಂಕ್ ಮಾಜಿ ನಿರ್ದೇಶಕಿ ಶ್ರೀಮತಿ ಹೆಚ್. ವಸಂತ ಮುನೀಶ್, ಸ್ಥಳ: ವಿಶ್ವಮಾನವ ವಿದ್ಯಾನಿಕೇತನ ಸಭಾಂಗಣ, ಬೆಳಗ್ಗೆ9.30ಕ್ಕೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ :** 61ನೇ ರಾಷ್ಟ್ರೀಯ ಔಷಧ ಸಪ್ತಾಹ ಪ್ರಯುಕ್ತ ಅಂತರ ಕಾಲೇಜು ಸ್ಪರ್ಧೆ, ಸ್ಥಳ: ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೈಗ್ರೇನ್ ಮತ್ತು ತಲೆನೋವಿನ ಬಗ್ಗೆ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಶ್ರೀ ಉತ್ತರಾದಿ ಮಠ :** ಪಂಡಿತ್ ಶ್ರೀ ಪ್ರದ್ಯುಮ್ನಾಚಾರ್ಯ ಜೋಷಿ ಅವರಿಂದ ಭಗವದ್ಗೀತೆ ಅಧ್ಯಾಯ–1 ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಸಂಜೆ 6.30ರಿಂದ.

■ **ಎಜುಕೇರ್ ಐಟಿಇಸ್, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು:** ಮಹಿಳಾ ಉದ್ಯೋಗ ಮೇಳ, ಉದ್ಘಾಟನೆ: ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ: ಶಾಸಕ ಎಲ್.ನಾಗೇಂದ್ರ, ವಸ್ತುಗಳ ಪ್ರದರ್ಶನ/ ಮಾರಾಟ ಉದ್ಘಾಟನೆ: ಆರ್–ಪ್ರೊಸೆಸ್ ಔಟ್ ಸೋರ್ಸಿಂಗ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್ ಅಧ್ಯಕ್ಷೆ ಸವಿತಾ ಮಲ್ಲಪ್ಪ, ಮುಖ್ಯ ಅತಿಥಿಗಳು: ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಕೋಟೆ, ಮೇಯರ್ ಶಿವಕುಮಾರ್, ಉಪಮೇಯರ್ ಡಾ. ಡಿ.ರೂಪಾ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮೈಲಾಕ್ ಅಧ್ಯಕ್ಷ ರಘು ಕೌಟಿಲ್ಯ, ಕೆಎಸ್‌ಡಿಸಿ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಡಿ.ಗೌಡ, ಎಫ್‌ಕೆಸಿಸಿಐ ಮಾಜಿ ಅಧ್ಯಕ್ಷ ಸುಧಾಕರ್ ಎಸ್.ಶೆಟ್ಟಿ, ಎಂಸಿಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಆರ್ಟಿಸ್ಟಿಕ್ಸ್ ಅಧ್ಯಕ್ಷೆ ರೂಪ ರಾಣಿ, ಸ್ಥಳ: ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಆವರಣ, ಬೆಳಗ್ಗೆ 10ರಿಂದ.

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ಮಂಡಲ ಪೂಜಾ ಮಹೋತ್ಸವ, ಮಹಾಗಣಪತಿ ಹೋಮ, ಉಷಪೂಜೆ, ಪಂಚಗವ್ಯಂ, ಪಂಚಕಂ, ಕಳಸಪೂಜಾ, ಶಿವೇಲಿ ವಾದ್ಯದೊಂದಿಗೆ ದೇವರಿಗೆ ಉತ್ಸವ, ಕಳಸಾಭಿಷೇಕ, ಉದಯಾಸ್ತಮಾನ ಪೂಜ, ದೀಪರಾಧನೆ, ಅತ್ತಾಳಪೂಜ, ಶ್ರೀ ಭೂತ ಬಲಿ ವಿಳಕ್ಕು, ಅನೇಕ ವಿಶೇಷ ಪೂಜೆಗಳು, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ, ಬೆಳಗ್ಗೆ 10ರಿಂದ.

■ **ಆಕಾಶವಾಣಿ ಮೈಸೂರು ಕೇಂದ್ರ :** ಕನ್ನಡ ಹಬ್ಬ ಕಾರ್ಯಕ್ರಮ, ಸ್ಥಳ: ಆಕಾಶವಾಣಿ ಆವರಣ, ಬೆಳಗ್ಗೆ 10ರಿಂದ.

■ **ಗೀತಾ ಶಿಶು ಶಿಕ್ಷಣ ಸಂಘ :** ಪ್ರೊ.ಬಿ.ಎಸ್.ಪಂಡಿತ್ ಸ್ಮಾರಕ ಸಂಗೀತಗೋಷ್ಠಿ, ಪಿಯಾನೋ ವಾದಕ ಅನಿಲ್ ಶ್ರೀನಿವಾಸನ್, ವೀಣಾ ಕಲಾವಿದೆ ಶ್ರೀಮತಿ ಜಯಂತಿ ಕುಮರೇಶ್, ತಬಲಾ ವಾದಕ ಪ್ರಮತ್ ಕಿರಣ್, ಘಟಂ ವಾದಕ ತಿರುಚ್ಚಿ ಕೃಷ್ಣ ಅವರಿಂದ ಜುಗಲ್‌ಬಂಧಿ ಕಾರ್ಯಕ್ರಮ, ಸ್ಥಳ: ಎಂ.ಗೋವಿಂದರಾವ್ ಸ್ಮಾರಕ ಸಭಾಂಗಣ, ಜೆಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯ, ಸಂಜೆ 6 ರಿಂದ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ :** ದತ್ತಿ ಕಾರ್ಯಕ್ರಮ, ಉದ್ಘಾಟನೆ : ವಿಶ್ರಾಂತ ಪ್ರಾಂಶುಪಾಲ ಡಾ. ಹೆಚ್. ಮುದ್ದುಮಲ್ಲೇಶ್, ಉಪನ್ಯಾಸ : ಡಾ. ಮೈಸೂರು ಕೃಷ್ಣಮೂರ್ತಿ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು.ಸದಾನಂದಯ್ಯ, ಸ್ಥಳ: ಜೆಎಸ್‌ಎಸ್ ವಿದ್ಯಾರ್ಥಿ ನಿಲಯ ಪ್ರಧಾನ ಭವನ, ವಿ.ವಿ. ರಸ್ತೆ, ಸಂಜೆ 7ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ– ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.00 ಕನ್ನಡ ಕಜ್ಜಾಯ, 9.30 ಗಾಂಧೀ ಸ್ಮೃತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ: ಉಮೇಶ್ ಎಸ್.ಎಸ್., 1.20 ಭಾವಗೀತೆ–ಪುತ್ತೂರು ನರಸಿಂಹ ನಾಯಕ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ. ರವೀಂದ್ರಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ ಸಾಹಿತ್ಯ ಮತ್ತು ನಿರೂಪಣೆ–ಪ್ರೊ. ಆರ್.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 4.00 ಮಹಿಳಾರಂಗ–ತಿಂಗಳ ಚರ್ಚೆ "ದುಡಿಯುವ ಮಹಿಳೆಗೆ ಮದುವೆ ವರವೇ? ಶಾಪವೇ?", ಭಾಗವಹಿಸುವವರು ಡಾ.ಎಸ್.ಡಿ.ಶಶಿಕಲಾ, ಡಾ.ಮೀರಾ, ಪತ್ರಕರ್ತ ಧಾತ್ರಿ ಭಾರದ್ವಾಜ್, 4.30 ವೃತ್ತಿ ಮಾಗದರ್ಶನ– ಬ್ಯಾಚಲರ್ ಆಫ್ ವೊಕೇಷನಲ್ ಕೋರ್ಸ್ ಇನ್ ಮೀಡಿಯಾ ಅಂಡ್ ಎಂಟರ್ ಟೈನ್ಮೆಂಟ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶ ಕುರಿತು ಡಾ.ರವಿರಾಜ್ ಐ. ವಡಿಗೇರಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ–ತೋಟಗಾರಿಕೆ ಬೆಳೆಗಳ ನಿರ್ವಹಣೆಯಲ್ಲಿನ ಅನುಭವ ಕುರಿತು ಎಂ.ಎಸ್. ಕುಮಾರಸ್ವಾಮಿ ಅವರೊಡನೆ ಸಂದರ್ಶನ, 7.45 ಮತದಾತಾ ಜಂಕ್ಷನ್–ಭಾರತ ಚುನಾವಣಾ ಅಯೋಗದ ಪ್ರಾಯೋಜಿತ ಕಾರ್ಯಕ್ರಮ, 8.00 ಯುವವಾಣಿ–ಯುವಪ್ರತಿಭೆ–ಶಾಸ್ತ್ರೀಯ ಸಂಗೀತ ಮತ್ತು ಭರತನಾಟ್ಯ ಕಲಾವಿದೆ, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿ ಎಂ.ಎಸ್. ಕೀರ್ತನಾ ಅವರೊಂದಿಗೆ ಮಾತುಕತೆ, 9.00 ರಸಮಂಜರಿ–ಒಂದು ಶಬ್ದ ಕಳೆದು ಹೋದರೆ–ವಿದ್ವಾನ್ ಉಮಾಕಾಂತ ಭಟ್ ಮೇಲುಕೋಟೆ ಅವರೊಂದಿಗೆ ಸಂದರ್ಶನ. ಸಂದರ್ಶಕರು–ದಿವಾಕರ ಹೆಗಡೆ, 10.00 ರಂಗಗೀತೆಗಳು–ಸಂಸಾರ ನೌಕೆ ಮತ್ತು ತಿಲೋತ್ತಮೆ ನಾಟಕದ ಹಾಡುಗಳು, 10.30 ಸವಿನೆನಪು

ಡಿ.19ರಿಂದ 10 ದಿನ ಬೆಳಗಾವಿಯಲ್ಲಿ ಅಧಿವೇಶನ

● ಸಂಪುಟ ಸಭೆಯಲ್ಲಿ ತೀರ್ಮಾನ ● ಶ್ರೀಗಂಧ ಬೆಳೆಯಲು ಮುಕ್ತ ಅವಕಾಶ
● ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ವಿಐಪಿ ಗೆಸ್ಟ್‌ಹೌಸ್



ಬೆಂಗಳೂರು,ನ.17(ಕೆಎಂಶಿ)–ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಡಿಸೆಂಬರ್19ರಿಂದ 10 ದಿನಗಳ ಕಾಲ ಚಳಿಗಾಲದ ಅಧಿವೇಶನ ನಡೆಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಚಳಿಗಾಲದ ಅಧಿವೇಶನ ನಡೆಸುವುದು ಸೇರಿದಂತೆ ಹಲವು ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ.

ಡಿಸೆಂಬರ್ 19ರಿಂದ 30ರವರೆಗೆ ಬೆಳಗಾವಿಯಲ್ಲಿ ಹತ್ತು ದಿನಗಳ ಕಾಲ ವಿಧಾನ ಮಂಡಲದ ಉಭಯ ಸದನಗಳ ಅಧಿವೇಶನ ನಡೆಸಲು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯಿಸಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಹೊಸ ವನ್ಯಜೀವಿಧಾಮ: ರಾಜ್ಯದಲ್ಲಿ ಹೊಸದಾಗಿ ವಿವಿಧ ವನ್ಯಜೀವಿಧಾಮ ಹಾಗೂ ಸಂರಕ್ಷಣಾ ಮೀಸಲು ಪ್ರದೇಶಗಳನ್ನು ಘೋಷಿಸುವ ಪ್ರಸ್ತಾವನೆಗಳಿಗೆ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಹೇಳಿದರು.

ಶ್ರೀಗಂಧ ನೀತಿ: ಮುಂಗಡ ಪತ್ರದಲ್ಲಿ ಘೋಷಣೆ ಮಾಡಿದಂತೆ ರಾಜ್ಯ ಶ್ರೀಗಂಧ ನೀತಿ 2022ಗೆ ಅನುಮೋದನೆ ದೊರೆತಿದೆ. ನೀತಿಯಿಂದಾಗಿ ರೈತರಿಗೆ ಖಾಸಗಿ ಜಮೀನಿನಲ್ಲಿ ಶ್ರೀಗಂಧ ಬೆಳೆಯಲು ಅವಕಾಶವಿದ್ದು, ಶ್ರೀಗಂಧವನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಬಹುದಾಗಿದೆ. ಶ್ರೀಗಂಧಕ್ಕೆ ಸಾಕಷ್ಟು ಬೇಡಿಕೆ ಇರುವುದರಿಂದ ರೈತರಿಗೆ ಪ್ರೋತ್ಸಾಹ ನೀಡಲಾಗುವುದು. ಕಳ್ಳತನ ಪತ್ತೆ ಹಚ್ಚಲು ಮರಗಳಿಗೆ ಚಿಪ್ ಬಳಸುವುದು ಸೇರಿದಂತೆ ಹಲವು ವಿಚಾರಗಳು ನೀತಿಯಲ್ಲಿವೆ ಎಂದರು.

ಪತಿ–ಪತ್ನಿ ವರ್ಗಾವಣೆ: ಸರ್ಕಾರದ ವಿವಿಧ ಇಲಾಖೆಯ ಸಿ ಮತ್ತು ಡಿ ಗ್ರೂಪ್ ನ ನೌಕರ ಪತಿ–ಪತ್ನಿಯರಿಗೆ ವರ್ಗಾವಣೆಗೆ ಅವಕಾಶ ನೀಡುವ ತಿದ್ದುಪಡಿ ನಿಯಮಕ್ಕೂ ಸಂಪುಟ ಸಭೆ ಒಪ್ಪಿಗೆ ದೊರೆತಿದೆ. ಪತಿ–ಪತ್ನಿ ಪ್ರಕರಣದಲ್ಲಿ 7–10 ವರ್ಷ ಆಗುವವರೆಗೆ ವರ್ಗಾಯಿಸಲು ಅವಕಾಶವಿರಲಿಲ್ಲ. ಈ ಹೊಸ ತಿದ್ದುಪಡಿ ಮೂಲಕ ಈಗ ಏಳು ವರ್ಷದ ಬಳಿಕ ಪತಿ–ಪತ್ನಿ ಪ್ರಕರಣದಲ್ಲಿ ಮಾತ್ರ ಅಂತರ ಜಿಲ್ಲೆ ವರ್ಗಾವಣೆಗೆ ಅವಕಾಶ ದೊರೆಯುತ್ತದೆ ಎಂದರು.

ರಾಮನಗರದ ಅರ್ಚಕರ ಹಳ್ಳಿಯಲ್ಲಿ 600 ಕೋಟಿ ರೂ.ವೆಚ್ಚದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಮತ್ತು ಪೂರಕ ಕಟ್ಟಡ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಮುಳಬಾಗಿಲು, ತರೀಕೆರೆ, ಹರಿಹರ ಸೇರಿದಂತೆ ರಾಜ್ಯದ ಏಳು ಕಡೆಗಳಲ್ಲಿ ತಾಯಿ ಮಕ್ಕಳ ಆಸ್ಪತ್ರೆ ನಿರ್ಮಾಣಕ್ಕೂ ಸಂಪುಟ ಒಪ್ಪಿಗೆ ನೀಡಲಾಗಿದೆ. ಈ ಆಸ್ಪತ್ರೆಗಳನ್ನು ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆಯಡಿ 158 ಕೋಟಿ ರೂ. ಮೊತ್ತಕ್ಕೆ ಅನುಮೋದನೆ ನೀಡಲಾಗಿದೆ. ರಾಜ್ಯದ ಅತಿಸಣ್ಣ ಕುಶಲ ಕರ್ಮಿಗಳಿಗಾಗಿ ಸಾಲ ಸಹಾಯಧನ ಯೋಜನೆಯನ್ನು ಅನುಷ್ಠಾನಗೊಳಿಸಲು ಒಪ್ಪಿಗೆ ದೊರೆತಿದೆ.

ಪ್ರಧಾನಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲಸೌಕರ್ಯ ಅಭಿಯಾನ ಯೋಜನೆಯಡಿ ತುಮಕೂರು ಜಿಲ್ಲಾ ಆಸ್ಪತ್ರೆ ಆವರಣದಲ್ಲಿ 100 ಹಾಸಿಗೆಗಳ ಸಾಮರ್ಥ್ಯದ ಕ್ರಿಟಿಕಲ್ ಕೇರ್ ಬ್ಲಾಕನ್ನು 56 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. 154.63 ಕೋಟಿಗಳ ವೆಚ್ಚದಲ್ಲಿ ಪ್ರಸಕ್ತ ಸಾಲಿಗೆ ಉಪ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರೋಗ ಪತ್ತೆ ಉಪಕರಣ, ರಾಸಾಯನಿಕ ಮತ್ತು ರೋಗ ಪತ್ತೆ ಕಿಟ್‌ಗಳನ್ನು ಖರೀದಿಸಲಾಗುವುದು. ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಕೆ.ಸಿ. ಜನರಲ್ ಆಸ್ಪತ್ರೆ ಆವರಣದಲ್ಲಿ ಟ್ರಾಮಾಕೇರ್ ಸೆಂಟರ್ ನಿರ್ಮಾಣ ಕಾಮಗಾರಿಯನ್ನು 35 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ನಂ.ಗೂಡಲ್ಲಿ ವಿಐಪಿ ಗೆಸ್ಟ್‌ಹೌಸ್: ಮೈಸೂರು ಜಿಲ್ಲೆಯ ನಂಜನಗೂಡಿನ ಶ್ರೀಕಂಠೇಶ್ವರ ದೇವಾ ಲಯದಲ್ಲಿ ವಿಐಪಿ ಭಕ್ತಾದಿಗಳಿಗೆ ಕೊಠಡಿಗಳು, ಡಾರ್ಮೆಟರಿ ಅತಿಥಿಗೃಹ ಕಟ್ಟಡದ ನಿರ್ಮಾಣದ 16.52 ಕೋಟಿ ರೂ. ಮೊತ್ತದ ಕಾಮಗಾರಿಗಳಿಗೆ ಆಡಳಿತಾತ್ಮಕ ಒಪ್ಪಿಗೆ ನೀಡಿದೆ ಎಂದು ಸಚಿವ ಡಾ.ಸುಧಾಕರ್ ಹೇಳಿದರು.

ನ.19, 26, 27ರಂದು 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ನಾಟಕ ಪ್ರದರ್ಶನ



ಮೈಸೂರು,ನ.17(ಪಿಎಂ)– ರಂಗಾಂತರಂಗ ವತಿಯಿಂದ ಡಾ.ಬೇಸರಹಳ್ಳಿ ರಾಮಣ್ಣ ಅವರ ನಾಲ್ಕು ಕಥೆಗಳ ಆಧಾರಿತ 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ನಾಟಕ ಪ್ರದರ್ಶನವನ್ನು ನ.19, 26 ಮತ್ತು 27ರಂದು ಏರ್ಪಡಿಸಲಾಗಿದೆ ಎಂದು ಸದರಿ ನಾಟಕದ ನಿರ್ದೇಶಕರೂ ಆದ ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬೇಸರಹಳ್ಳಿ ರಾಮಣ್ಣ ಅವರ 'ಗಾಂಧಿ', 'ಗಾಂಧಿ ಸಂತಾನ', 'ಧರ್ಮ' ಹಾಗೂ 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ಈ ನಾಲ್ಕು ನಾಟಕಗಳನ್ನು ಆಧರಿಸಿ ಈ ರಂಗ ಪ್ರಯೋಗ ಮಾಡಲಾಗಿದೆ. ಪ್ರಸ್ತುತದ ನೈಜ ಸಮಸ್ಯೆಗಳನ್ನು ಈ ನಾಟಕ ಅನಾವರಣಗೊಳಿಸಲಿದೆ. ಇಂದು ತತ್ವ-ಧರ್ಮ ಹೇಳುವವರು ನೈಜ ಮುಖವಾಡಧಾರಿಗಳಾಗಿದ್ದಾರೆ. ಶ್ರಮಿಕ ವರ್ಗ ದುಡಿಯುತ್ತಲೇ ಸೌಲಭ್ಯಗಳಿಂದ ವಂಚಿತವಾಗಿ ಬದುಕುವಂತಾಗಿದೆ. ಇಂತಹ ಅನೇಕ ಅಂಶಗಳ ಮೇಲೆ ಈ ನಾಟಕ ಬೆಳಕು ಚೆಲ್ಲಿದೆ ಎಂದರು.

ನಾಟಕಕ್ಕೆ ಹೆಚ್.ಕೆ.ದ್ವಾರಕಾನಾಥ್ ರಂಗವಿನ್ಯಾಸವಿದ್ದು, ಡಾ.ಕೆ.ವೈ. ನಾರಾಯಣಸ್ವಾಮಿ ಹಾಡುಗಳನ್ನು ಬರೆದಿದ್ದಾರೆ. ನ.19ರಂದು ಸಂಜೆ 6.30ಕ್ಕೆ ಕಲಾಮಂದಿರದ ಕಿರು ರಂಗಮಂದಿರ, ನ.26 ಮತ್ತು 27ರಂದು ಸಂಜೆ 6.30ಕ್ಕೆ ರಾಮಕೃಷ್ಣನಗರದ ನಟನ ರಂಗಮಂದಿರದಲ್ಲಿ ನಾಟಕ ಪ್ರದರ್ಶನಗೊಳ್ಳಲಿದೆ. 100 ರೂ. ಪ್ರವೇಶ ದರ ನಿಗದಿ ಮಾಡಲಾಗಿದೆ ಎಂದು ಹೇಳಿದರು. ರಂಗಾಂತರಂಗ ಸಂಸ್ಥಾಪಕ ಕೀರ್ತಿರಾಜ್, ಕಲಾವಿದ ನಂಜುಂಡಸ್ವಾಮಿ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು-ಬೆಂಗಳೂರು ದಶಪಥ ಹೆದ್ದಾರಿ; ನ.30ಕ್ಕೆ ಶ್ರೀರಂಗಪಟ್ಟಣ ಬೈಪಾಸ್ ಮುಕ್ತ: ಪ್ರತಾಪ್ ಸಿಂಹ



ಮೈಸೂರು, ನ.17– ಬಹು ನಿರೀಕ್ಷಿತ ಮೈಸೂರು – ಬೆಂಗಳೂರು ಎಕ್ಸ್‌ಪ್ರೆಸ್ ವೇ ಎರಡನೇ ಹಂತದ ಕಾಮಗಾರಿ ಭರದಿಂದ ಸಾಗುತ್ತಿದ್ದು, ಇದೇ ತಿಂಗಳ 30ರಂದು ಶ್ರೀರಂಗಪಟ್ಟಣ ಬೈಪಾಸ್ ಮುಕ್ತಗೊಳಿಸುವುದಾಗಿ ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಶ್ರೀರಂಗಪಟ್ಟಣ ಬೈಪಾಸ್‌ನಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿ ಹಾಗೂ ಟೋಲ್ ಪ್ಲಾಜಾವನ್ನು ಅಧಿಕಾರಿಗಳೊಂದಿಗೆ ಗುರುವಾರ ಅವರು ವೀಕ್ಷಿಸಿದ್ದು, ಈ ಮಾಸಾಂತ್ಯದೊಳಗೆ ಬೈಪಾಸ್ ಅನ್ನು ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ. ಮೊದಲ ಹಂತದಲ್ಲಿ ಬೆಂಗಳೂರಿನಿಂದ ನಿಡುಘಟ್ಟದವರೆಗೆ 51 ಕಿ.ಮೀ. ಕಾಮಗಾರಿ ವೇಗವಾಗಿ ನಡೆದಿತ್ತು. ಸದ್ಯ ಕಾಮಗಾರಿ ಮುಗಿದರೂ ಅಲ್ಲಲ್ಲಿ ಲಿಂಕೇಜ್‌ಗಳು ಬಾಕಿ ಉಳಿದಿವೆ. ಕೆಲವು ಕಡೆ ಬೈಪಾಸ್‌ನಿಂದ ಎಕ್ಸ್‌ಪ್ರೆಸ್ ಹೈವೇ ಸಂಪರ್ಕ ಕಲ್ಪಿಸುವುದು ವಿಳಂಬವಾಗಿದೆ. ಆದರೆ ವಾಹನಗಳ ಸಂಚಾರಕ್ಕೆ ಯಾವುದೇ ಸಮಸ್ಯೆ ಆಗಿಲ್ಲ ಎಂದಿದ್ದಾರೆ.

ಮೈಸೂರು ವಿವಿ ಸೇರಿದಂತೆ 5 ವಿವಿ ವ್ಯಾಪ್ತಿಯಲ್ಲಿ ದೀನ್‌ದಯಾಳ್ ಉಪಾಧ್ಯಾಯ ಹಾಸ್ಟೆಲ್ ನಿರ್ಮಾಣ

ಮಾರ್ಚ್‌ನೊಳಗೆ ಚಾಮುಂಡಿಬೆಟ್ಟದಲ್ಲಿ ಕುಸಿತದಿಂದ ಹಾಳಾದ ರಸ್ತೆ ಕಾಮಗಾರಿ ಪೂರ್ಣ



ಬೆಂಗಳೂರು,ನ.17(ಕೆಎಂಶಿ)–ಮೈಸೂರು ವಿಶ್ವವಿದ್ಯಾನಿಲಯ ಸೇರಿದಂತೆ ರಾಜ್ಯದ ಐದು ವಿವಿಗಳ ವ್ಯಾಪ್ತಿಯಲ್ಲಿ ದೀನ್ ದಯಾಳ್ ಉಪಾಧ್ಯಾಯ ಹೆಸರಿನ ವಿದ್ಯಾರ್ಥಿನಿಲಯಗಳು ನಿರ್ಮಾಣವಾಗಲಿವೆ. ಸುದ್ದಿಗಾರರ ಜತೆ ಮಾತನಾಡಿದ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್, ಈ ವಸತಿ ನಿಲಯಗಳ ನಿರ್ಮಾಣಕ್ಕೆ 412 ಕೋಟಿ ವೆಚ್ಚವಾಗಲಿದೆ ಎಂದರು. ಬೆಳಗಾವಿ, ಗುಲ್ಬರ್ಗಾ, ಧಾರವಾಡ, ಮೈಸೂರು ಮತ್ತು ಮಂಗಳೂರು ವಿವಿಗಳಲ್ಲಿ ಸ್ಥಾಪನೆಯಾಗಲಿರುವ ವಿದ್ಯಾರ್ಥಿನಿಲಯಗಳಲ್ಲಿ ತಲಾ 1000 ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸಿಕೊಡಲು ತೀರ್ಮಾನಿಸಲಾಗಿದೆ. ಮೈಸೂರಿನ ಚಾಮುಂಡಿಬೆಟ್ಟ ಮಳೆಯಿಂದ ಹಾನಿಗೀಡಾಗಿದ್ದು ಹಲವು ಕಡೆ ಕುಸಿತದಿಂದ ಹಾಳಾಗಿದೆ. ಇದರ ದುರಸ್ಥಿ ಕಾರ್ಯ ನಡೆದಿದ್ದು ಮಾರ್ಚ್ ತಿಂಗಳ ಒಳಗಾಗಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದರು. ನೈಲಿಂಗ್ ತಂತ್ರಜ್ಞಾನದ ಮೂಲಕ ಚಾಮುಂಡಿಬೆಟ್ಟದಲ್ಲಿ ದುರಸ್ತಿ ಕಾರ್ಯ ನಡೆದಿದೆ ಎಂದು ಅವರು ವಿವರ ನೀಡಿದರು.

ಅಡ್ಡಂಡ ಸಿ.ಕಾರ್ಯಪ್ಪರಿಂದ ಸುಳ್ಳು ಹೇಳಿಕೆ

ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ ಆರೋಪ

ಮೈಸೂರು,ನ.17(ಪಿಎಂ)–ಗಿರೀಶ್ ಕಾರ್ನಾಡ್ ಅವರ 'ಟಿಪ್ಪು ಕಂಡ ಕನಸುಗಳು' ನಾಟಕ ಪ್ರದರ್ಶನಕ್ಕೆ ಅಂದು ಸರ್ಕಾರ 6 ಲಕ್ಷ ರೂ. ಅನುದಾನ ನೀಡಿತ್ತು. ಆದರೆ ಇದನ್ನು 15 ಲಕ್ಷ ರೂ. ಎಂದು ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಸುಳ್ಳು ಹೇಳಿಕೆ ನೀಡಿದ್ದಾರೆ ಎಂದು ರಂಗಾಯಣದ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ ದೂರಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ರಂಗಾಯಣ ನಿರ್ದೇಶಕನಾಗಿದ್ದ ಸಂದರ್ಭದಲ್ಲಿ ಕಾರ್ನಾಡರ 'ಟಿಪ್ಪು ಕಂಡ ಕನಸುಗಳು' ಪ್ರದರ್ಶನಕ್ಕೆ ಸರ್ಕಾರದಿಂದ 6 ಲಕ್ಷ ರೂ. ಅನುದಾನ ಬಿಡುಗಡೆಯಾಗಿತ್ತು. ಆದರೆ 15 ಲಕ್ಷ ರೂ. ಅನುದಾನ ನೀಡಲಾಗಿತ್ತು ಎಂದು ಅಡ್ಡಂಡ ಸಿ.ಕಾರ್ಯಪ್ಪ ಸುಳ್ಳು ಹೇಳಿಕೆ ನೀಡಿದ್ದಾರೆ. ಇದನ್ನು ಕೇಳಿ ಗಾಬರಿಯಾಯಿತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ನಾಡರು 'ಟಿಪ್ಪು ಕಂಡ ಕನಸುಗಳು' ಎಂದು ನಾಟಕ ಬರೆದಿದ್ದರೆ, ಇವರು 'ಟಿಪ್ಪು ನಿಜ ಕನಸುಗಳು' ಹೆಸರಿನಲ್ಲಿ ನಾಟಕ ಬರೆದಿದ್ದಾರೆ. ಇವರಿಗೆ ಹೆಸರು ಕೂಡ ಸರಿಯಾಗಿ ಬದಲಾಯಿಸುವ ತಾಕತ್ತಿಲ್ಲ. ನಾಟಕ ಮಾಡಿದರೆ ಯಾರೂ ವಿರೋಧಿಸುವುದಿಲ್ಲ. ಆದರೆ ಅದರಲ್ಲಿ ಸುಳ್ಳು ಸಂಗತಿಗಳನ್ನು ಅಳವಡಿಸಬಾರದು. ಹಿರಿಯ ಕಾದಂಬರಿಕಾರ ಡಾ. ಎಸ್.ಎಲ್.ಭೈರಪ್ಪರ 'ಪರ್ವ' ನಾಟಕವನ್ನು ಯಾರೂ ವಿರೋಧಿಸಲಿಲ್ಲ. ನಾನು ಮೊದಲ ಪ್ರದರ್ಶನದಲ್ಲೇ ಪರ್ವ ನೋಡಿದೆ ಎಂದರು.

ಗಿರೀಶ್ ಕಾರ್ನಾಡ್ ಅವರನ್ನು 'ಅರ್ಬನ್ ನಕ್ಸಲ್' ಎಂದು ಟೀಕೆ ಮಾಡುತ್ತಾರೆ. ಅವರು ಅರ್ಬನ್ ನಕ್ಸಲ್ ಆಗಿದ್ದರೆ ಅವರಿಗೇಕೆ ಪದ್ಮ ಭೂಷಣ ಪುರಸ್ಕಾರ ನೀಡುತ್ತಿದ್ದರು? ಗಾಂಧಿ ಕೊಂದವರು ಈಗ ದೇಶಪ್ರೇಮಿಗಳಾಗಿದ್ದು, ದೇಶಕ್ಕಾಗಿ ಹುತಾತ್ಮರಾದವರನ್ನು ದೇಶ ದ್ರೋಹಿಗಳು ಎಂದು ಬಿಂಬಿಸಲಾಗುತ್ತಿದೆ. ಇವರೇನು ದೇಶಪ್ರೇಮವನ್ನು ಗುತ್ತಿಗೆ ಪಡೆದಿದ್ದಾರೆಯೇ? ಎಂದು ಪ್ರಶ್ನಿಸಿದರು. ಸಾವರ್ಕರ್ ನಾಟಕ ಮಾಡುತ್ತೀರಾ ಮಾಡಿ, ಆದರೆ ಸುಳ್ಳು ಪ್ರತಿಬಿಂಬಿಸಬಾರದು. ಧರ್ಮವನ್ನು ರಾಜಕಾರಣಕ್ಕೆ ಬೆರೆಸಬಾರದು. ಆದರೆ ಇಂದು ಅದೇ ಆಗುತ್ತಿದೆ. ರಂಗಾಯಣ ರಾಜಕಾರಣದ ಅಡ್ಡೆಯಾಗಿದೆ ಎಂದು ದೂರಿದರು.

ನ.20, ಸಿರಿಧಾನ್ಯ ಕುರಿತ ಕಾವ್ಯ ಸಮ್ಮೇಳನ



ಮೈಸೂರು, ನ.17(ಪಿಎಂ)– ಮಂಡ್ಯ ಜಿಲ್ಲೆಯ ಆರ್ಗ್ ಟ್ರೀ ಸಂಸ್ಥೆ ವತಿಯಿಂದ ನ.20ರಂದು ಸಿರಿಧಾನ್ಯ ಕುರಿತ ರಾಜ್ಯ ಮಟ್ಟದ ಕಾವ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಾವಯವ ಕೃಷಿಕ ಟಿ.ಎಂ.ಪ್ರಸಾದ್ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ತೆಂಕಹಳ್ಳಿ ಗ್ರಾಮದಲ್ಲಿರುವ ಸಂಸ್ಥೆ ಆವರಣದಲ್ಲಿ ಕಾವ್ಯ ಸಮ್ಮೇಳನ ನಡೆಯಲಿದ್ದು, ಅಂದು ಬೆಳಗ್ಗೆ 10.30ಕ್ಕೆ ಉದ್ಘಾಟನೆಯಾಗಲಿದೆ. ಅತಿಥಿಗಳಾಗಿ ಹಿರಿಯ ಸಾಹಿತಿ ಡಾ.ದೊಡ್ಡರಂಗೇಗೌಡ, ಶಾಸಕ ಡಾ.ಕೆ.ಅನ್ನದಾನಿ, ಚಿಂತಕ ಡಾ.ಕೆ.ಸಿ.ಶಿವಪ್ಪ ಮತ್ತಿತರರು ಪಾಲ್ಗೊಳ್ಳಲಿದ್ದು, ಸಂಸ್ಥೆ ಸಂಸ್ಥಾಪಕ ಮಹೇಶ್ ಬಸವಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

75 ಕವಿಗಳು ತಮ್ಮ ಕವಿತೆಗಳನ್ನು ವಾಚನ ಮಾಡಲಿದ್ದಾರೆ. ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಕ್ಕೆ ಆಯ್ಕೆಯಾಗುವ ಕವಿತೆಗಳಿಗೆ ಕ್ರಮವಾಗಿ 25 ಸಾವಿರ, 15 ಸಾವಿರ ಮತ್ತು 10 ಸಾವಿರ ನಗದು ಬಹುಮಾನ ನೀಡಲಾಗುವುದು ಎಂದರು. ಸಂಸ್ಥೆಯ ಆಡಳಿತಾಧಿಕಾರಿ ಮಹೇಶ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ಎಸ್.ಕೆ.ಮಿಶ್ರಾ ಅಧಿಕಾರಾವಧಿ ಮತ್ತೆ ವಿಸ್ತರಣೆ



ನವದೆಹಲಿ: ಜಾರಿ ನಿರ್ದೇಶನಾಲಯದ ಮುಖ್ಯಸ್ಥ ಎಸ್.ಕೆ.ಮಿಶ್ರಾ ಅವರು ಮತ್ತೊಂದು ವರ್ಷದ ಅವಧಿಯನ್ನು ವಿಸ್ತರಿಸಿದ್ದು, ಇದು ಅವರ 3ನೇ ಬಾರಿ ಅಧಿಕಾರಾವಧಿ ವಿಸ್ತರಣೆಯಾಗಿದೆ. ಈ ವಿಸ್ತರಣೆಯೊಂದಿಗೆ ಅವರು ಮುಂದಿನ ವರ್ಷ ಹುದ್ದೆಯಲ್ಲಿ ಐದು ವರ್ಷಗಳನ್ನು ಪೂರ್ಣಗೊಳಿಸುತ್ತಾರೆ. ಕಳೆದ ವರ್ಷ, ಮಿಶ್ರಾ ಅವರು ಸೇವೆಯಲ್ಲಿ ಒಂದು ವರ್ಷದ ವಿಸ್ತರಣೆಯನ್ನು ಪಡೆದ ಮೊದಲಿಗರಾದರು. ತನಿಖಾ ಸಂಸ್ಥೆಯ ಮುಖ್ಯಸ್ಥರ ಅಧಿಕಾರಾವಧಿಯನ್ನು ವಿಸ್ತರಿಸಲು ಸರ್ಕಾರವು ಕಾರ್ಯನಿರ್ವಾಹಕ ಆದೇಶವನ್ನು ಹೊರಡಿಸಿದ ಕೆಲವು ದಿನಗಳ ನಂತರ ಈ ವಿಸ್ತರಣೆ ಬಂದಿದೆ.

'ಚಿತ್ರಕಲೆ' ಕಲಿಕೆಗೆ ಪೂರಕ ಸಹಪಠ್ಯ ಚಟುವಟಿಕೆ

ಚಿತ್ರಕಲಾ ಸ್ಪರ್ಧೆ ಉದ್ಘಾಟಿಸಿ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಭಾರತಿ ಅಭಿಮತ



ಮೈಸೂರು,ನ.17(ಪಿಎಂ)–ಚಿತ್ರಕಲೆ ಸಹಪಠ್ಯ ಚಟುವಟಿಕೆಯಾದರೂ ಪಠ್ಯದ ಕಲಿಕೆಗೆ ಪೂರಕವಾಗಲಿದ್ದು, ಈ ಕಲೆ ಮಕ್ಕಳು ಏಕಾಗ್ರತೆ ರೂಢಿಸಿಕೊಳ್ಳಲು ಸಹಾಯಕವಾಗಲಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಭಾರತಿ ಹೇಳಿದರು.

ಮೈಸೂರಿನ ಅವಿಲಾ ಕಾನ್ವೆಂಟ್ ಸಭಾಂಗಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಗುರುವಾರ ಹಮ್ಮಿಕೊಂಡಿದ್ದ ಮೈಸೂರು ವಿಭಾಗ ಮಟ್ಟದ ಚಿತ್ರಕಲಾ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು.

ಚಿತ್ರಕಲೆಯು ಮಕ್ಕಳಲ್ಲಿ ಏಕಾಗ್ರತೆ, ಶಿಸ್ತು ಮತ್ತು ಸಂಯಮ ಬೆಳೆಸುವುದರೊಂದಿಗೆ ವಿದ್ಯೆಯಲ್ಲಿ ವಿದ್ಯಾರ್ಥಿಗಳು ಸಮಗ್ರತೆ ಕಂಡುಕೊಳ್ಳಲು ಪರಿಣಾಮಕಾರಿಯಾಗಲಿದೆ. ಇದನ್ನು ರೂಢಿಸಿಕೊಂಡರೆ ನಮ್ಮ ಜೀವನದಲ್ಲಿ ಸಂತೃಪ್ತಿ ಬರಲಿದೆ ಎಂದರಲ್ಲದೆ, ಸ್ಪರ್ಧಿಗಳಿಗೆ ಶುಭ ಹಾರೈಸಿದರು.

ಮೈಸೂರು ವಿಭಾಗದ 8 ಜಿಲ್ಲೆಗಳಿಂದ 75 ಪ್ರೌಢಶಾಲಾ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಈ ಪೈಕಿ 24 ವಿದ್ಯಾರ್ಥಿಗಳು ರಾಜ್ಯಮಟ್ಟಕ್ಕೆ ಆಯ್ಕೆಯಾದರು (8ರಿಂದ 10ನೇ ತರಗತಿವರೆಗೆ ತಲಾ 8 ವಿದ್ಯಾರ್ಥಿಗಳನ್ನು ಆಯ್ಕೆ ಮಾಡ ಲಾಯಿತು). 'ಕಾಡು ಬೆಳೆಸಿ ನಾಡು ಉಳಿಸಿ', 'ಮಕ್ಕಳಿಗೆ ವಿಜ್ಞಾನ ವಸ್ತುಪ್ರದರ್ಶನ' ಹಾಗೂ 'ಕರ್ನಾಟಕ ಜಾನಪದ ನೃತ್ಯ' ವಿಷಯಗಳನ್ನು ಕ್ರಮವಾಗಿ 8, 9 ಮತ್ತು 10ನೇ ತರಗತಿಗಳಿಗೆ ನೀಡಲಾಗಿತ್ತು. ಚಿತ್ರಕಲಾ ಶಿಕ್ಷಕರಿಗೂ ಸ್ಪರ್ಧೆ ನಡೆಯಿತು.

ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಡಯಟ್ ಪ್ರಾಂಶುಪಾಲ ನಾಗರಾಜಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಲ್ಲೇಶ್ವರಿ, ರಾಮಾರಾಧ್ಯ, ಕೃಷ್ಣ, ಜಂಟಿ ನಿರ್ದೇಶಕ ಕಚೇರಿ ಪರಿವೀಕ್ಷಕಿ ಪುಷ್ಪಾ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಅರುಣ್‌ಕುಮಾರ್, ಉಪಾಧ್ಯಕ್ಷ ಆನಂದ್, ಶಿಕ್ಷಣ ಇಲಾಖೆ ನೌಕರರಾದ ಶಶಿ, ಶಿವಶಂಕರ್, ಗಣೇಶ್ ಮತ್ತಿತರರಿದ್ದರು.

ಭೂ ಪರಿಹಾರದ 54.63 ಲಕ್ಷ ವಂಚಿಸಿದ ಆರೋಪ

ಬ್ಯಾಂಕ್ ಮ್ಯಾನೇಜರ್ ಸೇರಿ 6 ಮಂದಿ ವಿರುದ್ಧ ಎಫ್‌ಐಆರ್

ಮೈಸೂರು,ನ.17(ಆರ್‌ಕೆ)–ಕೆಐಎಡಿಬಿಯಿಂದ ಭೂ ಮಾಲೀಕರಿಗೆ ಬಿಡುಗಡೆಯಾದ 54.63 ಲಕ್ಷ ರೂ. ಭೂ ಪರಿಹಾರದ ಹಣವನ್ನು ತಮ್ಮ ಖಾತೆಗಳಿಗೆ ವರ್ಗಾಯಿಸಿಕೊಂಡು ವಂಚಿಸಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಕೋ–ಆಪರೇಟಿವ್ ಬ್ಯಾಂಕ್ ಮ್ಯಾನೇಜರ್ ಸೇರಿ 6 ಮಂದಿ ವಿರುದ್ಧ ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಮೈಸೂರಿನ ಎಸ್.ಅರುಣ್, ಪತ್ನಿ ಲೀಲಾವತಿ, ಕೆಂಪಸಿದ್ದನಹುಂಡಿ ಗ್ರಾಮದ ಸಿದ್ದು ಅಲಿಯಾಸ್ ಮರಿಚಿಕ್ಕಸಿದ್ದು, ಅವರ ಮಗ ಕೆ.ಎಸ್.ಶಿವು, ಮೈಸೂರಿನ ಎಸ್.ಎ.ಇಮ್ತಿಯಾಜ್ ಹಾಗೂ ಹೂಟಗಳ್ಳಿಯ ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಮ್ಯಾನೇಜರ್ ವಂಚಿಸಿದ್ದಾರೆ ಎಂದು ಮೈಸೂರು ತಾಲೂಕು ಕೆ.ಎಂ.ಹುಂಡಿ ಗ್ರಾಮದ ಬಸವರಾಜು ಅವರ ಪತ್ನಿ ಮಾಲಮ್ಮ ಎಂಬುವರು ನೀಡಿದ ದೂರಿನನ್ವಯ ವಿಜಯನಗರ ಠಾಣೆ ಪೊಲೀಸರು ಇಂದು ಎಫ್‌ಐಆರ್ ದಾಖಲಿಸಿದ್ದಾರೆ.

ಕೆಐಎಡಿಬಿಯಿಂದ ನಮ್ಮ ತಾಯಿ ಸಿದ್ದಮ್ಮ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದ 54,62,500 ರೂ. ಭೂ ಪರಿಹಾರದ ಹಣವನ್ನು ನನ್ನ ಖಾತೆಗೆ ವರ್ಗಾಯಿಸಿ ನಂತರ ನನಗೆ ತಿಳಿಯದಂತೆ ಈ ಆರೂ ಮಂದಿ ಅವರ ಖಾತೆಗಳಿಗೆ ವರ್ಗಾಯಿಸಿಕೊಂಡು ಮೋಸ ಮಾಡಿದ್ದಾರೆ ಎಂದು ಮಾಲಮ್ಮ ದೂರಿನಲ್ಲಿ ಆರೋಪಿಸಿದ್ದಾರೆ. ಅರುಣ್, ಲೀಲಾವತಿ, ಸಿದ್ದು, ಶಿವು, ಇಮ್ತಿಯಾಜ್ ಹಾಗೂ ಬ್ಯಾಂಕ್ ಮ್ಯಾನೇಜರ್ ವಿರುದ್ಧ ಐಪಿಸಿ ಸೆಕ್ಷನ್ 34, 406, 420 ರೀತ್ಯಾ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ಶ್ರದ್ಧಾ ಹತ್ಯೆ ಪ್ರಕರಣ

ಅಫ್ತಾಬ್‌ಗೆ ನಾರ್ಕೋ ಪರೀಕ್ಷೆ ನಡೆಸಲು ಕೋರ್ಟ್ ಅನುಮತಿ



ನವದೆಹಲಿ: ಶ್ರದ್ಧಾಳ ಕೊಲೆ ಆರೋಪಿ ಅಫ್ತಾಬ್ ಅಮೀನ್‌ನನ್ನು 5 ದಿನಗಳ ಕಾಲ ಪೊಲೀಸ್ ಕಸ್ಟಡಿಯಲ್ಲಿರಿಸಿ ಕೊಳ್ಳಲು ದೆಹಲಿಯ ನ್ಯಾಯಾಲಯ ಗುರುವಾರ ಅನುಮತಿ ನೀಡಿದೆ.

ಆರೋಪಿಯನ್ನು ಮಾದಕ ದ್ರವ್ಯ ಸೇವನೆ (ನಾರ್ಕೋ) ಪರೀಕ್ಷೆಗೆ ಒಳಪಡಿಸಲು ಅವಕಾಶ ನೀಡಿದೆ. ಈ ಸಂಬಂಧ ಪೊಲೀಸರ ಮನವಿಗೆ ಸಮ್ಮತಿಸಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅವಿರಾಲ್ ಶುಕ್ಲಾ ಈ ಆದೇಶ ಹೊರಡಿಸಿದ್ದಾರೆ.

28 ವರ್ಷದ ಶ್ರದ್ಧಾಳನ್ನುಕೊಲೆ ಮಾಡಿ. ಬಳಿಕ ಆಕೆಯ ದೇಹವನ್ನು 35 ತುಂಡುಗಳನ್ನಾಗಿ ಮಾಡಿ ದಕ್ಷಿಣ ದೆಹಲಿಯ ಮೆಹ್ರೌಲಿಯಲ್ಲಿರುವ ತನ್ನ ನಿವಾಸದ ಫ್ರಿಡ್ಜ್‌ನಲ್ಲಿ ಸುಮಾರು ಮೂರು ವಾರಗಳ ಕಾಲ ಇರಿಸಿದ್ದ ಆರೋಪಿ ಮಧ್ಯರಾತ್ರಿಯಲ್ಲಿ ದೇಹದ ತುಂಡುಗಳನ್ನು ಮೆಹ್ರೌಲಿಯ ಅರಣ್ಯದಲ್ಲಿ ಬಿಸಾಡಿದ್ದಾನೆ.

ಪ್ರಿಯತಮೆ ಶ್ರದ್ಧಾಳ ನಡುವೆ ಆಗಾಗ್ಗೆ ಜಗಳವಾಗುತಿತ್ತು. ಇದೇ ಕಾರಣದಿಂದ ಮೇ 18ರ ಸಂಜೆ 27 ವರ್ಷದ ಶ್ರದ್ಧಾಳನ್ನು ಕೊಂದಿರುವುದಾಗಿ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ತನಿಖೆ ಮುಂದುವರೆದಿದ್ದು, ಪ್ರತಿದಿನ ಭಯಾನಕ ಸತ್ಯಗಳು ಹೊರಬರುತ್ತಿವೆ.

ಕಾಂಗ್ರೆಸ್ ನಾಯಕರಿಗೆ ಮಾಡಲು ಬೇರೆ ಕೆಲಸ ಇಲ್ಲ

● ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ ನಾರಾಯಣ ಲೇವಡಿ
● ಹೊಂಬಾಳೆ, ಚಿಲುಮೆ ಇವುಗಳಿಗೂ ನನಗೂ ಸಂಬಂಧ ಇಲ್ಲ
● ಕಾಂಗ್ರೆಸ್‌ನಿಂದ ಮತ್ತೊಮ್ಮೆ ಗಾಳಿಯಲ್ಲಿ ಗುಂಡು

ಬೆಂಗಳೂರು,ನ.17(ಕೆಎಂಶಿ)–ಭ್ರಷ್ಟಾಚಾರ ಮತ್ತು ಅಕ್ರಮಗಳಲ್ಲೇ ಮುಳುಗಿರುವ ಕಾಂಗ್ರೆಸ್ ನಾಯಕರಿಗೆ ಮಾಡಲು ಏನೂ ಕೆಲಸವಿಲ್ಲ. ಹೀಗಾಗಿ ಅವರೆಲ್ಲ ಹೊಂಬಾಳೆ ಎನ್ನುವ ಯಾವುದೋ ಒಂದು ಸಂಸ್ಥೆಯ ಹೆಸರನ್ನು ಹಿಡಿದುಕೊಂಡು ನನ್ನ ಮೇಲೆ ನಿರಾಧಾರ ಆರೋಪ ಮಾಡುತ್ತಿದ್ದಾರೆ.

ಇದು ಎಂದಿನಂತೆ ಗಾಳಿಯಲ್ಲಿ ಗುಂಡು ಹೊಡೆಯುವ ಚಾಳಿಯಾಗಿದೆ. ಪದೇಪದೆ ನನ್ನ ಹೆಸರಿಗೆ ಮಸಿ ಬಳಿಯಲು ಹೊಂಚು ಹಾಕುತ್ತಿರುವ ಇವರೆಲ್ಲರ ಮೇಲೆ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ಎದಿರೇಟು ಕೊಟ್ಟಿದ್ದಾರೆ.

ಹೊಂಬಾಳೆ (ಈಗ, ಚಿಲುಮೆ ಟ್ರಸ್ಟ್) ಎನ್ನುವ ಬೇರೆ ಯಾವುದೋ ಸಂಸ್ಥೆಯು ಬಿಬಿಎಂಪಿ ಮತದಾರರ ಪಟ್ಟಿಯನ್ನು ಅಕ್ರಮವಾಗಿ ಪರಿಷ್ಕರಿಸಿದ್ದು, ಇದರ ಹಿಂದೆ ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ಡಾ.ಅಶ್ವತ್ಥನಾರಾಯಣ ಕೈವಾಡವಿದೆ ಎಂದು ಕಾಂಗ್ರೆಸ್ ನಾಯಕರು ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಪತ್ರಕರ್ತರು ಕೇಳಿದ ಪ್ರಶ್ನೆಗಳಿಗೆ ಅವರು ಗುರುವಾರ ಹೀಗೆ ಪ್ರತಿಕ್ರಿಯಿಸಿದ್ದಾರೆ.

ನಮ್ಮ ಸಹೋದರನದು ಕೂಡ ಹೊಂಬಾಳೆ ಎನ್ನುವ ಸಂಸ್ಥೆ ಇದ್ದು, ಸಿನಿಮಾ ನಿರ್ಮಾಣದಲ್ಲಿ ತೊಡಗಿದೆ. ಈ ಸಂಸ್ಥೆಯು ನಾಡು ಮತ್ತು ದೇಶವೇ ಮೆಚ್ಚುವಂಥ ಸಿನಿಮಾಗಳನ್ನು ಮಾಡಿ, ಗೌರವ ತಂದಿದೆ. ಈಗ ಅವರು ಹೇಳುತ್ತಿರುವ ಹೊಂಬಾಳೆ ಸಂಸ್ಥೆಗೂ ನಮ್ಮ ಸೋದರನ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲ. ಆ ಹೆಸರನ್ನು ಇಟ್ಟುಕೊಳ್ಳಬೇಡಿ ಎಂದು ಹೇಳಲು, ಮಲ್ಲೇಶ್ವರಂನಲ್ಲಿ ಕಚೇರಿ ಇರಬಾರದು ಎನ್ನಲು ನಾನ್ಯಾರು ನಾನು ತತ್ವ-ಸಿದ್ಧಾಂತಗಳಿಗಾಗಿ ರಾಜಕೀಯಕ್ಕೆ ಬಂದಿದ್ದೇನೆಯೇ ವಿನಾ ಕಾಂಗ್ರೆಸ್ಸಿನವರಂತೆ ಕುಟುಂಬ ರಾಜಕಾರಣಕ್ಕಲ್ಲ ಎಂದು ಅವರು ಗುಡುಗಿದ್ದಾರೆ.



ಕಾಂಗ್ರೆಸ್ಸಿನಲ್ಲಿ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ಸುರ್ಜೆವಾಲಾ ಸೇರಿದಂತೆ ಯಾರ ಬಳಿಯೂ ಗಂಭೀರ ವಿಚಾರಗಳಿಲ್ಲ. ಮತದಾರರ ಪಟ್ಟಿ ಪರಿಷ್ಕರಣೆ ಚುನಾವಣಾ ಆಯೋಗದ ಕೆಲಸ. ಅದರಲ್ಲಿ ಮುಖ್ಯಮಂತ್ರಿಗಳಿಗಾಗಲೀ, ನನಗಾಗಲೀ ಏನೂ ಇಲ್ಲ. ಯಾರಾದರೂ ತಪ್ಪು ಮಾಡಿದ್ದರೆ ಕಾಂಗ್ರೆಸ್ಸಿನವರು ಆಯೋಗಕ್ಕೆ ದೂರು ಕೊಡಲಿ, ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ. ಅದು ಬಿಟ್ಟು ನನ್ನ ವಿರುದ್ಧ ಆರೋಪ ಮಾಡುವ ಚಿಲ್ಲರೆ ಬುದ್ಧಿ ತೋರಿಸಬಾರದು. ಹಿಂದೆ ಪಿಎಸ್‌ಐ ಹಗರಣದಲ್ಲೂ ಇವರೆಲ್ಲ ನನ್ನ ಹೆಸರನ್ನು ವಿನಾ ಕಾರಣ ಎಳೆದು ತಂದಿದ್ದರು. ಆದರೆ ಆಧಾರ ತೋರಿಸಿ ಎಂದಾಗ ಪಲಾಯನ ಮಾಡಿದರು ಎಂದು ಅವರು ಹರಿಹಾಯ್ದರು.

ಕಾಂಗ್ರೆಸ್ಸಿನವರು ಈಗ ಆರೋಪ ಮಾಡುತ್ತಿರುವ ಸಂಸ್ಥೆಯ ಪ್ರಮುಖ ವ್ಯಕ್ತಿ ನನ್ನೊಂದಿಗೆ ಫೋಟೋ ತೆಗೆಸಿಕೊಂಡಿರಬಹುದು. ಸಾರ್ವಜನಿಕ ಜೀವನದಲ್ಲಿರುವಾಗ ಹೀಗೆ ಸಾವಿರಾರು ಜನ ಏನೇನೋ ಕೆಲಸದ ಕಾರಣಕ್ಕೆ ಬರುತ್ತಾರೆ. ಹಾಗೆ ನೋಡಿದರೆ, ಕಾಂಗ್ರೆಸ್ ನಾಯಕರು ಕಳ್ಳಕಾಕರು ಮತ್ತು ಕೊಲೆಗಾರರ ಜೊತೆಯಲೆಲ್ಲಾ ಫೋಟೋ ತೆಗೆಸಿಕೊಂಡಿದ್ದಾರೆ. ರಾಜಕಾರಣಕ್ಕೆ ಬಂದಮೇಲೆ ಅದನ್ನೆಲ್ಲ ತಡೆಯಲು ಆಗುವುದಿಲ್ಲ ಎಂದು ಅವರು ಮಾರುತ್ತರ ನೀಡಿದರು.

ಬಿಜೆಪಿ ಸರಕಾರವು ಕೆಂಪೇಗೌಡರ ಪ್ರತಿಮೆ ಸ್ಥಾಪನೆ, ಹೂಡಿಕೆದಾರರ ಸಮಾವೇಶ, ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ಮುಂತಾದ ಮೈಲಿಗಲ್ಲುಗಳನ್ನು ಸ್ಥಾಪಿಸುತ್ತಿದೆ. ಈ ಯಶಸ್ಸನ್ನು ಸಹಿಸಿಕೊಳ್ಳಲಾಗದೆ ಕಾಂಗ್ರೆಸ್ ನಾಯಕರು ಹೀಗೆ ಹತಾಶೆಯ ಪರಮಾವಧಿ ತಲುಪಿದ್ದಾರೆ ಎಂದು ಟೀಕಿಸಿದರು. ಮತದಾರರ ಪಟ್ಟಿ ಪರಿಷ್ಕರಣೆಯು ಚುನಾವಣಾ ಆಯೋಗದ ಮಾರ್ಗದರ್ಶನದಲ್ಲಿ ನಡೆಯುವ ಪ್ರಕ್ರಿಯೆ. ಇದು ಅಧಿಕಾರಿಗಳು ಮತ್ತಿತರರು ಮಾಡುವ ಕೆಲಸವಾಗಿದೆ. ಬಿಬಿಎಂಪಿ ಚುನಾವಣೆಗೂ ನನಗೂ ಏನಾದರೂ ಸಂಬಂಧವಿದೆಯೇ? ಇದನ್ನೆಲ್ಲ ನೋಡಿದರೆ ಕಾಂಗ್ರೆಸ್ಸಿಗರು ಯಾವ ಮಟ್ಟಕ್ಕೆ ಇಳಿದಿದ್ದಾರೆ ಎನ್ನುವುದು ಗೊತ್ತಾಗುತ್ತದೆ ಎಂದು ಸಚಿವರು ಲೇವಡಿ ಮಾಡಿದರು.

ನ.20ಕ್ಕೆ ಗೆಜ್ಜಿಗನಹಳ್ಳಿಯಲ್ಲಿ ಆರೋಗ್ಯ ಶಿಬಿರ

ಮೈಸೂರು, ನ.17–ಅಸ್ತಿತ್ವ ಫೌಂಡೇಷನ್ ಟ್ರಸ್ಟ್ ಸಂಸ್ಥೆಯು ಜೆಎಸ್‌ಎಸ್ ಆಸ್ಪತ್ರೆ ಸಹಯೋಗದೊಂದಿಗೆ ನಂಜನಗೂಡು ತಾಲೂಕು, ಬಿಳಿಗೆರೆ ಹೋಬಳಿ, ಗೆಜ್ಜಿಗನಹಳ್ಳಿ ಗ್ರಾಮದಲ್ಲಿ ನವೆಂಬರ್ 20ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಿದೆ. ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಅಂದು ಬೆಳಗ್ಗೆ 9.30ಕ್ಕೆ ಶಿಬಿರ ಆರಂಭವಾಗಲಿದೆ.

ಹೃದ್ರೋಗ ತಜ್ಞರು, ಮೂಳೆ ಮತ್ತು ಕೀಲು, ಕಣ್ಣಿನ ತಜ್ಞರು, ಸ್ತ್ರೀ ಮತ್ತು ಪ್ರಸೂತಿ ತಜ್ಞರು, ಸಾಮಾನ್ಯ ವೈದ್ಯಕೀಯ ಚಿಕಿತ್ಸಕರು ಹಾಗೂ ನುರಿತ ಶುಶ್ರೂಷಕಿಯರು ಲಭ್ಯವಿರಲಿದ್ದಾರೆ. ತಪಾಸಣೆಗೊಳಗಾದವರಿಗೆ ಔಷಧಿಯನ್ನೂ ಉಚಿತವಾಗಿ ನೀಡಲಾಗುವುದು. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ರಿಯಾಯಿತಿ ದರದಲ್ಲಿ ಕಲ್ಪಿಸಲಾಗುವುದು. ಗೆಜ್ಜಿಗನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಶಿಬಿರದ ಪ್ರಯೋಜನ ಪಡೆಯುವಂತೆ ಅಸ್ತಿತ್ವ ಫೌಂಡೇಷನ್ ಅಧ್ಯಕ್ಷರಾದ ಎಂ.ಜಿ.ಪ್ರಗತಿ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಮೈಸೂರಲ್ಲಿ ಅಕ್ಟೋಬರ್ ಅಂತ್ಯದವರೆಗೆ 641 ಅಪಘಾತ

155 ಮಂದಿ ಸಾವು, 588 ಮಂದಿಗೆ ಗಾಯ



ಮೈಸೂರು, ನ.17(ಆರ್‌ಕೆ)–ಕೋವಿಡ್ ಲಾಕ್‌ಡೌನ್ ನಿರ್ಬಂಧ ತೆರವುಗೊಂಡ ನಂತರ ಮೈಸೂರು ನಗರದಲ್ಲಿ ವಾಹನ ಸಂಚಾರ ದಟ್ಟಣೆ ಜಾಸ್ತಿಯಾದ ಪರಿಣಾಮ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗಿದೆ.

ಮೈಸೂರು ನಗರ ವಿಸ್ತಾರವಾಗಿ ಬೆಳೆಯುತ್ತಿದ್ದಂತೆಯೇ ಜನಸಂಖ್ಯೆಯೂ ಅಧಿಕವಾಗಿ, ಅದಕ್ಕನುಗುಣವಾಗಿ ವಾಹನ ಬಳಕೆದಾರರ ಸಂಖ್ಯೆಯೂ ಹೆಚ್ಚಾಗುತ್ತಿದೆಯಾದರೂ, ಮಹಾರಾಜರು ನಿರ್ಮಿಸಿದ್ದ ರಸ್ತೆಗಳು ಮಾತ್ರ ಹಾಗೆಯೇ ಇರುವುದರಿಂದ ಹಾಗೂ ಅವುಗಳನ್ನು ಗುಂಡಿ ಇಲ್ಲದಂತೆ ನಿರ್ವಹಿಸದಿರುವುದು ಅಪಘಾತಗಳಿಗೆ ಕಾರಣ ಎಂಬುದು ಸಾರ್ವಜನಿಕರ ದೂರಾಗಿದೆ.

ಅಕ್ಟೋಬರ್ ಅಂತ್ಯದವರೆಗೆ ಮೈಸೂರಲ್ಲಿ 641 ಅಪಘಾತಗಳು ಸಂಭವಿಸಿದ್ದು, 155 ಮಂದಿ ಸಾವನ್ನಪ್ಪಿದ್ದಾರೆ. ಅಪಘಾತದಲ್ಲಿ ಒಟ್ಟು 588 ಮಂದಿ ಗಾಯಗೊಂಡಿದ್ದು, ಆ ಪೈಕಿ ಕೆಲವರು ದೈಹಿಕ ಅಂಗವಿಕಲರಾಗಿದ್ದಾರೆ. ರಿಂಗ್ ರಸ್ತೆಯ ಬೋಗಾದಿ ಜಂಕ್ಷನ್, ದಟ್ಟಗಳ್ಳಿಯ ಸೆಸ್ಕ್ ಸಬ್‌ಸ್ಟೇಷನ್ ಬಳಿ, ನಂಜನಗೂಡು ರಸ್ತೆ, ತಿ.ನರಸೀಪುರ ರಸ್ತೆ ರಿಂಗ್ ರೋಡ್ ಜಂಕ್ಷನ್ ಬಳಿ ಅತೀ ಹೆಚ್ಚು ಅಪಘಾತಗಳು ಸಂಭವಿಸಿರುವುದು ವರದಿಯಾಗಿದೆ.

ಕಳೆದ ವರ್ಷ 2021ರ 12 ತಿಂಗಳಲ್ಲಿ 651 ರಸ್ತೆ ಅಪಘಾತಗಳು ಸಂಭವಿಸಿ 121 ಮಂದಿ ಸಾವನ್ನಪ್ಪಿದ್ದು, 671 ಮಂದಿಗೆ ಗಾಯಗಳಾಗಿತ್ತು. ಈ ಅಂಕಿ–ಅಂಶಗಳನ್ನು ಗಮನಿಸಿದಾಗ ಪ್ರಸಕ್ತ ಸಾಲಿನ ಕೇವಲ 10 ತಿಂಗಳಲ್ಲೇ 641 ಅಪಘಾತಗಳಾಗಿ 155 ಮಂದಿ ಸಾವನ್ನಪ್ಪಿರುವುದು ಕಂಡುಬರುತ್ತದೆ. ಅದೇ ರೀತಿ 2020ರಲ್ಲಿ ಕೋವಿಡ್–19 ಪರಿಸ್ಥಿತಿ ಇದ್ದಾಗ ವಾಹನ ಸಂಚಾರ ವಿರಳವಾಗಿದ್ದಾಗ್ಯೂ 633 ರಸ್ತೆ ಅಪಘಾತಗಳು ಸಂಭವಿಸಿ 122 ಮಂದಿ ಸಾವನ್ನಪ್ಪಿದ್ದು, 622 ಮಂದಿ ಗಾಯಗೊಂಡಿದ್ದರು. ಕೊರೊನಾ ಉತ್ತುಂಗ ಸ್ಥಿತಿಯಲ್ಲಿದ್ದಾಗ 2019ರಲ್ಲಿ ಅತೀ ಹೆಚ್ಚು 866 ಅಪಘಾತಗಳಾಗಿ 149 ಮಂದಿ ಸಾವನ್ನಪ್ಪಿದ್ದರಲ್ಲದೆ, 909 ಮಂದಿಗೆ ಗಾಯಗಳಾಗಿದ್ದನ್ನು ಇಲ್ಲಿ ಗಮನಿಸಬಹುದು. ಲಾಕ್‌ಡೌನ್, ವೀಕೆಂಡ್ ಕರ್ಫ್ಯೂ, 144 ಸೆಕ್ಷನ್ ರೀತ್ಯಾ ನಿಷೇಧಾಜ್ಞೆ ಜಾರಿ ಇದ್ದಾಗಲೂ 2019ರಲ್ಲಿ 146 ಮಾರಣಾಂತಿಕ ಹಾಗೂ 720 ಮಾರಣಾಂತಿಕವಲ್ಲದ ಆಕ್ಸಿಡೆಂಟ್‌ಗಳಾಗಿರುವುದು ಅಚ್ಚರಿ ಮೂಡಿಸಿದೆ.

ರಿಂಗ್ ರಸ್ತೆಯಲ್ಲಿ ಬೀದಿ ದೀಪಗಳು ಕೆಟ್ಟು ನಿಂತಿರುವುದು, ಗುಂಡಿಮಯ ರಸ್ತೆ, ಅವೈಜ್ಞಾನಿಕ ಬ್ಯಾರಿಕೇಡ್‌ಗಳು, ಸರಿಯಾಗಿ ಸರ್ಕಲ್, ಜಂಕ್ಷನ್‌ಗಳನ್ನು ನಿರ್ವಹಿಸದಿರುವುದು, ರಸ್ತೆಗಳಲ್ಲಿ ಸೂಚನಾ ಫಲಕಗಳಿಲ್ಲದಿರುವುದು ಅಪಘಾತ ಹೆಚ್ಚಾಗಲು ಪ್ರಮುಖ ಕಾರಣವಾಗಿದ್ದು, ಮೈಸೂರು ಮಹಾನಗರ ಪಾಲಿಕೆ, ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಈಗಲಾದರೂ ರಸ್ತೆಗಳನ್ನು ರಿಪೇರಿ ಮಾಡಿ ಸುಸ್ಥಿತಿಯಲ್ಲಿ ನಿರ್ವಹಿಸಬೇಕು. ಸಂಚಾರ ಪೊಲೀಸರು ಪರಿಣಾಮಕಾರಿಯಾಗಿ ಸಂಚಾರ ನಿಯಮ ಜಾರಿಗೊಳಿಸಬೇಕೆಂದು ರಸ್ತೆ ಬಳಸುವ ನಾಗರಿಕರು ಒತ್ತಾಯಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಸುಬ್ಬಕ್ಕ : ಈಗಿನ ಕಾಲದ ಮಕ್ಕಳು ಅಜ್ಜಿ ಮನೆಗೆ ಹೋಗೋದು ಕಡಿಮೆ ಅಲ್ವಾ?

ಗುಂಡಮ್ಮ : ಹೌದು ಸುಬ್ಬಕ್ಕ, ಮೊದಲೆಲ್ಲಾ ಮಕ್ಕಳು ಅಜ್ಜಿ ಮನೇಲಿ ಹುಟ್ಟುತ್ತಿದ್ದರು. ಅದಕ್ಕೆ ಪದೇ ಪದೇ ಅಜ್ಜಿ ಮನೆಗೆ ಹೋಗ್ತಿದ್ರು. ಈಗಿನ ಮಕ್ಕಳು ಆಸ್ಪತ್ರೆಯಲ್ಲಿ ಹುಟ್ತಾರೆ. ಅದಕ್ಕೆ ಪದೇ ಪದೆ ಆಸ್ಪತ್ರೆಗೆ ಹೋಗ್ತಾರೆ!

ಮೈಸೂರು ಮಿತ್ರ

ಶುಕ್ರವಾರ, 18 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ತನಗೂ ಒಂದು ದಿನ ಸಾವಿದೆ ಎಂದು ಅರಿತವನು ಇನ್ನೊಬ್ಬರಿಗೆ ಎಂದೂ ತೊಂದರೆ ಕೊಡುವುದಿಲ್ಲ. –ಗೌತಮ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?

ನಿಮ್ಮ ಪತ್ರಗಳು

ಚಿತ್ರಮಂದಿರಗಳನ್ನು ಉಳಿಸಿಕೊಳ್ಳೋಣ

ಮಾನ್ಯರೆ,

ಸಾಂಸ್ಕೃತಿಕ ನಗರಿ ಎಂದೇ ಖ್ಯಾತಿ ಪಡೆದಿರುವ ನಮ್ಮ ಮೈಸೂರು ಸಾಂಸ್ಕೃತಿಕ ಕ್ಷೇತ್ರಕ್ಕೆ ಹಲವಾರು ಕೊಡುಗೆಗಳನ್ನು ನೀಡಿದೆ. ಮೈಸೂರು ಪ್ರಾಂತ್ಯದಿಂದ ಅನೇಕ ನಟ–ನಟಿಯರಾದ ಹಿರಿಯ ನಟ ಅಶ್ವತ್ಥ್, ಮೈಸೂರು ಲೋಕೇಶ್, ರೆಬಲ್‌ಸ್ಟಾರ್ ಅಂಬರೀಶ್, ಡಾ.ಸಾಹಸ ಸಿಂಹ ವಿಷ್ಣುವರ್ಧನ್, ಚಾಲೆಂಜಿಂಗ್ ಸ್ಟಾರ್ ದರ್ಶನ್, ರಾಕಿಂಗ್ ಸ್ಟಾರ್ ಯಶ್, ನಿಖಿಲ್ ಕುಮಾರಸ್ವಾಮಿ, ನಮ್ಮ ಮಹಾರಾಜ ಕಾಲೇಜಿನ ಪ್ರೊ. ರಾಮಸ್ವಾಮಿ ಸರ್ ಮುಂತಾದ ಕಲಾವಿದರನ್ನು ಸಿನಿಮಾ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಿದೆ. ಇಂತಹ ಕಲಾ ತವರೂರಾದ ಮೈಸೂರಿನಲ್ಲಿ ಹಿಂದೆ 16 ಚಿತ್ರಮಂದಿರ ಗಳಿತ್ತು. ಈಗ ಕೇವಲ ಬರಿ 8 ಚಿತ್ರಮಂದಿರಗಳಿವೆ.

ಕಾರಣ ಕೋವಿಡ್‌ನ ಮುಂಚೆ ಅಪೇರಾ, ರಣಜಿತ್, ಶಾಲಿಯಾರ್ ಚಿತ್ರಮಂದಿರಗಳು ಮುಚ್ಚಿದರೆ, ಕೋವಿಡ್‌ನ ನಂತರ ಆರ್ಥಿಕ ಸಂಕಷ್ಟಕ್ಕಿಡಾಗಿ ಶ್ರೀ ನಾಗರಾಜ, ಸ್ಟರ್ಲಿಂಗ್, ಶಾಂತಲ, ಲಕ್ಷ್ಮೀ, ಸರಸ್ವತಿ, ಕ್ರಮೇಣ ಮುಚ್ಚಿವೆ. ಒಂದು ಯುಗದಲ್ಲಿ ಕಡಿಮೆ ಟಿಕೆಟ್ ದರದಲ್ಲಿ ಶ್ರೀಮಂತರು, ಮಧ್ಯಮ ವರ್ಗ, ಬಡವರು, ಸುಮಾರು 700 – 800–1000 ಪ್ರೇಕ್ಷಕರು ಒಂದು ಚಿತ್ರಮಂದಿರದಲ್ಲಿ ಒಟ್ಟಾಗಿ ಕುಳಿತು ಸಿನಿಮಾದ ಅಭಿರುಚಿಗಳನ್ನು ಸವಿಯುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅಧಿಕ ಹಣ ಸಂಪಾದನೆ ಗಳಿಸಲು, ಚಿತ್ರಮಂದಿರದ ಕಟ್ಟಡಗಳನ್ನು ಹೊಡೆದು ವ್ಯಾಪಾರದ ದೃಷ್ಟಿಯಿಂದ ಅದ್ಯಾವುದೋ "ಮಾಲ್" ಎಂಬ ಹೆಸರು ಬಂದಾಗಿನಿಂದ ಒಂದೊಂದು ಚಿತ್ರಮಂದಿರಗಳನ್ನು ಮೂಲೆ ಗುಂಪು ಮಾಡಿ ಬರಿ ದುಬಾರಿ ವೆಚ್ಚದಲ್ಲಿ 250–300 ಪ್ರೇಕ್ಷಕರು ಕುಳಿತು ನೋಡುವ ಮಲ್ಟಿಪ್ಲೆಕ್ಸ್‌ಗಳನ್ನು ತೆಗೆದು ಬಡವರು, ಮಧ್ಯಮ ವರ್ಗದವರು ಕಾಣುತ್ತಿದ್ದ ಚಿತ್ರಮಂದಿರದ ಮನರಂಜನೆಯನ್ನು ಕಣ್ಮರೆ ಮಾಡುತ್ತಿರುವುದು ನಿಜಕ್ಕೂ ಬೇಸರ ತರಿಸಿದೆ. ಚಿತ್ರಮಂದಿರಗಳಿಗೆ ಸರ್ಕಾರದ ವತಿಯಿಂದ ಸಬ್ಸಿಡಿ ಹಣ ನೀಡಿ ಚಿತ್ರಮಂದಿರಗಳನ್ನು ಕಾಪಾಡಬೇಕು. ಚಿತ್ರಮಂದಿರ ನಾಶವಾದರೆ ಮುಂದೆ ಮಲ್ಟಿಪ್ಲೆಕ್ಸ್‌ಗಳಲ್ಲಿ ಹೆಚ್ಚಿನ ದರ ನಿಗದಿಪಡಿಸಿದರೆ, ಪ್ರೇಕ್ಷಕರು ಸಿನಿಮಾ ನೋಡಲು ಕಡಿಮೆಯಾಗಿ, ಈಗಾಗಲೇ ಓಟಿಟಿಯಲ್ಲಿ ರಿಲೀಸ್ ಆಗುತ್ತಿರುವುದರಿಂದ ಸಿನಿಮಾಗಳನ್ನು ಮನೆಯಲ್ಲಿ ಕುಳಿತು ವೀಕ್ಷಿಸುತ್ತಿದ್ದಾರೆ. ಹೀಗೇ ಮುಂದುವರಿದರೆ ಚಿತ್ರಮಂದಿರ ಇನ್ನಷ್ಟು ಸಂಕಷ್ಟ ಎದುರಿಸುವ ದೂರದ ದಿನಗಳಿಲ್ಲ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಮೈಸೂರು ಆಕಾಶವಾಣಿಯಲ್ಲಿ ಕನ್ನಡ ಹಬ್ಬ

ಮಾನ್ಯರೆ,

ನಾಳೆ (ನ.18) ಮೈಸೂರು ಆಕಾಶವಾಣಿಯಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಹಬ್ಬವನ್ನು ಬಹಳ ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಈ ಕನ್ನಡ ಹಬ್ಬಕ್ಕೆ ಸಹೃದಯ ಕೇಳುಗರಿಗೆ ಮುಕ್ತ ಅವಕಾಶವಿದೆ. ಶ್ರೋತೃಗಳು ಆಕಾಶವಾಣಿ ನಿಲಯ ವೀಕ್ಷಿಸಬಹುದು. ಅದರ ಕಾರ್ಯಕ್ರಮದ ವೈಖರಿ ತಿಳಿಯಬಹುದು. ಅಷ್ಟೇ ಅಲ್ಲ ನಿಮ್ಮ ಅನಿಸಿಕೆ ಅಭಿಪ್ರಾಯ ಮುಕ್ತವಾಗಿ ಹೇಳಿಕೊಳ್ಳಬಹುದು. ಈ ಸದವಕಾಶವನ್ನು ಹೆಚ್ಚೆಚ್ಚು ಜನರು ಉಪಯೋಗಿಸಿಕೊಂಡು ಕನ್ನಡ ಹಬ್ಬದಲ್ಲಿ ಭಾಗಿಯಾಗಿ ಕರುನಾಡ ತಾಯಿಗೆ ಗೌರವ ಸಲ್ಲಿಸಿ.

'ಶ್ರೀ ಗೋಪಾಲಸ್ವಾಮಿ' ಎಂಬ ಮಾಂತ್ರಿಕ ಇಂದಿನ ಒಂಟಿಕೊಪ್ಪಲ್ ರಸ್ತೆಯ 'ವಿಠಲ ವಿಹಾರ' ಪ್ರದೇಶದಲ್ಲಿ ಎಂಬತ್ತೈದು ವರ್ಷಗಳ ಹಿಂದೆ ಒಂದು ಪುಟ್ಟ ಕಟ್ಟಡದಲ್ಲಿ ಆಲ್ ಇಂಡಿಯಾ ರೇಡಿಯೋ ಪ್ರಾರಂಭಿಸಿದರು. ಕಾಲಕ್ರಮೇಣ ಅದೇ ಪ್ರದೇಶದಲ್ಲಿ ಸುಸಜ್ಜಿತ, ವಿಶಾಲ ಪ್ರದೇಶದಲ್ಲಿ ಎಲ್ಲರ ಮೆಚ್ಚುಗೆ ಗಳಿಸುತ್ತಾ ದೇದೀಪ್ಯಮಾನವಾಗಿ ಕಾರ್ಯನಿರ್ವಹಿಸುತ್ತಿದೆ. ಅರ್ಧ ಗಂಟೆಗಳ ಪ್ರಸಾರದಿಂದ ಶುರುವಾದ ಈ ಕೇಂದ್ರ ಇದೀಗ ಸತತ ಹದಿನೇಳು ಗಂಟೆಗಳ ನಿರಂತರ ಪ್ರಸಾರ ನೀಡುತ್ತಾ ನಾಡಿನ ಶ್ರೋತೃ ಮಹಾಜನತೆಗೆ ಮಾಹಿತಿ, ಮನರಂಜನೆಯನ್ನು ಒದಗಿಸುವಲ್ಲಿ ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಮುಂಜಾನೆ ಚಿಂತನೆಗೆ ಒರೆಹಚ್ಚುವ 'ಚಿಂತನ' ರೈತರಿಗೆ ಅಮೂಲ್ಯ ಸಲಹೆಗಳನ್ನು ನೀಡುವುದೇ ಅಲ್ಲದೆ ರೈತರಿಗೆ ಕೃಷಿ ಬಗ್ಗೆ ಸಂಪೂರ್ಣ ಮಾಹಿತಿ ಕೊಡುವ ಕಣಜ. ಅಷ್ಟೇ ಅಲ್ಲ ಕರ್ನಾಟಕ ಶಾಸ್ತ್ರೀಯ ಸಂಗೀತ ಇವತ್ತು ಉತ್ತುಂಗದಲ್ಲಿದೆ. ಅದರ ಪೂರ್ಣ ಯಶಸ್ಸು ಆಕಾಶವಾಣಿಯದೆ.

ಎಲ್ಲಾ ಪ್ರಕಾರದ ಗೀತೆಗಳನ್ನು ನೀವು ಆಲಿಸಬೇಕೆಂದರೆ ಕೇಳಲೇಬೇಕು ನಮ್ಮ ಆಕಾಶವಾಣಿ, ಹರಿಕಥೆ, ಗಮಕ, ನಾಟಕ, ಯಕ್ಷಗಾನ, ಅರೋಗ್ಯ ಕಾರ್ಯಕ್ರಮ, ಹವಾಮಾನ ಮುನ್ಸೂಚನೆ, ಸರ್ಕಾರದ ನೂತನ ಯೋಜನೆಗಳ ಪಟ್ಟಿ ಅಬ್ಬಾ!!!!

ಮಕ್ಕಳಿಗೆ, ಯುವ ಜನತೆಗೆ, ಮಹಿಳೆಯರಿಗೆ ಹೀಗೆ ಎಲ್ಲಾ ವಯೋಮಾನದವರಿಗೂ ಎಲ್ಲಾ ಕ್ಷೇತ್ರಗಳಿಗೂ ಅನ್ವಯವಾಗುವ ಕಾರ್ಯಕ್ರಮಗಳನ್ನು ನೀಡುತ್ತಿರುವ ಆಕಾಶವಾಣಿ ತನ್ನ ಧ್ಯೇಯ ವಾಕ್ಯ 'ಬಹುಜನ ಹಿತಾಯ ಬಹುಜನ ಸುಖಾಯ'ಕ್ಕೆ ಅನ್ವರ್ಥವಾಗಿದೆ ಎಂದರೆ ತಪ್ಪಾಗಲಾರದು. ಇತ್ತೀಚಿನ ದಿನಗಳಲ್ಲಿ ಓದುವ ಹವ್ಯಾಸ ಕ್ಷೀಣಿಸುತ್ತಿದೆ. ಓದುವಂತೆ ಪ್ರೇರೇಪಿಸುವ ಸಾಹಿತ್ಯ ದಿಗ್ಗಜರ ಕಾದಂಬರಿಗಳು ಬಾನುಲಿ ಓದು ಮುಖಾಂತರ ಜನರ ಮನ ಮುಟ್ಟುತ್ತಿದೆ. ಕನ್ನಡ ಉದಯೋನ್ಮುಖ ಬರಹಗಾರರಿಗೆ, ಕವಿಗಳಿಗೆ, ಪ್ರತಿಭೆಗಳಿಗೆ ಅವಕಾಶ ಕೊಟ್ಟು ಅವರ ಸಾಧನೆಗೆ ಪ್ರೇರೇಪಿಸುವ ರೀತಿ ಅನನ್ಯ. ಎಲ್ಲರ ಮೆಚ್ಚುಗೆಗೆ ಪಾತ್ರವಾಗಿರುವ ನಮ್ಮ ಮೆಚ್ಚಿನ ಮೈಸೂರಿನ ಆಕಾಶವಾಣಿ ಕೇಂದ್ರ ನಿರಂತರವಾಗಿ ತನ್ನ ಪ್ರಸಾರವನ್ನು ಹರಿಸುತ್ತಾ ನಾಡಿನ ಹೃನ್ಮನ ಮತ್ತಷ್ಟು ಗೆದ್ದು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

– ಪುಷ್ಪಲತಾ ಫಣಿರಾಜ್, ಅಗ್ರಹಾರ ಮೈಸೂರು.

ಪ್ರಯಾಣಿಕರ ತಂಗುದಾಣ, ಬೇಕೆ ಈ ಹೈರಾಣ?

ಮಾನ್ಯರೆ,

ಕೃಷ್ಣರಾಜ ಕ್ಷೇತ್ರದ ಶಾಸಕರು ಹಾಗೂ ಕೊಡಗು ಮೈಸೂರು ಸಂಸದರ ಜಟಾಪಟಿಯಲ್ಲಿ ಪ್ರಯಾಣಿಕರ ತಂಗುದಾಣ ಸಮಾಧಿಯಾಗುತ್ತಿದೆ. ಇಲ್ಲಿ ಗೊತ್ತಿದ್ದೋ ಗೊತ್ತಿಲ್ಲದೆಯೋ ಮಾಧ್ಯಮಗಳೂ ಸೇರಿ ಎಲ್ಲರೂ "ಗುಂಬಜ್" ಪದವನ್ನು ಬಳಸುತ್ತಿದ್ದಾರೆ. ಶ್ರೀರಂಗಪಟ್ಟಣದಲ್ಲೂ ಗುಂಬಜ್ ಇದ್ದು ಅಲ್ಲಿ ಹೈದರ್ ಆಲಿ ಮತ್ತಿತರರ ಸಮಾಧಿಯಿದೆ. ಗೋಲ್ ಗುಂಬಜ್ ಕೂಡಾ ಸಮಾಧಿಯೇ. ಮೃತರ ಸಮಾಧಿಯ ಮೇಲೆ ಮಾತ್ರ ಗುಮ್ಮಟವನ್ನು ರಚಿಸಲಾಗುತ್ತದೆ ಅದನ್ನು ಮಾತ್ರ "ಗುಂಬಜ್" ಎಂದು ಕರೆಯಲಾಗುತ್ತದೆಯೆಂದು ನಾನು ತಿಳಿದಿದ್ದೇನೆ. ರಾಮದಾಸರೇಕೆ ಪ್ರಯಾಣಿಕರ ತಂಗುದಾಣವನ್ನು ಗುಂಬಜ್ ಮಾಡ ಹೊರಟರು?

ಸಂಸದರೇಕೆ ಗುಂಬಜ್ ತಂಗುದಾಣವನ್ನು ನೆಲಸಮ ಮಾಡುವುದಾಗಿ ಹೇಳಿದರು? ಯಾರು ಬೇಕಾದರೂ ಏನಾದರೂ ಮಾಡಲಿ. ಆ ತಂಗುದಾಣಕ್ಕೆ ಖರ್ಚಾಗಿರುವುದು ಇವರ ಜೇಬಿನಿಂದ ತೆಗೆದುಕೊಟ್ಟ ಹಣವಂತೂ ಅಲ್ಲ ತಾನೇ?

ನೆಲಸಮ ಮಾಡುವವರೂ, ಕಟ್ಟಿಸಲು ಹೊರಟವರೂ ಆ ನಿರ್ಮಾಣಕ್ಕೆ ಆಗಿರುವ ಖರ್ಚಿನ ಹಣವನ್ನು ಸರಕಾರಕ್ಕೆ ಸಂದಾಯ ಮಾಡಿ ಏನಾದರೂ ಮಾಡಿಕೊಳ್ಳಲಿ ಎಂದು ಮೈಸೂರಿನ ಜನತಾ ಜನಾರ್ದನ ಬಯಸುತ್ತಾನೆ. ನಾಚಿಕೆಯಾಗುವುದಿಲ್ಲವೇ ಶಾಸಕ ಹಾಗೂ ಸಂಸದರಿಗೆ? ಅದೂ ಒಂದೇ ಪಕ್ಷದ ಜನರಿವರು !

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು



ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಗೋವೆಯಲ್ಲಿ ಆಚರಿಸಿದ ದೀಪಾವಳಿ–2

ಪೋರ್ಚುಗೀಸ್ ಆಡಳಿತದ ಕುರುಹುಗಳ ನಡುವೆ ಮೈದಳೆದು ಬಂದ ನರಕಾಸುರ



ಮನೋಹರ್ ಪರ್ರಿಕ್ಕರ್ ರಾಜಕಾರಣಿ



ಜೆರಾರ್ಡ್ ಡ ಕುನ್ಹ ವಾಸ್ತುಶಿಲ್ಪಿ



ಮರಿಯೋ ಮಿರಾಂಡ ಅಂಕಣಕಾರ



ವೆನ್ಡೆಲ್ ರೊಡ್ರಿಕ್ಸ್ ಫ್ಯಾಷನ್ ಡಿಸೈನರ್



ರೆಮೋ ಫರ್ನಾಂಡೀಸ್ ಸಂಗೀತಗಾರ

(ನ.15ರ ಸಂಚಿಕೆಯಿಂದ)

ಗೋವಾದಲ್ಲಿನ ಬೀಚ್‌ಗಳ ಹೆಸರುಗಳು ಪೋರ್ಚುಗೀಸ್, ಇಂಗ್ಲಿಷ್ ಮತ್ತು ಮರಾಠಿ ಭಾಷೆಗಳ ರಸ ಮಿಶ್ರಣವಾಗಿದೆ. ಏಕೆಂದರೆ, ಗೋವೆಯಲ್ಲಿ ಮರಾಠಿ ಭಾಷೆಯ ಪ್ರಭಾವವಿದೆ ಹಾಗೂ ಸ್ಥಳೀಯ ಕೊಂಕಣಿ ಭಾಷೆಯ ಪ್ರಭಾವವೂ ಇದ್ದಿರಬಹುದು. ಗೋವಾ ರಾಜ್ಯವು, ನಮ್ಮ ಕರ್ನಾಟಕದೊಂದಿಗೆ ಅತೀ ಉದ್ದದ ಗಡಿ ಪ್ರದೇಶವನ್ನು ಹೊಂದಿದ್ದರೂ, ಈ ಪುಟ್ಟ ರಾಜ್ಯವು ಮರಾಠಿ ಭಾಷೆಯಷ್ಟು ಕನ್ನಡ ಭಾಷೆಯಿಂದ ಅಷ್ಟೇನೂ ಪ್ರಭಾವಿತವಾಗಿಲ್ಲ. ಇಲ್ಲಿನ ಬೀಚ್‌ಗಳ ಹೆಸರುಗಳನ್ನೂ ನಮ್ಮಿಂದ ಸ್ಪಷ್ಟವಾಗಿ ಉಚ್ಛರಿಸಲಾಗದು. ಕಾಲನ್‌ಗುಟೆ ಬೀಚ್, ಕಾಂಡೋಲಿಮ್ ಬೀಚ್, ಅಶ್ವೆಮ್ ಇತ್ಯಾದಿ ಬೀಚುಗಳು ಇಲ್ಲಿ ಪ್ರಖ್ಯಾತವಾಗಿವೆ ಹಾಗೂ ಪ್ರವಾಸಿಗರು ತಮ್ಮದೇ ಆದ ಕಾರಣಗಳಿಗಾಗಿ ಇವುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಲೋಕೋ ವಿಭಿನ್ನ ರುಚಿ...

ಕರ್ನಾಟಕದ ಜೊತೆ ಗಡಿಯನ್ನು ಹಂಚಿಕೊಂಡಿರುವ ಗೋವಾ, ಪೋರ್ಚುಗೀಸರ ವಸಾಹತುವಾಗಿದ್ದ ದಿನಗಳಿಂದಲೂ ನನಗೆ ಗೊತ್ತಿದೆ. ಇದು ಸ್ಥಳೀಯವಾಗಿ ಗೊಡಂಬಿ ಅಥವಾ ತೆಂಗಿನಿಂದ ಮಾಡಿದ ಸ್ಥಳೀಯ ಮದ್ಯ ಫೆನ್ನಿಯಿಂದ ಖ್ಯಾತಿಯಾಗಿತ್ತು. ಅದಾಗ್ಯೂ, 1950, 60ರ ದಶಕ ಹಾಗೂ ಆನಂತರದ ಯುವ ಜನರು, ಗೋವಾಗೆ ಹೋಗುವ ಕನಸು ಕಾಣುತ್ತಿದ್ದರು. ಏಕೆಂದರೆ ಗೋವೆಯು ಮಾದಕ ವಸ್ತು ಸೇವನೆಯಿಂದ ಉನ್ಮಾದಗೊಂಡ ಹಿಪ್ಪಿಗಳ ಸ್ವರ್ಗವಾಗಿತ್ತು – ಸದಾ ಡ್ರಗ್ಸ್ ಸೇವಿಸಿ, ಮರಳಿನ ಮೇಲೆ ಹೊರಳಾಡುತ್ತಾ, ಹಾಡುತ್ತ, ಗಿಟಾರ್ ಬಾರಿಸುತ್ತಾ ಬೀಚ್‌ನ ಉದ್ದಕ್ಕೂ ಬರುವ ಮತ್ತು ನಿರ್ಗಮಿಸುವ ಅರಬ್ಬಿಸಮುದ್ರದ ಅಲೆಗಳನ್ನು ಸವಿಯುತ್ತಾರೆ. ಖಂಡಿತವಾಗಿ, ಬೀಚ್ ಉಡುಪುಗಳಲ್ಲಿ ಇಲ್ಲವೇ ಯಾವುದೇ ಉಡುಪು ಇಲ್ಲದೆಯೂ! ತಮ್ಮ ಬಿಳಿ ಬಣ್ಣದ ಚರ್ಮವನ್ನು ಬಿಸಿಲಿಗೆ ಒಡ್ಡಿ ಸಂಸ್ಕರಣೆ (tanning) ಮಾಡುತ್ತಾರೆ. ಇದನ್ನು ಮಂತ್ರಮುಗ್ಧರಾದಂತೆ, ಕಣ್ಣರಳಿಸಿಕೊಂಡು ನೋಡುತ್ತಾ ಅತಿಶಯ ಭಾರತೀಯ ಪ್ರವಾಸಿಗರು ಸಂಭ್ರಮ ಪಡುತ್ತಾರೆ. ತಾವೇ ಇವುಗಳನ್ನೆಲ್ಲ ಮಾಡುತ್ತಿದ್ದೇವೇನೋ ಎಂಬಂತೆ ಸ್ವಯಂ ಅನುಭೂತಿಯನ್ನು ಹೊಂದುತ್ತಾರೆ. ಅದು ಹಾಗಿರಲಿ.

ಇತ್ತೀಚಿನ ವರ್ಷಗಳ ರಾಜಕಾರಣಿಗಳಲ್ಲಿ **ಮನೋಹರ ಪರೀಕ್ಕರ್** ಎಂಬ ಪ್ರಸಿದ್ಧ ಹೆಸರೊಂದನ್ನು ಈ ಸಮಯದಲ್ಲಿ ನಾನು ಜ್ಞಾಪಿಸಿಕೊಳ್ಳುತ್ತೇನೆ. ಇವರು ಐಐಟಿಯ ಉತ್ತಮ ವಿದ್ಯಾರ್ಹತೆ ಹೊಂದಿದ್ದವರು. ಭಾರತೀಯ ಜನತಾ ಪಕ್ಷಕ್ಕೆ ಸೇರಿದ್ದ ಇವರು ಗೋವಾ ಮುಖ್ಯಮಂತ್ರಿಯೂ ಆಗಿದ್ದರು. ನಂತರ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸಚಿವ ಸಂಪುಟದಲ್ಲಿ ರಕ್ಷಣಾ ಸಚಿವರಾಗಿದ್ದರು. ಅತ್ಯಂತ ದಕ್ಷರೂ ಕೂಡ ಎಂದು ಕೇಳಲ್ಪಟ್ಟಿದ್ದೆ. ದುರದೃಷ್ಟಕರ ಸಂಗತಿಯೆಂದರೆ ಅವರು ಚಿಕ್ಕವಯಸ್ಸಿನಲ್ಲೇ ಅನಾರೋಗ್ಯದಿಂದ ಸಾವಿಗೀಡಾದರು. ಇವರ ಹೆಸರನ್ನು ಒಂದು ಕಲ್ಲಿನ ಫಲಕದ ಮೇಲೆ ಕೆತ್ತಿ, ನವೀಕರಣಗೊಂಡ **ರೀಸ್ ಮಾಗೋಸ್ ಕೋಟೆಯ** ಪ್ರವೇಶ ಗೋಡೆಯ ಮೇಲೆ ಅಳವಡಿಸಲಾಗಿದೆ. ಇದು ಸಹ ಮತ್ತೊಂದು ಪೋರ್ಚುಗೀಸ್ ಕೋಟೆ "ಫೋರ್ಟ್ ಅಗುಡಾ"ಗಿಂತ ಪ್ರಾಚೀನವಾದುದು. ಈ ಕೋಟೆಯು ಚಿತ್ರ ನಿರ್ಮಾಪಕರ ನೆಚ್ಚಿನ ತಾಣವೂ ಆಗಿದೆ. ಇದರ ಬಗ್ಗೆ ಮತ್ತಷ್ಟು ವಿವರಗಳನ್ನು ಆಮೇಲೆ ನೀಡುತ್ತೇನೆ.

ಗೋವಾಕ್ಕೆ ಸಂಬಂಧಿಸಿದಂತೆ ಇನ್ನೂ ನಾಲ್ಕು ಜನರ ಪ್ರಖ್ಯಾತ ಹೆಸರುಗಳಿವೆ. ಅವರುಗಳ ಹೆಸರು ಗೋವಾದೊಂದಿಗೆ ಸಮಾನಾರ್ಥವನ್ನು ಹೊಂದಿವೆ. ಮೊದಲನೆಯದು **ಜೆರಾರ್ಡ್ ಡ ಕುನ್ಹ** (Gerard da Cunha). ಇವರು ಗೋವಾ ಮೂಲದ ಭಾರತೀಯ ವಾಸ್ತುಶಿಲ್ಪಿಯಾಗಿದ್ದರು. ಪದ್ಮಶ್ರೀ ಸೇರಿದಂತೆ ಹಲವಾರು ಪ್ರಶಸ್ತಿ ಹಾಗೂ ಗೌರವಗಳನ್ನು ಪಡೆದಿದ್ದರು. ಇವರು ನಗರ ಯೋಜನೆ ರೂಪಿಸುವಲ್ಲಿನ ಶ್ರೇಷ್ಠತೆಗಾಗಿ ಪ್ರಧಾನ ಮಂತ್ರಿಗಳ ಪ್ರಶಸ್ತಿಯನ್ನು ಕೂಡ ಪಡೆದಿದ್ದರು.

ನಾನು, ಇವರಿಂದ ನಿರ್ಮಿಸಲ್ಪಟ್ಟ 'ಹೌಸಸ್ ಆಫ್ ಗೋವಾ' ಎಂಬ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದೆ. ಇದು ಇಂಡೋ–ಪೋರ್ಚುಗೀಸರ ಸ್ಥಳೀಯ ವಾಸ್ತುಶಿಲ್ಪದ ಕಥೆ ಹೇಳುತ್ತದೆ. ಅವರ ಕಚೇರಿಗೆ ಸಮೀಪವೇ ಇರುವ ಇದು ಅಸಹಜವಾದ (ಚಿತ್ರ ನೋಡಿ) ಕಟ್ಟಡದಂತೆ ತೋರು ತ್ತದೆ. ಈ ಕಟ್ಟಡದ ಪಕ್ಕದಲ್ಲೇ ಇವರು ಮಕ್ಕಳಿಗಾಗಿ ಒಂದು ಆಟದ ಶಾಲೆ (play school) ಕೂಡ ನಿರ್ಮಿಸಿದ್ದಾರೆ. ಕಟ್ಟಡ ನಿರ್ಮಾಣದಲ್ಲಿ ಅವರು ಸಾಂಪ್ರದಾಯಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವಲ್ಲಿ ಹಾಗೂ ಲಭ್ಯವಿದ್ದ ಸ್ಥಳೀಯ ಕಚ್ಚಾ ವಸ್ತುಗಳನ್ನು ಬಳಸುವುದರಲ್ಲಿ ಖ್ಯಾತನಾಮರಾಗಿದ್ದರು. ಹಾಗಾಗಿ ನಿರ್ಮಾಣ ಕಾರ್ಯದಲ್ಲಿ ಕಂದು ಮತ್ತು ಕೆಂಪು ಬಣ್ಣವುಳ್ಳ ತಡೆ ಗೋಡೆ ಕಲ್ಲುಗಳನ್ನು (Laterite) ಹೆಚ್ಚಾಗಿ ಬಳಸಿರುವುದನ್ನು ನೋಡಿ ನನಗೇನು ಅಚ್ಚರಿಯಾಗಲಿಲ್ಲ. ಪ್ರಾಮಾಣಿಕವಾಗಿ ಹೇಳುವುದಾದರೆ, ಆ ಕಾಲಘಟ್ಟದಲ್ಲಿ ಭಾರತದ ನಂಬರ್ 1 ವಾಸ್ತುಶಿಲ್ಪಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿ, ಅಷ್ಟೊಂದು ಹೆಸರು ಗಳಿಸಿದ್ದರೂ ಇವರ ಕಲಾನೈಪುಣ್ಯತೆ ಅದೇಕೋ ನನ್ನನ್ನು ಅಷ್ಟಾಗಿ ಆಕರ್ಷಿಸಲಿಲ್ಲ.

ಓರ್ವ ವಾಸ್ತುಶಿಲ್ಪಿಯಾಗಿ, ವಿನೂತನ ಹಾಗೂ ವಿಭಿನ್ನತೆಯ ಆಲೋಚನೆಯಲ್ಲಿ ಮುಳುಗಿದ್ದ **ಜೆರಾರ್ಡ್ ಡ ಕುನ್ಹ**ರವರು ಒಂದು ವರ್ಣರಂಜಿತ, ಭರದ ಜೀವನ ಸಾಗಿಸಿದ್ದರು ಎಂದು ಕಾಣುತ್ತದೆ. ಅವರು ಕೇರಳಕ್ಕೆ ಹೋಗಿ ಅಲ್ಲಿ ವಿಶ್ವವಿಖ್ಯಾತ ವಾಸ್ತುಶಿಲ್ಪಿ **ಲಾರಿ ಬೇಕರ್** ಅವರ ಜೊತೆ ಅತ್ಯಂತ ಆಪ್ತವಾಗಿ ಕಾರ್ಯನಿರ್ವಹಿಸಿದ್ದರು. ಅಲ್ಲದೆ, ಬೂಕರ್ ಪ್ರಶಸ್ತಿ ವಿಜೇತ ಲೇಖಕಿ **ಅರುಂಧತಿ ರಾಯ್** ಅವರೊಂದಿಗೆ ಅಲ್ಪಕಾಲದ ವೈವಾಹಿಕ ಜೀವನ ಸಾಗಿಸಿದ್ದರು. ಓರ್ವ ವಾಸ್ತುಶಿಲ್ಪಿಯಾಗಿ ಬೆಂಗಳೂರು ಬಳಿ, ಪ್ರಖ್ಯಾತ ಒಡಿಸ್ಸಿ ನೃತ್ಯಗಾರ್ತಿ **ಪ್ರತಿಮಾ ಬೇಡಿ**ಯವರಿಗಾಗಿ ಅಪೂರ್ವ ವಾಸ್ತುಶಿಲ್ಪ ಒಳಗೊಂಡ **ನೃತ್ಯ ಗ್ರಾಮ** ಸೇರಿದಂತೆ ಭಾರತದಾದ್ಯಂತ ಅವರು ಹಲವಾರು ಯೋಜನೆಗಳಲ್ಲಿ ಕೆಲಸ ಮಾಡಿದ್ದರು.

ಇಷ್ಟೇ ಅಲ್ಲದೇ, ಜೆರಾರ್ಡ್ ಡ ಕುನ್ಹರವರು, ಪಾಳು ಬಿದ್ದಿದ್ದ ಗೋವಾದ ಅತ್ಯಂತ ಪ್ರಾಚೀನವಾದ **ರೀಸ್ ಮಾಗೋಸ್ ಕೋಟೆ**ಯನ್ನು ಪುನಃ ಸ್ಥಾಪನೆಗೊಳಿಸಿದರು. ಈ ಹಿಂದೆ ನಾನು ತಿಳಿಸಿದಂತೆ ಇವರು ವಿಲಕ್ಷಣವಾಗಿ ಕಂಡುಬರುವ ತ್ರಿಭುಜಾಕಾರದ ಹಾಗೂ ಸ್ಥಳೀಯ ಕಲ್ಲುಗಳಿಂದ ಕೂಡಿದ ಹಡಗಿನ ಮಾದರಿಯ ಕಟ್ಟಡವನ್ನು ನಿರ್ಮಿಸಿದ್ದರು. ಇದನ್ನು **"ಹೌಸಸ್ ಆಫ್ ಗೋವಾ"** ಮ್ಯೂಸಿಯಂ ಎಂದು ಕರೆಯಲಾಗುತ್ತದೆ.



ಜೆರಾರ್ಡ್ ಡ ಕುನ್ಹ ಅವರ ಹೌಸ್ ಆಫ್ ಗೋವಾ ಮ್ಯೂಸಿಯಂ



ಮರಿಯೋ ಮಿರಾಂಡ ಅವರ ಒಂದು ಅಪರೂಪದ ಚಿತ್ರಕಲೆ

ಓರ್ವ ಪತ್ರಕರ್ತನಾಗಿ ಗೋವಾದ ಬಗ್ಗೆ ಯೋಚಿಸುವಾಗ ತಕ್ಷಣ ನನಗೆ ಹೊಳೆಯುವ ಮತ್ತೊಂದು ಹೆಸರೆಂದರೆ, **ಮಾರಿಯೋ ಮಿರಾಂಡ** ಅವರು ವ್ಯಂಗ್ಯ ಚಿತ್ರಕಾರ (cartoonist) ಹಾಗೂ ವರ್ಣಚಿತ್ರಕಾರರೂ ಆಗಿದ್ದರು. ಟೈಮ್ಸ್ ಪತ್ರಿಕಾ ಸಮೂಹಕ್ಕೆ ಸೇರಿದ್ದ "ಇಲ್ಲುಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾ (ಈಗ ಮುಚ್ಚಿ ಹೋಗಿದೆ) ಆಂಗ್ಲ ವಾರ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ತಮ್ಮ ವಿಶಿಷ್ಟವಾದ ರೇಖಾ ಚಿತ್ರಗಳು ಮತ್ತು ಚಿತ್ರಕಲೆಗಳಿಂದಾಗಿ ಅವರು ಹೆಸರುವಾಸಿಯಾಗಿದ್ದರು. ಒಂದು ಮಾದರಿಯನ್ನು ಇಲ್ಲಿ ನೀಡಲಾಗಿದೆ. ಅವರ ಪೂರ್ಣ ಹೆಸರು ಕೆಲವು ದಕ್ಷಿಣ ಭಾರತದ ಅತೀ ಉದ್ದನೆಯ ಹೆಸರುಗಳ ಜೊತೆ ಸ್ಪರ್ಧಿಸುವಂತಿದ್ದು, ನಾಲಿಗೆ ತೊದಲುವಂತೆ, ಮನಸ್ಸನ್ನು ಕದಡುವಂತಿದೆ. ನೀವೇನಾದರೂ ಅವರ ಹೆಸರನ್ನು ಜೋರಾಗಿ ಉಚ್ಛರಿಸಲು ಹೊರಟಿದ್ದರೆ, ಉಸಿರನ್ನು ಬಿಗಿ ಹಿಡಿಯಿರಿ, ಈಗ ಹೇಳಿ– **ಮಾರಿಯೋ ಜಾವ್ರೋ ಕಾರ್ಲೂಸ್ ಡೂ ರೊಸರಿಯೋ ಡಿ ಬ್ರಿಟೋ ಮಿರಂಡ ಕಾಮ್‌ಹ್**–ದಾಖಲೆಯ ಅತೀ ದೀರ್ಘವಾದ ಹೆಸರಾಗಿದೆ. 2011ರಲ್ಲಿ ಅವರು ತಮ್ಮ 85ನೇ ವರ್ಷದಲ್ಲಿ ನಿಧನ ಹೊಂದಿದರು. ಅಚ್ಚರಿಯ ಸಂಗತಿಯೇನಲ್ಲ, ಆದರೆ ಆಸಕ್ತಿದಾಯಕ ವಿಚಾರವೆಂದರೆ, **ಮಿರಾಂಡ** ಅವರು ಅಂದಿನ ಪೋರ್ಚುಗೀಸ್ ಇಂಡಿಯಾದ ಡಮನ್‌ನಲ್ಲಿ ಬ್ರಾಹ್ಮಣ ಮೂಲದ ಕಾಥೋಲಿಕ್ ಪೋಷಕರಿಗೆ (ತಂದೆ ತಾಯಿ) ಜನಿಸಿದ್ದರು ಹಾಗೂ ಅವರ ಕುಟುಂಬದ ಮೂಲ ಹೆಸರು ಸರ್ದೇಸಾಯ್ ಎಂಬುದಾಗಿತ್ತು. ಅವರಿಗೂ ಪ್ರಖ್ಯಾತ ಕ್ರಿಕೆಟ್ ಆಟಗಾರ **ದಿಲೀಪ್ ಸರ್ದೇಸಾಯ್** ಹಾಗೂ ಅವರಷ್ಟೇ ಪ್ರಖ್ಯಾತನಾದ ಅವರ ಮಗ ಪತ್ರಕರ್ತ, ಬರಹಗಾರ ಹಾಗೂ ವಿವಾದಾಸ್ಪದ ಟಿವಿ ನಿರೂಪಕ **ರಾಜದೀಪ್ ಸರ್ದೇಸಾಯ್**‌ಗೂ ಯಾವುದೇ ಸಂಬಂಧವಿಲ್ಲವೇನೋ. ಬಾಂಬೆಯಲ್ಲಿದ್ದಾಗ, ನಾನು ಹಾಗೂ ನನ್ನ ಪತ್ರಕರ್ತ ಮಿತ್ರ ಕೊಲಿನ್ ಡಿಸೋಜ, ಇಬ್ಬರೂ ಮರಿಯೋ ಅವರ ಕಲಾಸೃಷ್ಟಿ **ಮಿಸ್ ನಿಂಬೂಪಾನಿ** ಎಂಬ ಕಲಾಕೃತಿಯ ಆಕರ್ಷಕ ಅಂಗಸೌಷ್ಠವಗಳನ್ನು ನೋಡಿ ಎಂಜಾಯ್ ಮಾಡುತ್ತಿದ್ದೆವು.

ನಾವೆಲ್ಲರೂ ನಿರೀಕ್ಷಿಸಿದಂತೆ, ಪದ್ಮಶ್ರೀ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದರು. ಮರಣೋತ್ತರವಾಗಿ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಕೂಡ ನೀಡಲಾಯಿತು. ನೈಟ್ ವುಡ್ಡಿನ ಪೋರ್ಚುಗೀಸ್ ರಾಷ್ಟ್ರೀಯ ಮಾನ್ಯತೆ ಕೂಡ ಅವರಿಗೆ ದೊರೆಯಿತು.

ಹೌಸಸ್ ಆಫ್ ಗೋವಾದಿಂದ ಕೆಲವೇ ಅಡಿಗಳ ಅಂತರದಲ್ಲಿರುವ **"ಮರಿಯೋ ಗ್ಯಾಲರಿಗೂ"** ಭೇಟಿ ನೀಡುವುದು ವಿಶೇಷವಾಗಿ ನನಗೆ ಅನಿವಾರ್ಯವಾಯಿತು. ಈ ಗ್ಯಾಲರಿಯ ತುಂಬಾ ಮಾರಿಯೋ ಅವರ ಕೃತಿಗಳು ಹಾಗೂ ಜನರು ಕೊಂಡುಕೊಳ್ಳಬಹುದಾದ ಸ್ಮರಣಿಕೆಗಳು ಇದ್ದು, ಇಷ್ಟಪಡುವವರು ಅವುಗಳನ್ನು ಮನೆಗೆ ತೆಗೆದುಕೊಂಡು ಹೋಗಬಹುದು. ಈ ಗ್ಯಾಲರಿಯು ಒಂದು ಸಾಮಾನ್ಯವಾದ, ಆಕರ್ಷಕವಲ್ಲದ ಕಟ್ಟಡದಲ್ಲಿ ಇದೆ. ಮಾರಿಯೋ ಅವರ ಕಲಾಕೃತಿಗಳು ಅತ್ಯಮೂಲ್ಯವಾಗಿದ್ದು, ಸೂಕ್ಷ್ಮ ಹಾಸ್ಯ ಮತ್ತು ವ್ಯಂಗ್ಯದಿಂದ ಕೂಡಿದ್ದು, ನಮ್ಮ ಸಾಮಾಜಿಕ ಮತ್ತು ರಾಜಕೀಯ ಒಲವು ಹಾಗೂ ದೋಷಗಳ ಮೇಲೆ ಮಾಡಲಾದ ವಿಮರ್ಶೆ ಅಥವಾ ಟೀಕೆಯಂತೆ ಕಂಡುಬರುತ್ತದೆ. ಅವರ ಕಲೆ ಮತ್ತು ಕೌಶಲ್ಯತೆ ಇತರರಿಗಿಂತ ವಿಶಿಷ್ಟ ರೀತಿಯದ್ದಾಗಿದೆ. ಅವರೊಬ್ಬ ಮಹಾನ್ ಮೇಧಾವಿಯಾಗಿದ್ದು, ತಮ್ಮ ಅಮೂಲ್ಯವಾದ ಕೃತಿಗಳ ಮೂಲಕ ಜನರ ಮನಸ್ಸಲ್ಲಿ ಚಿರಸ್ಥಾಯಿಯಾಗಿದ್ದಾರೆ.

ಮತ್ತೊಬ್ಬರ ಹೆಸರು **ವೆನ್ಡೆಲ್ ರೊಡ್ರಿಕ್ಸ್**. ಇವರು ಭಾರತೀಯ ಫ್ಯಾಶನ್ ಡಿಸೈನರ್ ಹಾಗೂ ಲೇಖಕ. ಸಲಿಂಗಿಗಳ ಸಮಸ್ಯೆ ಸೇರಿದಂತೆ ಹಲವು ಸಾಮಾಜಿಕ ಸಮಸ್ಯೆಗಳ ಕಾರ್ಯಕರ್ತ ಕೂಡ. ಅವರು ಸ್ವತಃ ಸಲಿಂಗಿ. ಫ್ಯಾಶನ್ ಡಿಸೈನಿಂಗ್ ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಅವರು ಗಾರ್ಡನ್ ವೆರೆಲಿ, ಲಕ್ಮೇ ಸೌಂದರ್ಯ ಸಾಧನಗಳು ಮತ್ತು ಡೀ ಬೀರ್ಸ್ ಮುಂತಾದ ಪ್ರಖ್ಯಾತ ಸಂಸ್ಥೆಗಳ ಉತ್ಪನ್ನಗಳಿಗೆ ವಸ್ತ್ರ ವಿನ್ಯಾಸ ಮಾಡಿದ್ದಾರೆ. ನಿಜವಾಗಿಯೂ ಇದು ಅವರ ಪಾಲಿಗೆ ದೊಡ್ಡಮಟ್ಟದ ಯಶಸ್ಸು ತಂದುಕೊಟ್ಟಿತು. ಅವರು ಹಿಂದಿರುಗಿ ನೋಡಲೇ ಇಲ್ಲ. ಕಲೆ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಅವರು ಪದ್ಮಶ್ರೀ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ನಾವು ಗೋವೆಯ ಓರ್ವ ರಾಜಕಾರಣಿ, ವಾಸ್ತುಶಿಲ್ಪಿ, ವ್ಯಂಗ್ಯ ಚಿತ್ರಕಾರ ಹಾಗೂ ವಸ್ತ್ರ ವಿನ್ಯಾಸಕನ ಬದುಕನ್ನು ಸವಿದಿದ್ದಾಯಿತು. ಈಗ ಗೋವೆಯ ಮತ್ತೊಬ್ಬ ಸುಪುತ್ರನ ಜೀವನ ಮತ್ತು ಸಾಧನೆಯನ್ನು ತಿಳಿಯುವ. ಅವರೇ ಹೆಸರಾಂತ ಸಂಗೀತಗಾರ ಮತ್ತು ಗಾಯಕ **ರೆಮೊ ಫರ್ನಾಂಡೀಸ್**. ಇವರು ಭಾರತದ ಪಾಪ್ ಸಂಗೀತದ ಪ್ರವರ್ತಕರೆಂದೇ ಹೆಸರು ವಾಸಿಯಾಗಿದ್ದಾರೆ. **ಅವರು ಎಲ್ಲೋ ಒಂದು ಕಡೆ, "ದೇವರು ಧರ್ಮಗಳಿಗಿಂತ ಆಚೆಗಿರುವವನು ಎಂಬುದನ್ನು ಮನದಟ್ಟು ಮಾಡಿಕೊಂಡೆ" ಎಂದು ಹೇಳಿದ್ದಾರೆ. ಅವರ ಈ ಒಂದು ಪ್ರಾಮಾಣಿಕ ಹೇಳಿಕೆಗೋಸ್ಕರವಾಗಿ ನಾನು ಅವರಿಂದ ಪ್ರಭಾವಿತನಾದೆ. ಏಕೆಂದರೆ, ಧರ್ಮಗಳು ಬಂಧಿಖಾನೆಗಳಿದ್ದಂತೆ. ಇವುಗಳಲ್ಲಿ ದೇವರೂ ಬಂಧಿತನಾಗಿದ್ದಾನೆ ಎಂದು ಭಾವಿಸಿದ್ದೇನೆ.** ರೆಮೊರವರೇ ನಿಮಗೆ ವಂದನೆಗಳು.

ದಿವಂಗತ ಮಾಜಿ ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರು, ಗೋವೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರ ಮುಂದೆ ಹಾಡಲು ಇವರನ್ನು ಆಹ್ವಾನಿಸಲಾಗಿತ್ತು. ಆಗಲೇ ಅವರು ಹೆಚ್ಚು ಪ್ರಸಿದ್ಧಿ ಹೊಂದಿರಬಹುದೆಂದು ತೋರುತ್ತದೆ. ಆಗ ಅವರು ಹಾಡಿದ ಪ್ರಸಿದ್ಧ ಹಾಡು "ಹಲೋ ರಾಜೀವ್ ಗಾಂಧಿ"! ಮಣಿರತ್ನಂ ನಿರ್ದೇಶನದ "ಬಾಂಬೆ" ಚಿತ್ರದ "ಹಮ್ಮ ಹಮ್ಮ" ಎಂದು ಪ್ರಾರಂಭವಾಗುವ ಹಾಡನ್ನು ಸಹ ಅವರು ಹಾಡಿದ್ದಾರೆ. ಈ ಚಿತ್ರಕ್ಕೆ ಎ.ಆರ್. ರೆಹಮಾನ್ ಸಂಗೀತ ಸಂಯೋಜಿಸಿದ್ದಾರೆ.

ಗೋವಾದ ಈ ಸುಪುತ್ರರು, ಪರಿಮಳ ಬೀರಿ, ಈ ಪುಟ್ಟ ರಾಜ್ಯವನ್ನು ಮತ್ತಷ್ಟು ಆಕರ್ಷಕವನ್ನಾಗಿಸಿದ್ದಾರೆ.

(ಮೂಲ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ)

(ಮುಂದುವರೆಯುವುದು)

voice
@starofmysore.com

ಆಕಾಶವಾಣಿಯಿಂದ ಇಂದು ಕನ್ನಡ ಹಬ್ಬ ಕಾರ್ಯಕ್ರಮ

ಮೈಸೂರು, ನ. 17– ಆಕಾಶವಾಣಿ ಮೈಸೂರು ಕೇಂದ್ರ ತನ್ನ ನುಡಿ ಸೇವೆಯಲ್ಲಿ 87 ವರ್ಷಗಳನ್ನು ಪೂರೈಸಿ 88ನೇ ವರ್ಷದಲ್ಲಿ ಮುನ್ನಡೆಯುತ್ತಿದೆ.

ಕನ್ನಡದ ನುಡಿಸೇವೆಯಲ್ಲಿ ನಿತ್ಯ ನಿರತವಾಗಿರುವ ನಮ್ಮ ಆಕಾಶವಾಣಿ ನ. 18ರ ಶುಕ್ರವಾರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಕನ್ನಡ ಹಬ್ಬವನ್ನು ಆಯೋಜಿಸಿದೆ. ಅಂದು ಬೆಳಿಗ್ಗೆಯಿಂದ ಸಂಜೆಯವರೆಗೆ ಮೈಸೂರಿನ ಯಾದವಗಿರಿಯಲ್ಲಿರುವ ಆಕಾಶವಾಣಿ ಆವರಣದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಆಹಾರ ಮಳಿಗೆಗಳು, ಪುಸ್ತಕ ಮಳಿಗೆಗಳು, ಉಚಿತ ಆರೋಗ್ಯ ತಪಾಸಣೆಯ ಮಳಿಗೆಗಳೂ ಜೊತೆಗೆ ಸಾರ್ವಜನಿಕ ಮಾಹಿತಿಯ ಇನ್ನೂ ಕೆಲವು ಮಳಿಗೆಗಳೂ ತೆರೆದಿ ರುತ್ತವೆ. ಸಂಜೆಯ 6 ಗಂಟೆಯಿಂದ ಮನ ರಂಜನೆಯ ಕಾರ್ಯಕ್ರಮವನ್ನೂ ಯೋಜಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಶುಕ್ರವಾರ 18-11-2022

ಬೆಳ್ಳಿ ಬೆಳಕು

ಈ ವಾರ 'ಅಬ್ಬರ'



ಕೆ.ರಾಮ್ ನಾರಾಯಣ್ ಅವರ ನಿರ್ದೇಶನದಲ್ಲಿ ಪ್ರಜ್ವಲ್ ದೇವರಾಜ್ ನಾಯಕನಾಗಿ ನಟಿಸಿರುವ ಚಿತ್ರ 'ಅಬ್ಬರ' ಇಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಬಿಡುಗಡೆಗೂ ಮುನ್ನ ನಡೆದ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ಚಿತ್ರತಂಡ ಒಂದಷ್ಟು ಮಾಹಿತಿಗಳನ್ನು ಹಂಚಿಕೊಂಡಿತು. ಸಿ. ಅಂಡ್ ಎಂ.ಮೂವೀಸ್ ಲಾಂಛನದಲ್ಲಿ ಬಸವರಾಜ್ ಮಂಚಯ್ಯ ಅವರು ನಿರ್ಮಿಸಿರುವ ಈ ಚಿತ್ರದಲ್ಲಿ ತಂದೆ ಮಗನ ನಡುವಿನ ಭಾವನಾತ್ಮಕ ಸಂಬಂಧ ಕುರಿತಂತೆ ಹೇಳಲಾಗಿದೆ. ಪ್ರಜ್ವಲ್ ಜೊತೆ ರಾಜಶ್ರೀ ಪೊನ್ನಪ್ಪ, ನಿಮಿಕಾ ರತ್ನಾಕರ್ ಹಾಗೂ ಲೇಖಾಚಂದ್ರ ನಾಯಕಿಯರಾಗಿ ಅಭಿನಯಿಸಿದ್ದಾರೆ. ನಾಯಕ ತನ್ನ ಫ್ಯಾಮಿಲಿಗೋಸ್ಕರ ಏನೆಲ್ಲ ಮಾಡುತ್ತಾನೆ ಅನ್ನೋದನ್ನು ಪ್ರೇಕ್ಷಕರ ಮನಮುಟ್ಟುವ ಹಾಗೆ ನಿರೂಪಿಸಲಾಗಿದೆ. ತಂದೆ ಒಂದು ತಪ್ಪು ಮಾಡ್ತಾನೆ, ಅದನ್ನು ಸರಿಪಡಿಸುವುದಕ್ಕೆ ಹೋಗಿ ಮತ್ತೊಂದು ತಪ್ಪು ಮಾಡ್ತಾನೆ. ನಂತರ ಮಗ ಅದನ್ನು ಹೇಗೆ ಸರಿಪಡಿಸ್ತಾನೆ ಅನ್ನೋದೇ ಈ ಚಿತ್ರದ ಎಳೆ. ತಾನು ನಡೆಯುವ ದಾರಿ ಹೀಗೇ ಇರಬೇಕು ಅಂದುಕೊಂಡಿದ್ದರೂ ಅದು ಹೋಗ್ತಾ ಹೋಗ್ತಾ ಕಳೆದುಹೋಗುತ್ತದೆ. ಮನುಷ್ಯ ಯಾವಾಗಲೂ ಜಾಗೃತೆನಾಗಿರಬೇಕು ಎನ್ನುವುದೇ 'ಅಬ್ಬರ' ಚಿತ್ರದ ಸಂದೇಶ. ಶೋಭರಾಜ್, ರವಿಶಂಕರ್, ಶಂಕರ್ ಅಶ್ವಥ್, ವಿಕ್ಟರಿ ವಾಸು, ಕೋಟೆ ಪ್ರಭಾಕರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಅಲ್ಲದೆ ರವಿ ಬಸ್ರೂರು ಅವರ ಅದ್ಭುತ ಮ್ಯೂಸಿಕ್, ಜೆ.ಕೆ.ಗಣೇಶ್ ಅವರ ಕ್ಯಾಮರಾ ವರ್ಕ್ ಚಿತ್ರಕ್ಕಿದೆ.



ಆರು ಪಾತ್ರಗಳಲ್ಲಿ 'ಬಿಂಗೊ' ರಹಸ್ಯ!

ಲಲಿತಾ ಸ್ವಾಮಿ ಮತ್ತು ಆರ್.ಪರಾಂಕುಶ ನಿರ್ಮಿಸುತ್ತಿರುವ, ಶಂಕರ್ ಕೋನಮಾನಹಳ್ಳಿ ಅವರ ನಿರ್ದೇಶನದ 'ಬಿಂಗೊ' ಚಿತ್ರದ ಮುಹೂರ್ತ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನೆರವೇರಿತು. ರಾಗಿಣಿ ದ್ವಿವೇದಿ ಹಾಗೂ ಆರ್.ಕೆ.ಚಂದನ್ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ.

ಮುಹೂರ್ತದ ನಂತರ ನಿರ್ದೇಶಕ ಶಂಕರ್ ಕೋನಮಾನಹಳ್ಳಿ ಮಾತನಾಡುತ್ತಾ ಇದು ನನ್ನ 2ನೇ ಚಿತ್ರ. ಬಿಂಗೊ ಪದಕ್ಕೆ ಹಲವು ಅರ್ಥಗಳಿವೆ. ಇದೊಂದು ಸಸ್ಪೆನ್ಸ್, ಥ್ರಿಲ್ಲರ್ ಕಥೆಯಾಧಾರಿತ ಚಿತ್ರ ಎಂದು ಹೇಳಬಹುದು. ಚಿತ್ರದಲ್ಲಿ ಆರು ಪ್ರಮುಖ ಪಾತ್ರಗಳಿರುತ್ತವೆ. ಅದರಲ್ಲಿ ಮುಖ್ಯ ಪಾತ್ರವನ್ನು ರಾಗಿಣಿ ಅವರು ನಿರ್ವಹಿಸುತ್ತಿದ್ದಾರೆ. ಅರ್.ಕೆ. ಚಂದನ್ ಚಿತ್ರದ ನಾಯಕನಾಗಿದ್ದು, ರಕ್ಷಾನಿಂಬರ್ಗಿ ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ. ರಾಜೇಶ್ ನಟರಂಗ, ಪವನ್(ಮಜಾ ಟಾಕೀಸ್), ಮುರಳಿ ಪೂರ್ವಿಕ್, ಅಪೂರ್ವ, ಆಶಾಸುಜಯ್, ಶ್ರವಣ್, ವಿದ್ಯಾ, ಕುಮಾರ್ ಮುಂತಾದ ಕಲಾವಿದರು ಬಿಂಗೊ ಚಿತ್ರದಲ್ಲಿರುತ್ತಾರೆ. ಬಹುತೇಕ ಚಿತ್ರೀಕರಣ ಬೆಂಗಳೂರಿನಲ್ಲೇ ನಡೆಯಲಿದೆ ಎಂದು ವಿವರಣೆ ನೀಡಿದರು.

ನಟಿ ರಾಗಿಣಿ ದ್ವಿವೇದಿ ಮಾತನಾಡುತ್ತಾ ಈ ಚಿತ್ರದ ಪಾತ್ರ ತುಂಬಾ ಚೆನ್ನಾಗಿದೆ. ಪಾತ್ರ ಕುರಿತು ಹೆಚ್ಚು ಹೇಳುವ ಹಾಗಿಲ್ಲ. ಮುಂದೆ ನನ್ನ ಪಾತ್ರದ ಬಗ್ಗೆ ಮಾಹಿತಿ ನೀಡುತ್ತೇನೆ. ಒಟ್ಟಿನಲ್ಲಿ ನಾನು ಈ ಹಿಂದೆ ಮಾಡಿರುವ ಎಲ್ಲಾ ಪಾತ್ರಗಳಿಗಿಂತ ಇದು ಸ್ವಲ್ಪ ವಿಭಿನ್ನ ಅಂತಾನೇ ಹೇಳಬಹುದು. ಹೊಸ ನಿರ್ದೇಶಕರ ಜೊತೆ ಕೆಲಸ ಮಾಡಲು ತುಂಬಾ ಖುಷಿಯಾಗುತ್ತದೆ ಎಂದರು. ನಾಯಕ ಆರ್.ಕೆ. ಚಂದನ್ ಮಾತನಾಡುತ್ತಾ ನಾನು ಧಾರಾವಾಹಿಯಲ್ಲಿ ಅಭಿನಯಿಸಬೇಕಾದರೆ, ಶಂಕರ್ ಅವರ ಪರಿಚಯವಾಯಿತು. ಆಗ ನನ್ನ ಬಳಿ ಈ ಚಿತ್ರ ಕುರಿತಂತೆ ಮಾತ ನಾಡಿದರು. ಇದೇ ಮೊದಲ ಬಾರಿಗೆ ನಾನು ಹಿರಿತೆರೆಯಲ್ಲಿ ನಾಯಕನಾಗಿ ನಟಿಸುತ್ತಿದ್ದೇನೆ ಎಂದು ಹೇಳಿದರು.

ನಿರ್ಮಾಪಕ ಪುನೀತ ಹಾಗೂ ಆರ್. ಪರಾಂಕುಶ್ ಮಾತನಾಡುತ್ತಾ, ಇದು ನಮ್ಮ ಬ್ಯಾನರ್ ಮೂಲಕ ನಿರ್ಮಾಣವಾಗುತ್ತಿರುವ ಮೊದಲ ಚಿತ್ರ. ಕಥೆ ಇಷ್ಟವಾಗಿ ಚಿತ್ರನಿರ್ಮಾಣಕ್ಕೆ ಮುಂದಾದೆವು ಎಂದು ಹೇಳಿದರು. ನಾಯಕಿ ರಕ್ಷಾ ನಿಂಬರ್ಗಿ, ಸಂಗೀತ ನಿರ್ದೇಶಕ ಹಿತನ್ ಹಾಸನ್, ಛಾಯಾಗ್ರಾಹಕ ನಟರಾಜ್ ಮುದ್ದಾಲ್ ಮುಂತಾದವರು ಚಿತ್ರದ ವಿಶೇಷತೆಗಳ ಕುರಿತು ಮಾತನಾಡಿದರು.

ಸದ್ಯದಲ್ಲೇ 'ಟೆಂಪರ್' ಟ್ರೈಲರ್

ಸಾಹಿತಿ, ಸಂಗೀತ ಸಂಯೋಜಕ ಮಂಜುಕವಿ ಈಗ 'ಟೆಂಪರ್' ಎಂಬ ಚಿತ್ರವನ್ನು ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ನಿರ್ದೇಶನ ಮಾಡಿದ್ದಾರೆ. ಮಾಸ್ ಲವ್ ಸ್ಟೋರಿ ಒಳಗೊಂಡ ಈ ಚಿತ್ರದ ಟ್ರೈಲರ್ ಇದೇ ತಿಂಗಳು ಬಿಡುಗಡೆಯಾಗಲಿದೆ, ಅಲ್ಲದೆ ಚಿತ್ರ ಡಿಸೆಂಬರ್‌ನಲ್ಲಿ ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಬೆಂಗಳೂರು, ಮಂಡ್ಯ, ಮೈಸೂರು, ನಂಜನಗೂಡು, ಶ್ರೀರಂಗಪಟ್ಟಣ, ಚಿಕ್ಕಮಗಳೂರು ಹಾಗೂ ಮಡಿಕೇರಿ ಸುತ್ತಮುತ್ತ 50 ದಿನಗಳ ಕಾಲ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ.

ಚಿಕ್ಕವನಿದ್ದಾಗಿಂದ ತಕ್ಷಣ ಕೋಪಗೊಳ್ಳುವ ಗುಣ ಹೊಂದಿದ ನಾಯಕ ಅದೇ ಊರಿನ ಗೌಡನ ಮಗಳನ್ನು ಪ್ರೀತಿ ಮಾಡುತ್ತಾನೆ. ನಾಯಕಿ ಕುಟುಂಬದವರಿಂದ ವಿರೋಧ ವ್ಯಕ್ತವಾದ ನಂತರ ಆತ ಹೇಗೆ ತನ್ನ ಕುಟುಂಬ ಹಾಗೂ ಪ್ರೇಯಸಿ ಇಬ್ಬರನ್ನು ಕಾಪಾಡಿಕೊಳ್ಳುತ್ತಾನೆ ಎನ್ನುವುದೇ 'ಟೆಂಪರ್' ಚಿತ್ರದ ಕಥೆ.

ಶ್ರೀಬಾಲಾಜಿ ಎಂಟರ್‌ಪ್ರೈಸಸ್ ಮೂಲಕ ಮೋಹನ್‌ಬಾಬು ಹಾಗೂ ವಿನೋದಕುಮಾರ್ ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಮಂಜುಕವಿ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸಿದ್ದಾರೆ, ಈ ಚಿತ್ರದ ಮೂಲಕ ಆರ್ಯನ್ ಸೂರ್ಯ ಹಾಗೂ ಕಾಶಿಮಾ ಮೊದಲ ಬಾರಿಗೆ ನಾಯಕ, ನಾಯಕಿಯಾಗಿ ಬಣ್ಣ ಹಚ್ಚಿದ್ದು, ಬಾಲನಟನಾಗಿ ಮಾಸ್ಟರ್ ಪವನ್ ಮೋರೆ ಅಭಿನಯಿಸಿದ್ದಾರೆ.

ಉಳಿದಂತೆ ತಬಲಾ ನಾಣಿ, ಸುಧಾ ಬೆಳವಾಡಿ, ಟೆನ್ನಿಸ್ ಕೃಷ್ಣ, ಊರಗೌಡನಾಗಿ ಬಲ ರಾಜವಾಡಿ, ಯತಿರಾಜ್, ನಂದಿನಿ, ವಿಠಲ, ಪ್ರಿಯ ತರುಣ್, ಸನತ್, ವಿನೋದ್ ಮೀಥಾಲಿ, ಶಶಿ ಹಾಗೂ ಅನೇಕ ಹಿರಿಯ ಕಲಾವಿದರು ಈ ಚಿತ್ರದಲಿ ನಟಿಸಿದ್ದಾರೆ. ಚಿತ್ರದಲ್ಲಿ 5 ಹಾಡುಗಳಿದ್ದು, ಆರ್.ಹರಿಬಾಬು ಸಂಗೀತ ಸಂಯೋಜನೆ ಮಾಡಿದ್ದಾರೆ. ಆರ್.ಕೆ.ಶಿವಕುಮಾರ್ ಅವರ ಕ್ಯಾಮರಾ ವರ್ಕ, ಬಿ.ಎಸ್.ಕೆಂಪರಾಜ್ ಅವರ ಸಂಕಲನ ಈ ಚಿತ್ರಕ್ಕಿದೆ.



ವಿನಾಯಕನ ಸನ್ನಿಧಿಯಲ್ಲಿ 'ಬುಲೆಟ್' ಚಾಲನೆ




ಧರ್ಮ ಕೀರ್ತಿರಾಜ್ ನಾಯಕರಾಗಿ ನಟಿಸುತ್ತಿರುವ, ಸತ್ಯಜಿತ್ ಅವರ ನಿರ್ಮಾಣ ಹಾಗೂ ನಿರ್ದೇಶನವಿರುವ "ಬುಲೆಟ್" ಚಿತ್ರದ ಮುಹೂರ್ತ ಶ್ರೀ ವಿನಾಯಕನ ದೇವಸ್ಥಾನದಲ್ಲಿ ನೆರವೇರಿತು. ಮೊದಲ ದೃಶ್ಯಕ್ಕೆ ಶಾಸಕ ಭೈರತಿ ಸುರೇಶ್, ರಕ್ಷಣಾ ವೇದಿಕೆಯ ಅಧ್ಯಕ್ಷ ಪ್ರವೀಣ್ ಶೆಟ್ಟಿ ಆರಂಭ ಫಲಕ ತೋರಿಸಿದರು.

ಮುಹೂರ್ತದ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಿರ್ಮಾಪಕ, ನಿರ್ದೇಶಕ ಸತ್ಯಜಿತ್, 'ಬುಲೆಟ್' ಒಂದು ಕ್ರೈಮ್ ಥ್ರಿಲ್ಲರ್ ಹಾಗೂ ಫ್ಯಾಮಿಲಿ ಸೆಂಟಿಮೆಂಟ್ ಕಥಾಹಂದರ ಇರುವ ಚಿತ್ರ. ಬೆಂಗಳೂರು, ಗೋವಾ ಹಾಗೂ ಮಂಗಳೂರಿನ ಸುತ್ತಮುತ್ತ ಒಂದೇ ಹಂತದಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದೆ. ಚಿತ್ರದಲ್ಲಿ ನಾಯಕನಾಗಿ ಧರ್ಮ ಕೀರ್ತಿರಾಜ್ ನಟಿಸುತ್ತಿದ್ದಾರೆ. ಮುಂಬೈನ ಶ್ರೀಯಾ ಶುಕ್ಲಾ ಹಾಗೂ ಅಜಿತಾ ಜಾ ನಾಯಕಿಯರು. ಈಗಾಗಲೇ ಶ್ರೀಯಾ ಅವರು ಸುಶಾಂತ್‌ಸಿಂಗ್ ಅವರ ಬಯೋಪಿಕ್ ಚಿತ್ರದಲ್ಲಿಯೂ ನಟಿಸಿದ್ದಾರೆ. ಇನ್ನು ಅಜಿತಾ ಅವರು ಹಿಂದಿಯ ಹಲವಾರು ವೆಬ್‌ಸೀರಿಸ್‌ಗಳಲ್ಲಿ ನಟಿಸಿದ್ದಾರೆ ಎಂದು ಮಾಹಿತಿ ನೀಡಿದರು.

ನಾಯಕ ಧರ್ಮ ಕೀರ್ತಿರಾಜ್ ಮಾತನಾಡುತ್ತಾ ಸತ್ಯಜಿತ್ ಅವರು ಈಗಾಗಲೇ ಹಿಂದಿ ಹಾಗೂ ತಮಿಳಿನಲ್ಲಿ ಕೆಲವು ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಕನ್ನಡದಲ್ಲಿ ಮೊದಲ ಬಾರಿಗೆ ನಿರ್ಮಿಸಿ, ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದ ಕಥೆ ತುಂಬಾ ಚೆನ್ನಾಗಿದೆ. ತಂದೆ, ಮಗನ ನಡುವಿನ ಸೆಂಟಿಮೆಂಟ್ ಸನ್ನಿವೇಶಗಳು ಜನರಿಗೆ ಹತ್ತಿರವಾಗಲಿದೆ. ಈ ಚಿತ್ರದಲ್ಲಿ ನನ್ನ ತಂದೆಯ ಪಾತ್ರವನ್ನು ಸತ್ಯಜಿತ್ ಅವರೇ ಮಾಡುತ್ತಿದ್ದಾರೆ. ನನ್ನ ಪಾತ್ರ ಎರಡು ಶೇಡ್‌ಗಳಲ್ಲಿ ಮೂಡಿಬರಲಿದೆ. ಒಳ್ಳೆಯ ತಂಡದೊಂದಿಗೆ ಕೆಲಸ ಮಾಡುತ್ತಿರುವ ಖುಷಿಯಿದೆ ಎಂದು ಹೇಳಿದರು. ನಾಯಕಿಯರಾದ ಶ್ರೀಯಾ ಶುಕ್ಲ ಹಾಗೂ ಅಜಿತಾ ಜಾ ತಂತಮ್ಮ ಪಾತ್ರಗಳನ್ನು ಪರಿಚಯ ಮಾಡಿಕೊಂಡು, ಕನ್ನಡ ಚಿತ್ರದಲ್ಲಿ ಅಭಿನಯಿಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಸಹ ನಿರ್ದೇಶಕ, ನಟ ಇಶ್ಯಾಕ್ ಬಾಜಿ, ಛಾಯಾಗ್ರಹಕ ಪಿ.ವಿ.ಆರ್.ಸ್ವಾಮಿ, ಸಂಗೀತ ನಿರ್ದೇಶಕ ರಾಜ್‌ಭಾಸ್ಕರ್ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದು, ಚಿತ್ರದ ಕುರಿತಂತೆ ಮಾತನಾಡಿದರು.

ಸಿನಿಪದಬಂಧ-450

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______________________

ವಿಳಾಸ ______________________

____

ದೂರವಾಣಿ ಸಂಖ್ಯೆ ______________________

ವಿಜೇತರು: ಜೀವನ್ ಜಿ. ನಂ. 124, ಮೊದಲನೇ ಬೀದಿ, ಎರಡನೇ ಕ್ರಾಸ್, ಕುಂಬಾರಕೊಪ್ಪಲು, ಮೈಸೂರು-570016

ಎಡದಿಂದ ಬಲಕ್ಕೆ

1.ವಾರಣಾಸಿ ಮುನ್ನವೇ ಜಯತೀರ್ಥ ನಿರ್ದೇಶನದ ಪ್ರೇಮಕಾವ್ಯ !	4
3.ಪ್ರಭಾಕರ್ – ಜಯಮಾಲಾ ಬರೆದ "ಹಿಸ್ಟರಿ"	6
7.ಈ ನಟನಿಗೆ ಡೈಲಾಗೇ ಬಂಡವಾಳ...	5
9.ಅಶೋಕ್ ದ್ವಿಪಾತ್ರವಿರಲು ಮಣಿ ಮುರುಗನ್ ನಿರ್ದೇಶಕ	6
11.ಅಂಬಿಯ ಡೈಲಾಗ್ ಮಾತಾಡಕ್ಕಿಲ್ವಾ ಎನ್ನುವ ಮೊದಲೇ ತಿರುಗಿದೆ	4
13.ಶ್ರೀಮುರಳಿಯ ಸಲಗದ ಭರಾಟೆ ಜೋರಾಗಿಯೇ ಇತ್ತು...	4
16."ಟೈಗರ್"ಗೆ ಕೈ ತುತ್ತು ಕೊಟ್ಟೋಳೆ ಐ ಲವ್ ಯು ಮೈ ಮದರ್ ಇಂಡಿಯಾ...	6
19.ಜಯತು ಜಯ ವಿಠಲ ಪಾಂಡುರಂಗನ ನಾಮವ ಭಜಿಸಿದ 'ಸಾಧು'	5
21.ಅಯ್ಯ ಚಿತ್ರದ ಹಾಡಿನಲ್ಲಿ ನಾಯಕಿ ದ್ವಿರುಕ್ತಿಯಾಗಿದ್ದಾಳೆ	6
22.ಗಡಿಬಿಡಿ ಗಂಡ ಚಿತ್ರದ ಟೈಟಲ್ ಸಾಂಗ್‌ನಲ್ಲಿ ಬಂದ ಹೆಂಡತಿ ಎಂತಹವಳು...	4

ಮೇಲಿನಿಂದ ಕೆಳಕ್ಕೆ

1. ಡಾಲಿ ಧನಂಜಯನ ಮುದ್ದಾದ ಬೈಗುಳ !	6
2.ಆ ಕಿರಣಗಳಿಗೆ ಚುಂಬಿಸೋ ರಘುರಾಮ...ಹೊಂಗಿರಣದೊಳಗೆ ಸುಂದರ.......	4
3.ಪುಕ್ಸಟ್ಟೆ ಗಂಡ – – ತುಂಬ ಉಂಡ	2
4. ಅಂಗ್ಲದಲ್ಲಿ 'ಮುಗುಳ್ನಗೆ' ಬೀರಿದ ಕಲಾ ನಿರ್ದೇಶಕ	4
5.ನವರಸ ನಾಯಕ 'ಸೋಮಣ್ಣ'ನ ಕರ್ತವ್ಯ	3
6.'ಕ್ರಮ' ಜರುಗಿಸಿದ ನಟಿ	2
8.ಕಿರುತೆರೆಯಲ್ಲಿ ಮತ್ತೇ ಕಾಣಿಸಿಕೊಂಡ ಅದೃಷ ಪ್ರಾಣಿ	4
10.ಜನಸೇವೆಯೇ ಜನಾರ್ಧನ ಸೇವೆ ಎಂಬ ಧ್ಯೇಯವುಳ್ಳವನು	4
12. ರಿಯಲ್ ಸ್ಟಾರ್ ಉಪೇಂದ್ರ ಚಾಣಕ್ಯ	4
14.ಶಿವಣ್ಣನ ಈ ಚಿತ್ರಕ್ಕೆ 'ಮಲೇಲಾ ಜೀವ್' ಗುಜರಾತಿ ಕಾದಂಬರಿ ಆಧಾರ	6
15. ಮರಿ ಟೈಗರ್ ರಾವಣನ ವೇಷದಲ್ಲಿ ಬರುತ್ತಿದ್ದಾನೆ	4
17.ಯುವರಾಜ ಚಿತ್ರದ ನಾಯಕಿ ಇಲ್ಲಿ ರೇ ಕಳೆದು ಕೊಂಡಿದ್ದಾಳೆ	2
18.ಗಂಡ,ಕೃಷ್ಣ, ಬ್ರದರ್ಸ್ ಹಿಂದೆ ಇರುವ ಗೊಂದಲ	4
19.ಗಿರೀಶ್ ಕಾರ್ನಾಡ್ ಅವರ ಧಾರ್ಮಿಕ ಕ್ರಿಯೆ	3
20."ಜೊತೆಯಲಿ ಜೊತೆ ಜೊತೆಯಲಿ....", ಹಾಡಿನೊಂದಿಗಿನ ಚಿತ್ರವಿದು	2

ಸಿನಿ ಪದಬಂಧ 449ರ ಸರಿ ಉತ್ತರ

■	■	■	■	ಗು	ಬ್ಬಿ	ಮೇ	ಲೆ	ಬ್ರ	ಹ್ಮಾ	ಸ್ತ್ರ
ನ	ಗಾ	ರಿ	■	ಳ್ಳ	■	ಯ	■	ಹ್ಮ	■	■
ಮ್ಮ	■	■	■	■	■	ರ್	■	ವಿ	■	ಬಾ
ಊ	ರ್ವ	ಶಿ	ಕ	ಲ್ಯಾ	ಣ	■	ವಿ	ಷ್ಣು	ಸೇ	ನಾ
ರು	■	ವ	■	■	ರ	■	■	ಮ	■	ಡಿ
■	ಅ	ಭ	ಯ್	■	ಭ	■	ಸಾ	ಹೇ	ಬ	■
ಬಂ	■	ಕ್ತ	■	■	ರ್ಜ	■	■	ಶ್ವ	■	ಧೂ
ಗಾ	ಳಿ	ಮಾ	ತು	■	ಕ	ನ್ನೇ	ಶ್ವ	ರ	ರಾ	ಮ
ರಿ	■	ರ್ಣಂ	■	ಬ	■	■	■	■	■	ಕೇ
■	■	ಡೇ	■	ಳ	■	ಸೋ	■	ಅ	ನಂ	ತು
ಪ್ರೀ	ಮಿ	ಯ	ರ್	ಪ	ದ್ಮಿ	ನಿ	■	■	■	■

2023ಕ್ಕೆ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ: ಹೆಚ್‌ಡಿಕೆ ಭವಿಷ್ಯ



ಮಳವಳ್ಳಿ, ನ.17– ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಲಿದ್ದು, ನಾನೇ ರಾಜ್ಯದ ಮುಖ್ಯಮಂತ್ರಿಯಾಗುವೆ. ಜೊತೆಗೆ ಮಳವಳ್ಳಿಯಲ್ಲಿ ಬಸವ ಭವನ ನಿರ್ಮಾಣಕ್ಕೆ ಒಂದು ಕೋಟಿ ರೂ. ಅನುದಾನ ನೀಡುವೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ತಾಲೂಕಿನ ಉಪ್ಪನಹಳ್ಳಿ (ಕನ್ನಹಳ್ಳಿ)ಯಲ್ಲಿ ಬಸವ ಭವನ ಶಂಕುಸ್ಥಾಪನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಹಿಂದೆ ಮಳವಳ್ಳಿಯ ಬಸವ ಭವನ ನಿರ್ಮಾಣಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು 25 ಲಕ್ಷ ಅನುದಾನ ನೀಡಿದ್ದಾರೆ. ಮುಂದಿನ ಚುನಾವಣೆಯಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಮಳವಳ್ಳಿಯಲ್ಲಿ ಬಸವ ಭವನ ನಿರ್ಮಾಣಕ್ಕೆ ನಾನು ಸಹ ಒಂದು ಕೋಟಿ ನೀಡುತ್ತೇನೆ ಎಂದರು.

ಪ್ರಸ್ತುತ ಸಮಾಜದಲ್ಲಿ ಮಾನವೀಯ ಮೌಲ್ಯಗಳು ಹಾಳಾಗುತ್ತಿವೆ. ಕಾಯಕವೇ ಕೈಲಾಸ ಎಂಬ ಸಂದೇಶ ಸಾರಿದ ಬಸವಣ್ಣನವರ ತತ್ವಗಳು ನಿಜ ಜೀವನದಲ್ಲಿ ಅಳವಡಿಕೆಯಾಗಬೇಕು ಎಂದರು. ಅನ್ನದಾನಿ ಕ್ಷೇತ್ರದ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದು, ಅವರ ಕಾರ್ಯಕ್ಕೆ ನನ್ನ ಮೆಚ್ಚುಗೆ ಇದೆ. ಸಣ್ಣಪುಟ್ಟ ಸಮಸ್ಯೆಗಳಿದ್ದರೆ ಸರಿಪಡಿಸಿಕೊಳ್ಳಲಿ. ನಿಮ್ಮ ಆಶೀರ್ವಾದ ಸದಾ ಇರಲಿ ಎಂದರು.

ಬಸವ ಭವನಕ್ಕೆ ಶಂಕುಸ್ಥಾಪನೆ ಮಾಡಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಬಸವಣ್ಣನವರು ತಮ್ಮ ವಚನಗಳ ಮೂಲಕ ನೀಡಿದ ಆದರ್ಶ ಹಾಗೂ ತತ್ವಗಳು ಇಂದಿಗೂ ಪ್ರಸ್ತುತ. ಬಸವಣ್ಣ ವಿಶ್ವದ ಗುರು, ಜ್ಞಾನದ ಸಂಕೇತವಾಗಿದ್ದಾರೆ. ಬಸವಣ್ಣನವರ ಆದರ್ಶ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು ನಮ್ಮ ಕರ್ತವ್ಯ ಎಂದರು.

ಮಳವಳ್ಳಿ–ಮೈಸೂರಿನ ರಸ್ತೆಯಲ್ಲಿ ಬಸವ ಭವನ ಹಾಗೂ ಕನಕ ಭವನ ನಿರ್ಮಾಣವಾಗುತ್ತಿದೆ. ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ಅನುದಾನ ಬಿಡುಗಡೆ ಮಾಡಿಸುತ್ತೇನೆ. ಬಸವಣ್ಣ, ಅಂಬೇಡ್ಕರ್ ಹಾಗೂ ಕನಕದಾಸರು ಸೇರಿದಂತೆ ಇತರ ಮಹನೀಯರ ನಡೆದು ಬಂದ ದಾರಿ ಅನುಸರಿಸಿ ಬದುಕನ್ನು ಕಟ್ಟಿಕೊಳ್ಳಬೇಕು. ಮೌಢ್ಯತೆ ದೂರ ಮಾಡಿ, ಕಾಯಕವೇ ಕೈಲಾಸ ಎಂದು ಬದುಕಬೇಕು ಎಂದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕಾಗಿನೆಲೆ ಕನಕ ಗುರುಪೀಠದ ಶ್ರೀನಿರಂಜನಾನಂದ ಪುರಿ ಸ್ವಾಮೀಜಿ, ದೇಗುಲ ಮಠದ ಶ್ರೀಮುಮ್ಮಡಿ ನಿರ್ವಾಣ ಮಹಾಸ್ವಾಮಿ ದಿವ್ಯ ಸಾನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಶಾಸಕ ಡಾ.ಕೆ.ಅನ್ನದಾನಿ, ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್, ತಹಸೀಲ್ದಾರ್ ಎಂ. ವಿಜಿಯಣ್ಣ, ಮಳವಳ್ಳಿ ತಾಲೂಕಿನ ಹಿಂದುಳಿದ ವರ್ಗಗಳ ಇಲಾಖೆಯ ಅಧಿಕಾರಿ ಬಿ.ಸಿ.ರೇಖಾ ಸೇರಿದಂತೆ ಹಲವರಿದ್ದರು.

ಪ್ರತಾಪ್ ಸಿಂಹಗೆ ಕಟ್ಟಿ ಅಭ್ಯಾಸವಿಲ್ಲ, ಕೆಡವಿ ಅಭ್ಯಾಸ: ವಾಗ್ದಾಳಿ

ಮಳವಳ್ಳಿ: ಮೈಸೂರಿನಲ್ಲಿ ಗೋಪುರ–ಗುಂಬಸ್ ಕಿತ್ತಾಟ ವಿಚಾರವಾಗಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಪ್ರತಾಪ್‌ಸಿಂಹಗೆ ಕಟ್ಟಿ ಅಭ್ಯಾಸವಿಲ್ಲ, ಕೆಡವಿ ಅಭ್ಯಾಸ. ಬಸ್ ನಿಲ್ದಾಣದಲ್ಲಿ ಗೋಪುರ ಇದಿಯೋ, ಗುಂಬಸ್ ಇದಿಯೋ ಅನ್ನೋದು ಮುಖ್ಯವಲ್ಲ. ಜನರಿಗೆ ನೆರಳು ಕೊಡುವುದು ಜನಪ್ರತಿನಿಧಿಗಳ ಕರ್ತವ್ಯ. ನೆರಳಿನಲ್ಲಿ ಯಾವುದೇ ವ್ಯತ್ಯಾಸ ಇಲ್ಲ ಎಂದು ಸಂಸದ ಪ್ರತಾಪ್‌ಸಿಂಹ ವಿರುದ್ಧ ವಾಗ್ದಾಳಿ ನಡೆಸಿದರು.

ಹೊಡೆಯಬೇಕು ಅನ್ನುವುದು ಮೂರ್ಖರು ಹೇಳುವ ಮಾತು. ನಿರ್ಮಾಣ ಮಾಡಬೇಕಾದರೆ ಬುದ್ಧಿ ಇರಲಿಲ್ಲವಾ? ಅವರಿಗೆ ಕಟ್ಟಿ ಅಭ್ಯಾಸವಿಲ್ಲ, ಕೆಡವಿ ಅಭ್ಯಾಸ. ಸಂಸದನಿಂದ ಶಾಸಕ ನೋವು ಅನುಭವಿಸ್ತಿರೋ ವಿಚಾರಕ್ಕೆ ಪ್ರತಿಕ್ರಿಯಿಸಿ, ಶಾಸಕರೇ ನೋವು ಅನುಭವಿಸ್ತಿದ್ದಾರೆ ಅಂತಾರೆ. ಇನ್ನೂ ಮತ ಕೊಟ್ಟ ಜನರ ಪರಿಸ್ಥಿತಿ ಏನು ಅಂತಾ ಅರ್ಥ ಮಾಡಿಕೊಳ್ಳಿ ಎಂದು ಟೀಕಿಸಿದರು.

ಮಂಡ್ಯದ ರಸ್ತೆಗಳಲ್ಲಿ ಗುಂಡಿ ಹೆಚ್ಚಾದ ಪ್ರಕರಣಕ್ಕೆ ಪ್ರತಿಕ್ರಿಯಿಸಿ, ಪ್ರಧಾನಿ ಬರ್ತಾರೆ ಎಂದು ಮಾಡಿದ ಡಾಂಬಾರು ರಸ್ತೆಗಳೆ ಕಿತ್ತು ಹೋಗಿವೆ. ಇನ್ನು ಇವರಿಗೆ ಮಂಡ್ಯ ಯಾವ ಲೆಕ್ಕ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

ಮುಂದಿನ ಬಾರಿ ಕುಮಾರಸ್ವಾಮಿ ಸಿಎಂ ಆಗ್ತಾರೆ ಎಂಬ ಸರ್ವೆ ವರದಿ ವಿಚಾರಕ್ಕೆ ಪ್ರತಿಕ್ರಿಯಿಸಿ, ಭಗವಂತ ಯಾರ ಹಣೆ ಮೇಲೆ ಏನು ಬರೆದಿದ್ದಾನೋ ಗೊತ್ತಿಲ್ಲ. ಬಹಳ ಜನಕ್ಕೆ ನಾನು ಮುಖ್ಯಮಂತ್ರಿ ಆಗಬೇಕು ಎನ್ನುವ ಆಸೆಯಿದೆ. ಜನರೇ ಈ ಬಾರಿ ಜನತಾದಳವನ್ನು ಬೆಂಬಲಿಸಲಿದ್ದಾರೆ ಎಂದು ಹೇಳಿದರು.

10 ದಿನ ಪೂರೈಸಿದ ರೈತರ ಧರಣಿ: ಸಂಸದೆ ಸುಮಲತಾ ಸಾಥ್

ಮಂಡ್ಯ, ನ.17– ನಗರದ ಸರ್.ಎಂ.ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ 10 ದಿನ ಪೂರೈಸಿದ್ದು, ಪ್ರತಿಭಟನೆಗೆ ಸಂಸದೆ ಸುಮಲತಾ ಸಾಥ್ ನೀಡಿದರು.



ಈ ವೇಳೆ ಮಾತನಾಡಿದ ಅವರು, ರೈತರ ಸಮಸ್ಯೆಗೆ ನಾನು ಸದಾ ಸ್ಪಂದಿಸಲಿದ್ದು, ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡುವ ಬಗ್ಗೆ ಶೀಘ್ರ ಸಿಎಂ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸುವುದಾಗಿ ಹೇಳಿದರು. ಈ ಹಿಂದಿನಿಂದಲೂ ನಾನು ರೈತರ ಪರವಿದ್ದು, ಅಕ್ರಮ ಗಣಿಗಾರಿಕೆ, ಮೈಷುಗರ್ ಸೇರಿದಂತೆ ಅನೇಕ ವಿಚಾರದಲ್ಲಿ ರೈತರ ದನಿಯಾಗಿದ್ದೇನೆ. ಸಿಎಂ ಜೊತೆಗೆ ಮಾತುಕತೆ ಸಂದರ್ಭ ರೈತ ಮುಖಂಡರನ್ನು ಕರೆದೊಯ್ಯುವೆ ಎಂದ ಅವರು, ಕಬ್ಬಿಗೆ ಎಫ್‌ಆರ್‌ಪಿ ದರ ನಿಗದಿ ಕೇಂದ್ರ ಸರ್ಕಾರದ್ದಲ್ಲ. ರಾಜ್ಯ ಸರ್ಕಾರ ನಿಗದಿ ಮಾಡಬೇಕೆಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳುತ್ತಾರೆ. ಈ ನಿಟ್ಟಿನಲ್ಲಿ ಸಿಎಂ ಜೊತೆಗೆ ಚರ್ಚೆ ಮಾಡುವುದಾಗಿ ಹೇಳಿದರು.

ರೈತರ ಸಮಸ್ಯೆಗಳನ್ನು ಯಾರೂ ಕೇಳುತ್ತಿಲ್ಲ, ಮಂಡ್ಯ ಜಿಲ್ಲೆ ಬಗ್ಗೆ ಕೆ.ಎಸ್.ಪುಟ್ಟಣ್ಣಯ್ಯ ಸದನದಲ್ಲಿ ದನಿ ಎತ್ತುತ್ತಿದ್ದರು, ಈಗ ಯಾರೂ ಇಲ್ಲ, ನಿಮ್ಮ ಸಮಸ್ಯೆಗಳನ್ನು ಯಾರು ಚರ್ಚೆ ಮಾಡುತ್ತಾರೆ ಎಂಬುದು ಮುಖ್ಯವಾಗಬೇಕು. ಈಗ ನಡೆಯುತ್ತಿರುವ ಚರ್ಚೆ ಕಾರ್ಪೊರೇಟ್ ಕಂಪನಿಗಳಿಗೆ ಲಾಭ ಮಾಡಿಕೊಡುವ ಉದ್ದೇಶದ ಮೂಲವಾಗಿದೆ ಎಂದು ಆರೋಪಿಸಿದರು. ರೈತ ಮುಖಂಡ ಕೆಂಪೂಗೌಡ ಮಾತನಾಡಿ, ಮೈಷುಗರ್ ಸಕ್ಕರೆ ಕಾರ್ಖಾನೆ ಉಳಿವಿಗೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಈಗ ಆರಂಭವಾಗಿರುವ ಕಾರ್ಖಾನೆ ಇನ್ನು ಸಮರ್ಪಕವಾಗಿ ನಡೆಯುತ್ತಿಲ್ಲ. ಇದನ್ನು ಸರ್ಕಾರ ನಡೆಸಲು ಆಗುವುದಿಲ್ಲವೆಂದು ಅಲ್ಲೊಬ್ಬ ಸಚಿವ ಹೇಳುತ್ತಾರೆ ಎಂದು ಮುರುಗೇಶ್ ನಿರಾಣಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಸುಮಲತಾ ಬೆಂಬಲಿಗರಾದ ಶಶಿ, ಮದನ್, ಹೋರಾಟಗಾರರಾದ ಜಯರಾಮ್, ಕೆ.ಪಿ.ಗೋವಿಂದೇಗೌಡ, ಶಿವಳ್ಳಿ ಚಂದ್ರು, ರವಿಕುಮಾರ್, ಬೋರೇಗೌಡ, ರಘು, ಮಂಜುನಾಥ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿದ್ದರು.

ಹಫ್ತಾ ನೀಡಲು ಒಪ್ಪದ ಪುರೋಹಿತನಿಗೆ ಇರಿತ

ಇತ್ತೀಚೆಗೆ ಜೈಲಿನಿಂದ ಹೊರಬಂದಿದ್ದ ಸತ್ಯನಾರಾಯಣ ಸೇರಿ ಎಂಟು ಮಂದಿ ಬಂಧನ

ಶ್ರೀರಂಗಪಟ್ಟಣ, ನ.17– ಕಾವೇರಿ ನದಿ ತೀರದಲ್ಲಿ ಪೌರೋಹಿತ್ಯ ಮಾಡುವ ಪುರೋಹಿತರಿಂದ ಹಫ್ತಾ ವಸೂಲಿ ಮಾಡುತ್ತಿರುವ ಪ್ರಕರಣ ಬಯಲಾಗಿದ್ದು, ಹಫ್ತಾ ನೀಡಲು ನಿರಾಕರಿಸಿದ ಪುರೋಹಿತನನ್ನು ಚಾಕುವಿನಿಂದ ಇರಿದು ಹತ್ಯೆಗೆ ಯತ್ನಿಸಿದ್ದ 8 ಮಂದಿಯನ್ನು ಬಂಧಿಸುವಲ್ಲಿ ಶ್ರೀರಂಗಪಟ್ಟಣ ಪೊಲೀಸರು ಯಶಸ್ವಿಯಾಗಿದ್ದಾರೆ.

ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿದ್ದು, ಇತ್ತೀಚೆಗಷ್ಟೇ ಜಾಮೀನಿನ ಮೇಲೆ ಹೊರಬಂದಿರುವ ಸತ್ಯನಾರಾಯಣ ಅಲಿಯಾಸ್ ಸತ್ಯ ಈ ತಂಡದ ಮುಖ್ಯಸ್ಥನಾಗಿದ್ದು, ಈತನೊಂದಿಗೆ ದರ್ಶನ್, ನಿತಿನ್‌ಕುಮಾರ್, ದರ್ಶನ್, ರಾಹುಲ್ ನಾಯಕ, ಕಿರಣ್, ಸುಹಾನ್, ದುರ್ಗಾ ಚಂದ್ರು ಬಂಧನಕ್ಕೊಳಗಾದವರಾಗಿದ್ದು, ಈ ತಂಡ ಅ.14ರಂದು ಪುರೋಹಿತ ಪಿ.ಗಂಗಾಧರ್‌ನನ್ನು ಚಾಕುವಿನಿಂದ ಇರಿದು ಹತ್ಯೆಗೆ ಯತ್ನಿಸಿತ್ತು.

ವಿವರ: ಅಪರಾಧ ಹಿನ್ನೆಲೆಯುಳ್ಳ ಸತ್ಯನಾರಾಯಣ ಅಲಿಯಾಸ್ ಸತ್ಯ ಕೊಲೆ ಆರೋಪದಲ್ಲಿ ಜೈಲಿನಲ್ಲಿದ್ದರೂ, ತನ್ನ ಸಹಚರರ ಮೂಲಕ ಪುರೋಹಿತರಿಂದ ಹಫ್ತಾ ವಸೂಲಿ ಮಾಡುತ್ತಿದ್ದ ಎಂದು ಹೇಳಲಾಗಿದೆ ಕಾವೇರಿ ದಡದಲ್ಲಿ ಪೌರೋಹಿತ್ಯ ಮಾಡುವ ಗಂಗಾಧರ್ ಅವರಿಗೆ ಕಳೆದ 3 ತಿಂಗಳ ಹಿಂದೆ 8867192058 ಸಂಖ್ಯೆಯಿಂದ ಕರೆ ಮಾಡಿದ್ದ ಸತ್ಯ 'ನೀವು ನಮ್ಮ ಏರಿಯಾದಲ್ಲಿ ಪೂಜೆ ಮಾಡುತ್ತಿದ್ದೀರಿ. ನಾನು ಹುಡುಗನನ್ನು ಕಳಿಸುತ್ತೇನೆ. ಆತನಿಗೆ 1 ಲಕ್ಷ ರೂ. ಕೊಟ್ಟು ಕಳುಹಿಸಿ' ಎಂದು ಧಮ್ಕಿ ಹಾಕಿದ್ದಾನೆ. ನನ್ನ ಬಳಿ ಹಣವಿಲ್ಲವೆಂದು ಗಂಗಾಧರ್ ಹೇಳಿದಾಗ ನಾನು ಸತ್ಯ ಮಾತನಾಡುತ್ತಿದ್ದೇನೆ. ಹಣ ಕೊಡದಿದ್ದರೆ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ.

ಕೆಲ ದಿನಗಳ ನಂತರ ನದಿದಡದಲ್ಲಿ ಗಂಗಾಧರ್ ಪೂಜೆ ಸಲ್ಲಿಸುತ್ತಿದ್ದ ವೇಳೆ ಅಲ್ಲಿಗೆ ಬಂದ ಸತ್ಯ, ದರ್ಶನ್ ಹಾಗೂ ಸಹಚರರು ನೀನು ಹೇಗೆ ಪೌರೋಹಿತ್ಯ ಮಾಡುತ್ತೀಯಾ ನೋಡುತ್ತೇನೆ. ಹಣ ಕೊಡದಿದ್ದರೆ ಮುಗಿಸುತ್ತೇವೆ ಎಂದು ಧಮ್ಕಿ ಹಾಕಿ ಹೋಗಿದ್ದರು. ಅ.14ರಂದು ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ಪೌರೋಹಿತ್ಯಕ್ಕಾಗಿ ಗಂಗಾಧರ್ ತನ್ನ ಮನೆಯಿಂದ ಹೊಳೆಗೆ ಹೋಗಲು ಹೋಂಡಾ ಬೈಕ್‌ನಲ್ಲಿ ಶ್ರೀರಂಗಪಟ್ಟಣ ದೇವಸ್ಥಾನ ರಸ್ತೆಯ ಸೆಂದಿಲ್ ಕೋಟೆ ಮುಂಭಾಗ ಹೋಗುತ್ತಿದ್ದಾಗ ಕಾರಿನಲ್ಲಿ ಬಂದ ಸತ್ಯ, ದರ್ಶನ್ ಹಾಗೂ ಸಹಚರರು ಬೈಕ್ ಅನ್ನು ಅಡ್ಡಗಟ್ಟಿ ಗಂಗಾಧರ್ ಅವರನ್ನು ಚಾಕುವಿನಿಂದ ಇರಿದು ಹತ್ಯೆಗೆ ಪ್ರಯತ್ನಿಸಿದ್ದಾರೆ. ಈ ವೇಳೆ ಸಾರ್ವಜನಿಕರು ಅವರನ್ನು ರಕ್ಷಿಸಿದ್ದಾರೆ.

ಈ ಪ್ರಕರಣ ಶ್ರೀರಂಗಪಟ್ಟಣ ಪುರೋಹಿತರಲ್ಲಿ ಆತಂಕವನ್ನುಂಟು ಮಾಡಿತ್ತು. ಈ ಹಿನ್ನೆಲೆಯಲ್ಲಿ ಹಲವಾರು ಪುರೋಹಿತರು ಡಿವೈಎಸ್ಪಿ ಸಂದೇಶ್‌ಕುಮಾರ್ ಅವರನ್ನು ಭೇಟಿಮಾಡಿ, ರಕ್ಷಣೆಗೆ ಮೊರೆ ಹೋಗಿದ್ದರು. ಮಾರಣಾಂತಿಕ ಹಲ್ಲೆಯ ನಂತರ ತಲೆಮರೆಸಿಕೊಂಡಿದ್ದ ಸತ್ಯ ಮತ್ತು ಸಹಚರರು ಮೊಬೈಲ್ ಕೂಡ ಬಳಸದೆ, ಪೊಲೀಸರಿಗೆ ತಮ್ಮ ಬಗ್ಗೆ ಯಾವುದೇ ರೀತಿಯ ಸುಳಿವು ದೊರೆಯದಂತೆ ಚಾಣಾಕ್ಷತನ ಮೆರೆಯುತ್ತಿದ್ದರು. ಆದರೆ ಈ ದುಷ್ಕರ್ಮಿಗಳು ಇನ್‌ಸ್ಟಾಗ್ರಾಂ ಮತ್ತು ವಾಟ್ಸಾಪ್ ಮೂಲಕ ತಮ್ಮ ಕಡೆಯವರನ್ನು ಸಂಪರ್ಕಿಸುತ್ತಿರುವ ಮಾಹಿತಿ ಪಡೆದ ಸಂದೇಶ್‌ಕುಮಾರ್ ಅವರ ಸೂಚನೆ ಮೇರೆಗೆ ಇನ್ಸ್‌ಪೆಕ್ಟರ್ ಪ್ರಕಾಶ್, ಎಸ್‌ಐ ಚೆನ್ನಪ್ಪ ಸಿಬ್ಬಂದಿಗಳಾದ ವಿಜಯಕುಮಾರ್, ಉಮೇಶ್, ದೊರೆರಾಜು ತಂಡ ಆರೋಪಿಗಳನ್ನು ಇಂದು ಮಳವಳ್ಳಿಯಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದೆ. ಇವರೆಲ್ಲರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಇಬ್ಬರು ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಿಎಸ್‌ಪಿ ನೆರವು





ಚಿನಕುರಳಿ, ನ.17– ನೀಟ್ ಪರೀಕ್ಷೆಯಲ್ಲಿ ಉತ್ತಮ ರ್‍ಯಾಂಕ್ ಪಡೆದು ಎಂಬಿಬಿಎಸ್ ವಿದ್ಯಾಭ್ಯಾಸ ಮಾಡಲು ಹಣವಿಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದ ಇಬ್ಬರು ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಶಾಸಕ ಸಿ.ಎಸ್.ಪುಟ್ಟರಾಜು ವೈಯಕ್ತಿಕವಾಗಿ ಆರ್ಥಿಕ ನೆರವು ನೀಡಿ, ಅವರ ವೈದ್ಯಕೀಯ ಶಿಕ್ಷಣದ ಎಲ್ಲಾ ಖರ್ಚನ್ನು ತಾವೇ ಭರಿಸುವುದಾಗಿ ಭರವಸೆ ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ.

ಪಾಂಡವಪುರ ತಾಲೂಕಿನ ಬೇಬಿ ಗ್ರಾಮದ ಗಾಯಿತ್ರಿ ಹಾಗೂ ಶ್ರೀನಿವಾಸ ಮೂರ್ತಿ ದಂಪತಿ ಪುತ್ರಿ ಸೌಂದರ್ಯ ಹಾಗೂ ಕೆ.ಆರ್.ಪೇಟೆ ತಾಲೂಕಿನ ಕತ್ತರಘಟ್ಟ ಗ್ರಾಮದ ರವಿ ಹಾಗೂ ಲೀಲಾವತಿ ದಂಪತಿ ಪುತ್ರ ನಿಖಿಲ್ ಅವರ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡಿದ್ದಾರೆ.

ಸೌಂದರ್ಯ: ವಿದ್ಯಾರ್ಥಿನಿ ಸೌಂದರ್ಯ ಪಿಯುಸಿ ಹಾಗೂ ನೀಟ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ್ದು, ಬಾಗಲಕೋಟೆ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಓದಲು ಸರ್ಕಾರಿ ಸೀಟು ದೊರೆತಿದೆ. ಇವರ ತಂದೆ–ತಾಯಿ ಕೂಲಿ ಮಾಡಿ ಜೀವನ ನಡೆಸುತ್ತಿದ್ದು, ಶುಲ್ಕ ಪಾವತಿಸಲು ಸಾಧ್ಯವಾಗದೆ ಕಾಲೇಜಿಗೆ ದಾಖಲಿಸಲು ಹಿಂದೇಟು ಹಾಕುತ್ತಿದ್ದರು. ವಿಷಯ ತಿಳಿದ ಶಾಸಕ ಸಿ.ಎಸ್.ಪುಟ್ಟರಾಜು ವಿದ್ಯಾರ್ಥಿನಿ ಪೋಷಕರ ಮನವೊಲಿಸಿ, ಸೌಂದರ್ಯ ಅವರು ಎಂಬಿಬಿಎಸ್ ಮುಗಿಸುವವರೆಗಿನ ಸಂಪೂರ್ಣ ಖರ್ಚನ್ನು ಭರಿಸುವುದಾಗಿ ತಿಳಿಸಿ, ಮೊದಲ ವರ್ಷದ ಕಾಲೇಜು ಶುಲ್ಕದ ಡಿಡಿ ತೆಗೆದು ಕಾಲೇಜಿಗೆ ಕಳುಹಿಸಿದ್ದಾರೆ.

ನಿಖಿಲ್: ಕೆ.ಆರ್.ನಿಖಿಲ್ ನೀಟ್ ಪರೀಕ್ಷೆಯಲ್ಲಿ 582ನೇ ರ್‍ಯಾಂಕಿಂಗ್ ಪಡೆದು ಸರ್ಕಾರಿ ಖೋಟಾದಲ್ಲಿ ಹಾಸನದ ಮೆಡಿಕಲ್ ಕಾಲೇಜಿನಲ್ಲಿ ಸೀಟು ಪಡೆದಿದ್ದು, ಈತನೂ ಶುಲ್ಕ ಪಾವತಿಸಲು ಸಾಧ್ಯವಾಗದೆ ಶಾಸಕರ ಬಳಿ ಬಂದ ವೇಳೆ ಎಂಬಿಬಿಎಸ್ ಶಿಕ್ಷಣದ ಸಂಪೂರ್ಣ ಖರ್ಚು ಭರಿಸುವುದಾಗಿ ಮೊದಲ ವರ್ಷದ ಶುಲ್ಕವನ್ನು ಡಿಡಿ ರೂಪದಲ್ಲಿ ಪಾವತಿಸಿದ್ದಾರೆ. ನಿಖಿಲ್ ತಂದೆ ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡಿದ್ದು, ತಾಯಿ ಮನೆಗೆಲಸ ಮಾಡಿಕೊಂಡಿದ್ದರು. ಇದೀಗ ಆ ಕುಟುಂಬಕ್ಕೂ ಪುಟ್ಟರಾಜು ನೆರವು ನೀಡುವ ಮೂಲಕ ಮಾದರಿಯಾಗಿದ್ದಾರೆ. ಅಲ್ಲದೆ ಕ್ಷೇತ್ರದ ನೂರಾರು ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವು ನೀಡುವ ಮೂಲಕ ಮಕ್ಕಳ ಭವಿಷ್ಯ ರೂಪಿಸುವ ಕೆಲಸ ಮಾಡುತ್ತಿರುವ ಶಾಸಕರ ಕಾರ್ಯಕ್ಕೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪುಟ್ಟಮ್ಮ ನಿಧನ



ಪಾಂಡವಪುರ, ನ.17– ತಾಲೂಕಿನ ಗುಮ್ಮನಹಳ್ಳಿ ಗ್ರಾಮದ ದಿ.ಯಳವಯ್ಯ ಅವರ ಪತ್ನಿ ಪುಟ್ಟಮ್ಮ(75) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಂಚರತ್ನ ಯಾತ್ರೆಗೂ ಮುನ್ನ ಇಂದು ಕುಮಾರಸ್ವಾಮಿ ಚಾಮುಂಡೇಶ್ವರಿ ದರ್ಶನ



ಮೈಸೂರು, ನ.17– ಪಂಚರತ್ನ ಯಾತ್ರೆ ಹಿನ್ನೆಲೆ ಮೈಸೂರಿಗೆ ಆಗಮಿಸಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನಾಳೆ(ನ.18) ಬೆಳಿಗ್ಗೆ 8.30ಕ್ಕೆ ಚಾಮುಂಡಿಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಮುಳಬಾಗಿಲಿಗೆ ಪ್ರಯಾಣ ಬೆಳೆಸಲಿರುವ ಅವರು, ಪಂಚರತ್ನ ಯಾತ್ರೆಗೆ ಚಾಲನೆ ನೀಡಲಿದ್ದಾರೆ. ನ.1 ರಂದೇ ಪಂಚರತ್ನ ಯಾತ್ರೆಗೆ ವಿಧ್ಯುಕ್ತ ಚಾಲನೆ ನೀಡಲಾಗಿತ್ತಾದರೂ ಮಳೆಯ ಕಾರಣದಿಂದ ತಾತ್ಕಾಲಿಕವಾಗಿ ಮುಂದೂಡಲಾಗಿತ್ತು.



ಮೈಸೂರು ವಿಶ್ವವಿದ್ಯಾನಿಲಯದ ಹಂಗಾಮಿ ಕುಲಪತಿಯಾಗಿ ಅಧಿಕಾರ ವಹಿಸಿಕೊಂಡಿರುವ ಪ್ರೊ.ರಾಜಶೇಖರ್ ಅವರನ್ನು ಮೈವಿವಿ ಅಧ್ಯಾಪಕೇತರ ಉದ್ಯೋಗಿಗಳ ಸಂಘದ ವತಿಯಿಂದ ಗೌರವಿಸಲಾಯಿತು. ಸಂಘದ ಅಧ್ಯಕ್ಷ ಮಹದೇವ, ಪದಾಧಿಕಾರಿಗಳಾದ ಮನು, ಪ್ರಸಾದ್, ಮೂರ್ತಿ, ಶಿವಣ್ಣ, ನಾಗರತ್ನ ಇತರರಿದ್ದರು.

ಈಜಿನಲ್ಲಿ ಪದಕ ವಿಜೇತರು



ಬೆಂಗಳೂರು ವಿಜಯನಗರ ಆರ್‌ಪಿಸಿ ಲೇಔಟ್‌ನ ಕಾರ್ಪೋರೇಷನ್ ಈಜುಕೊಳದಲ್ಲಿ ಕರ್ನಾಟಕ ರಾಜ್ಯ ಈಜು ಸಂಸ್ಥೆ ವತಿಯಿಂದ ನಡೆದ 23ನೇ ರಾಜ್ಯ ಮಟ್ಟದ ಈಜು ಚಾಂಪಿಯನ್‌ಶಿಪ್‌ನಲ್ಲಿ ವಿ.ಜಗದೀಶ್ (54 ವರ್ಷ) 1 ಚಿನ್ನ, 4 ಬೆಳ್ಳಿ ಮತ್ತು 1 ಕಂಚು, ಬಿ.ಸುಂದರಮ್ (80 ವರ್ಷ) 3 ಚಿನ್ನ, 1 ಕಂಚು ಹಾಗೂ ಡಾ.ಮಹೇಶ್ ಕೃಷ್ಣ (46 ವರ್ಷ) 4 ಬೆಳ್ಳಿ, 1 ಕಂಚು ಪದಕ ಗೆದ್ದಿದ್ದಾರೆ.

ಅಪರಿಚಿತ ವ್ಯಕ್ತಿ ಶವ ಪತ್ತೆ

ಶ್ರೀರಂಗಪಟ್ಟಣ, ನ.17–ಅಪರಿಚಿತ ವ್ಯಕ್ತಿಯೊಬ್ಬರ ಮೃತದೇಹ ಶ್ರೀರಂಗಪಟ್ಟಣದ ಗಂಜಾಂನ ಮಿಷಿನ್ ಸಮೀಪದ(ಬಸ್‌ಸ್ಟ್ಯಾಂಡ್ ಬಳಿ) ಬೆಟ್ಟಪ್ಪನವರ ತೆಂಗಿನ ತೋಟದ ಹತ್ತಿರ ಹರಿಯುವ ಕಾವೇರಿ ನದಿಯಲ್ಲಿ ಪತ್ತೆಯಾಗಿದೆ. ಸುಮಾರು 45ರಿಂದ 50 ವರ್ಷದವರು ಎಂದು ಗುರುತಿಸಲಾಗಿದ್ದು, ಇನ್ನಿತರ ಯಾವುದೇ ಮಾಹಿತಿ ಲಭ್ಯವಾಗಿಲ್ಲ ಎಂದು ಶ್ರೀರಂಗಪಟ್ಟಣ ಟೌನ್ ಠಾಣೆ ಪೊಲೀಸರು ತಿಳಿಸಿದ್ದಾರೆ. ದೇಹವನ್ನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆ ಶವಾಗಾರದಲ್ಲಿ ಇಡಲಾಗಿದ್ದು, ವಾರಸುದಾರರಿದ್ದಲ್ಲಿ ದೂ:0823–6252027, ಮೊ.ನಂ.9480804855 ಸಂಪರ್ಕಿಸುವಂತೆ ಕೋರಲಾಗಿದೆ.

ವಿಧಾನಸಭಾ ಚುನಾವಣಾ ವೇಳೆಗೆ ರಾಜ್ಯದ ಎಲ್ಲಾ ರಸ್ತೆಗಳು ಗುಂಡಿಮುಕ್ತ

● ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ಭರವಸೆ ● ಇದಕ್ಕಾಗಿ 10,500 ಕೋಟಿ ವೆಚ್ಚ





ಫೈಲ್ ಚಿತ್ರ

ಬೆಂಗಳೂರು, ನ.17(ಕೆಎಂಶಿ)– ಮುಂಬರುವ ವಿಧಾನಸಭೆ ಚುನಾವಣೆ ವೇಳೆಗೆ ರಾಜ್ಯದ ರಸ್ತೆಗಳು ಗುಂಡಿ ಮುಕ್ತವಾಗುತ್ತವೆ ಎಂದು ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರೀ ಮಳೆ ಮತ್ತು ನೆರೆಯಿಂದ ರಾಜ್ಯ ಹೆದ್ದಾರಿ ರಸ್ತೆ ಮತ್ತು ಗ್ರಾಮೀಣ ರಸ್ತೆಗಳು ತೀವ್ರವಾಗಿ ಹಾಳಾಗಿದ್ದು, 10,500 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳುವುದಾಗಿ ಹೇಳಿದರು. ಹದಗೆಟ್ಟಿರುವ ರಾಜ್ಯ ರಸ್ತೆಗಳ ಕಾಮಗಾರಿಗಾಗಿ 3500 ಕೋಟಿ ರೂ.ಗಳನ್ನು ಮುಖ್ಯಮಂತ್ರಿಯವರು ವಿಶೇಷ ಅನುದಾನವಾಗಿ ನೀಡಿದ್ದರೆ, ವಿಧಾನಸಭೆ ಸದಸ್ಯರಿಗೆ ತಮ್ಮ ಕ್ಷೇತ್ರದ ವ್ಯಾಪ್ತಿಯ ರಸ್ತೆಗಳ ದುರಸ್ತಿಗಾಗಿ 4750 ಕೋಟಿ ರೂ. ನೀಡಿದ್ದಾರೆ. ಈ ಹಣವನ್ನೂ ಲೋಕೋಪಯೋಗಿ ಇಲಾಖೆ ವತಿಯಿಂದಲೇ ಬಳಕೆ ಮಾಡಿ, ರಸ್ತೆ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಹಣದಲ್ಲಿ 2275 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು ಎಂದರು.

ಮಳೆಯಿಂದ ರಾಜ್ಯಾದ್ಯಂತ ರಸ್ತೆಗಳು ಹಾನಿಗೀಡಾಗಿದ್ದು ಆದಷ್ಟು ತ್ವರಿತವಾಗಿ ಅವುಗಳನ್ನು ಸುಸ್ಥಿತಿಗೆ ತರಲು,ಮತ್ತು ಮೇಲ್ದರ್ಜೆಗೇರಿಸಲು ಎಲ್ಲ ರೀತಿಯ ಕ್ರಮ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆ. ತಮ್ಮ ತಮ್ಮ ಕ್ಷೇತ್ರಗಳ ವ್ಯಾಪ್ತಿಯಲ್ಲಿ ರಸ್ತೆಗಳು ಹದಗೆಟ್ಟ ಕುರಿತು ಶಾಸಕರು ದೂರುತ್ತಲೇ ಇದ್ದರು. ಹೀಗಾಗಿ ರಸ್ತೆ ಅಭಿವೃದ್ಧಿಗೆ ಆದ್ಯತೆ ನೀಡಲು ತೀರ್ಮಾನಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದರು.


ಇದೇ ರೀತಿ ರಸ್ತೆಗಳ ಮರು ಡಾಂಬರೀಕರಣಕ್ಕಾಗಿ 440 ಕೋಟಿ ರೂ.ಗಳನ್ನು ಒದಗಿಸಲು ನಿರ್ಧರಿಸಲಾಗಿದ್ದು, ಈ ಹಣದಿಂದ 1008 ಕಿಲೋಮೀಟರುಗಳಷ್ಟು ರಸ್ತೆಗೆ ಡಾಂಬರೀಕರಣ ಕಾರ್ಯ ನಡೆಯಲಿದೆ ಎಂದು ನುಡಿದರು.

ರಸ್ತೆ ಅಭಿವೃದ್ಧಿ, ದುರಸ್ಥಿ ಮತ್ತು ಡಾಂಬರೀಕರಣ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಲು ಆದೇಶ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು. ಮುನ್ನೂರೈವತ್ತುಕೋಟಿ ರೂಪಾಯಿ ವೆಚ್ಚದಲ್ಲಿ ನೂರು ಅಂಬೇಡ್ಕರ್ ವಿದ್ಯಾರ್ಥಿ ನಿಲಯ ಮತ್ತು ನೂರು ಕ್ರೈಸ್ಟ್ ವಿದ್ಯಾರ್ಥಿನಿಲಯಗಳನ್ನು ಕಟ್ಟಲು ತೀರ್ಮಾನಿಸಲಾಗಿದೆ ಎಂದರು.

ಕರ್ನಾಟಕದಿಂದ ಆಂಧ್ರದ ಶ್ರೀ ಶೈಲಂಗೆ ತೆರಳುವ ಯಾತ್ರಾರ್ಥಿಗಳ ಅನುಕೂಲಕ್ಕಾಗಿ 85 ಕೋಟಿ ರೂ. ವೆಚ್ಚದಲ್ಲಿ ಯಾತ್ರಿ ಭವನ ನಿರ್ಮಿಸಲು ಮುಖ್ಯಮಂತ್ರಿಗಳು ಒಪ್ಪಿಗೆ ನೀಡಿದ್ದಾರೆ.

ಮೊದಲ ಹಂತದಲ್ಲಿ ಎಪ್ಪತ್ತೈದು ಕೊಠಡಿಗಳು ಸೇರಿದಂತೆ ಹಲವು ಸವಲತ್ತುಗಳಿರುವ ಕಟ್ಟಡವನ್ನು ನಿರ್ಮಿಸಲಾಗುವುದು. 2ನೇ ಹಂತದಲ್ಲಿ 45 ಕೋಟಿ ರೂ.ಗಳನ್ನು ವೆಚ್ಚ ಮಾಡಿ ಇನ್ನಷ್ಟು ಅನುಕೂಲ ಕಲ್ಪಿಸಿಕೊಡಲಾಗುವುದು ಎಂದರು.

ಭಿಕ್ಷುಕನಂತೆ ಬಂದು ಟಿಡಿಪಿ ಮುಖಂಡನ ಮೇಲೆ ಮಚ್ಚಿನಿಂದ ಹಲ್ಲೆ



ತುನಿ(ಆಂಧ್ರಪ್ರದೇಶ): ಭಿಕ್ಷೆ ಕೇಳುವ ನೆಪದಲ್ಲಿ ಅಪರಿಚಿತ ವ್ಯಕ್ತಿಯೋರ್ವ ಆಂಧ್ರಪ್ರದೇಶದ ವಿರೋಧ ಪಕ್ಷ ತೆಲುಗು ದೇಶಂ ಪಕ್ಷದ(ಟಿಡಿಪಿ) ನಾಯಕರೊಬ್ಬರ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿರುವ ಘಟನೆ ಕಾಕಿನಾಡ ಜಿಲ್ಲೆಯ ತುನಿಯಲ್ಲಿ ನಡೆದಿದ್ದು ದಾಳಿಯ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ದುಷ್ಕರ್ಮಿಯೊಬ್ಬ ಭಿಕ್ಷೆ ಕೇಳಿಕೊಂಡು ಮನೆ ಮುಂದೆ ಬಂದಾಗ ಟಿಡಿಪಿ ನಾಯಕ ಶೇಷಗಿರಿರಾವ್ ಅವರು ಭಿಕ್ಷೆ ನೀಡಲು ಹೊರಬಂದಿದ್ದಾರೆ. ಅವರು ಭಿಕ್ಷೆ ನೀಡುತ್ತಿದ್ದಂತೆಯೇ ಅಪರಿಚಿತ ವ್ಯಕ್ತಿ ಅವರ ತಲೆ ಮತ್ತು ಕೈಗಳಿಗೆ ಮಚ್ಚಿನಿಂದ ಹಲ್ಲೆ ನಡೆಸಿದ್ದು, ಟಿಡಿಪಿ ನಾಯಕನಿಗೆ ಗಂಭೀರ ಗಾಯಗಳಾಗಿವೆ. ಶೇಷಗಿರಿರಾವ್ ಅವರ ಕೈಯಿಂದ ಭಿಕ್ಷೆ ಸ್ವೀಕರಿಸುವಾಗ ದುಷ್ಕರ್ಮಿಯೊಬ್ಬ ಏಕಾಏಕಿ ಮಚ್ಚನ್ನು ಹೊರತೆಗೆದು ದಾಳಿ ಮಾಡಿರುವ ವಿಡಿಯೋ ವೈರಲ್ ಆಗಿದೆ. ದುಷ್ಕರ್ಮಿ ಸ್ವಾಮಿ ಮಾಲೆ ಮತ್ತು ಕೇಸರಿ ಸ್ಕಾರ್ಫ್ ಧರಿಸಿದ್ದನು. ರಾವ್ ನೆಲಕ್ಕೆ ಬೀಳುವವರೆಗೂ ದಾಳಿ ಮಾಡಿ ಪರಾರಿಯಾಗಿದ್ದಾನೆ. ರಾವ್ ಅವರ ಕುಟುಂಬಸ್ಥರು ಹೊರಗೆ ಧಾವಿಸಿದಾಗ, ದಾಳಿಕೋರನು ಬೈಕ್‌ನಲ್ಲಿ ಪರಾರಿಯಾಗಿದ್ದಾನೆ.



ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಆವರಣದಲ್ಲಿ 1.12 ಕೋಟಿ ರೂ.ಗಳಲ್ಲಿ ಕೈಗೊಂಡಿರುವ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಗುದ್ದಲಿ ಪೂಜೆ ನೆರವೇರಿಸಿದರು. ಕ್ಷೇತ್ರದ ಬಿಎಲ್‌ಎ–1 ದಿನೇಶ್‌ಗೌಡ, ಕಾಲೇಜಿನ ಪ್ರಾಂಶುಪಾಲ ಸೋಮಣ್ಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಗೌರೀಶ್‌ಗೌಡ, ಸಹಾಯಕ ಇಂಜಿನಿಯರ್ ನಾಗರಾಜು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಬಸವ ಬಳಗ ಚಾಮುಂಡಿಪುರಂ ಸಂಘದ ಸದಸ್ಯತ್ವ ನೋಂದಣಿಗೆ ಚಾಲನೆ



ಮೈಸೂರು, ನ.17–ಬಸವ ಬಳಗ ಚಾಮುಂಡಿಪುರಂ ಸಂಘದ ಸದಸ್ಯತ್ವ ನೊಂದಣಿ ಕಾರ್ಯಕ್ರಮಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಿದರು.

ಮೈಸೂರಿನ ಚಾಮುಂಡಿಪುರಂನ ಬಸವ ಬಳಗದ ಸದಸ್ಯರು ಕಳೆದ ಹತ್ತು ವರ್ಷಗಳಿಂದ ಬಸವೇಶ್ವರ ಜಯಂತಿ, ರಾಮನವಮಿ, ಚಾಮುಂಡೇಶ್ವರಿ ಹಬ್ಬ ಹಾಗೂ ವಿವಿಧ ಹಬ್ಬಗಳ ಆಚರಣೆ ಮಾಡುತ್ತಾ ಬಂದಿದ್ದು, ಇನ್ನಿತರೆ ಸಮಾಜಮುಖಿ ಕೆಲಸಗಳಲ್ಲಿ ನಿರತರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ "ಬಸವ ಬಳಗ ಚಾಮುಂಡಿಪುರಂ" ಹೆಸರಿನಲ್ಲಿ ಸಂಘ ನೋಂದಣಿಯಾಗಿದ್ದು, ಇದರ ಸದಸ್ಯತ್ವ ನೊಂದಣಿ ಕಾರ್ಯಕ್ರಮಕ್ಕೆ ಸುತ್ತೂರು ಶ್ರೀಗಳು ಚಾಲನೆ ನೀಡಿ, ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ಬಸವ ಬಳಗ ಚಾಮುಂಡಿಪುರಂ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಅಧ್ಯಕ್ಷ ಸಂದೀಪ್ ಚಂದ್ರಶೇಖರ್, ಉಪಾಧ್ಯಕ್ಷ ಬಸವರಾಜು, ಕಾರ್ಯದರ್ಶಿಗಳಾದ ಮಲ್ಲಪ್ಪ, ಖಜಾಂಚಿ ವಿ ಬಸವರಾಜು, ನಿರ್ದೇಶಕರಾದ ಮಹದೇವಪ್ಪ, ಮಂಜುನಾಥ್, ಯೋಗೇಶ್, ನವೀನ್, ಮಂಜುಳಾ, ಕೆ.ಎಂ.ಸೋಮೇಶ್, ಧರ್ಮೇಂದ್ರ, ಮುಖಂಡರಾದ ಮೋಹನ್, ಶಿವಣ್ಣ, ದೇವೇಂದ್ರ ಸ್ವಾಮಿ, ಚನ್ನಪ್ಪ, ರುದ್ರಸ್ವಾಮಿ, ದೀಪಕ್, ಸಂದೇಶ್, ಪ್ರದೀಪ್, ವಿನಯ್, ಸುರೇಶ್, ಪಾರ್ವತಿ, ಗಾಯತ್ರಿ, ಮಧುರ, ರೇಖಾ, ನಾಗಮ್ಮ, ನಾಗರಾಜ್, ನಾಗೇಂದ್ರ ಸೇರಿದಂತೆ ಇನ್ನಿತರರು ಹಾಜರಿದ್ದರು.

ನಾಳೆ ರಂಗಕರ್ಮಿ ಎಲ್.ಕೃಷ್ಣಪ್ಪರ ಅಭಿನಂದನಾ ಗ್ರಂಥ ಬಿಡುಗಡೆ

ಮೈಸೂರು,ನ.17(ಪಿಎಂ)– ಮೈಸೂರು ರಂಗಾಯಣ, ಕದಂಬ ರಂಗ ವೇದಿಕೆ ಜಂಟಿ ಆಶ್ರಯದಲ್ಲಿ ಹಿರಿಯ ರಂಗಕರ್ಮಿ ಎಲ್.ಕೃಷ್ಣಪ್ಪ ಅವರ 75ನೇ ವರ್ಷದ ಸವಿನೆನಪಿಗಾಗಿ ನ.19ರಂದು 'ಕೃಷ್ಣಗಾರುಡಿ–ರಂಗಕರ್ಮಿ ಎಲ್.ಕೃಷ್ಣಪ್ಪ 75' ಶೀರ್ಷಿಕೆಯಡಿ ಅವರ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ಅಧ್ಯಕ್ಷ ರಾಜಶೇಖರ ಕದಂಬ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿ.ವಿ.ಕಾರಂತರ ಪಟ್ಟ ಶಿಷ್ಯರಾದ ಎಲ್.ಕೃಷ್ಣಪ್ಪ, ಅನೇಕ ರಂಗ ದಿಗ್ಗಜರ ಒಡನಾಡಿಗಳಾಗಿದ್ದಾರೆ. ಮೈಸೂರು ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಅಂದು ಸಂಜೆ 4.30ಕ್ಕೆ ಅವರ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭ ಏರ್ಪಡಿಸಲಾಗಿದೆ ಎಂದರು. ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅಭಿನಂದನಾ ಗ್ರಂಥ ಬಿಡುಗಡೆ ಮಾಡಲಿದ್ದಾರೆ. ಗ್ರಂಥ ಕುರಿತು ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ವಿ.ಶ್ರೀಧರಮೂರ್ತಿ ಮಾತನಾಡಲಿದ್ದಾರೆ. ನಟಿ ಶ್ವೇತಾ ಶ್ರೀವಾತ್ಸವ್, ರಂಗಕರ್ಮಿ ಎಲ್.ಕೃಷ್ಣಪ್ಪ ಉಪಸ್ಥಿತರಿರುವರು ಎಂದು ಹೇಳಿದರು. ವೇದಿಕೆ ಉಪಾಧ್ಯಕ್ಷ ಯು.ಎಸ್.ರಾಜಣ್ಣ, ಖಜಾಂಚಿ ಡಿ.ತಿಪ್ಪಣ್ಣ, ಸದಸ್ಯರಾದ ಅಶ್ವಥ್ ಕದಂಬ, ಪವಿತ್ರಾ ಫಣಿ ಗೋಷ್ಠಿಯಲ್ಲಿದ್ದರು.

2009ರ ಜೋಡಿ ಕೊಲೆ ಪ್ರಕರಣ: ಛೋಟಾ ರಾಜನ್ ಖುಲಾಸೆ

ಮುಂಬೈ: 2009ರ ಜೋಡಿ ಕೊಲೆ ಪ್ರಕರಣದಲ್ಲಿ ಭೂಗತ ಪಾತಕಿ ಛೋಟಾ ರಾಜನ್ ಮತ್ತು ಇತರ ಮೂವರನ್ನು ಮುಂಬೈನ ವಿಶೇಷ ಸಿಬಿಐ ನ್ಯಾಯಾಲಯ ಗುರುವಾರ ಖುಲಾಸೆಗೊಳಿಸಿದೆ. ವಿಶೇಷ ನ್ಯಾಯಾಧೀಶ ಎಎಂ ಪಾಟೀಲ್ ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲಾಸೆಗೊಳಿಸಿದರು. ರಾಜನ್‌ಗೆ ಸಂಬಂಧಿಸಿದ ಪಿತೂರಿಯನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಅವರು ಹೇಳಿದರು.ಈ ಪ್ರಕರಣದಲ್ಲಿ ಇತರ ಆರೋಪಿಗಳಾದ ಮೊಹಮ್ಮದ್ ಅಲಿ ಶೇಖ್, ಉಮೇದ್ ಶೇಖ್ ಮತ್ತು ಪ್ರಣಯ್ ರಾಣೆ ಅವರನ್ನು ಖುಲಾಸೆಗೊಳಿಸಲಾಗಿದೆ. 2009 ಜುಲೈನಲ್ಲಿ ದಕ್ಷಿಣ ಮುಂಬೈನ ನಾಗ್ಪಾಡಾ ಪ್ರದೇಶದ ಫುಟ್‌ಪಾತ್‌ನಲ್ಲಿ ಮತ್ತೊಂದು ಗುಂಪಿನ ಸಹೀದ್ ಗುಲಾಮ್ ಹುಸೇನ್ ಆಲಿಯಾಸ್ ಛೋಟೆ ಮಿಯಾನ್ ಮೇಲೆ ಗುಂಡು ಹಾರಿಸಲಾಗಿತ್ತು. ಅಲ್ಲಿಂದ ಪರಾರಿಯಾಗುತ್ತಿದ್ದಾಗ ಇತರ ಮೂವರ ಮೇಲೆ ದಾಳಿಕೋರರು ಗುಂಡಿನ ದಾಳಿ ನಡೆಸಿದ್ದರು.

ಜಿಲ್ಲಾಡಳಿತ ಭವನದ ತಡೆಗೋಡೆ ದುರಸ್ತಿ ಆರಂಭ

ಮಡಿಕೇರಿ,ನ.17– ಮಳೆಗಾಲ ಜಿಲ್ಲಾಡಳಿತ ಭವನದ ತಡೆಗೋಡೆ ಬಿರುಕುಬಿಟ್ಟು ಆತಂಕ ಸೃಷಿಸಿದ್ದು, ಇದೀಗ ತಡೆಗೋಡೆಯ ಶಾಶ್ವತ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ತಡೆಗೋಡೆಯ ಅಂದಾಜು 50 ಮೀಟರ್ ಉದ್ದಕ್ಕೂ ತಡೆಗೋಡೆಗಳ ಕಾಂಕ್ರೀಟ್ ಸ್ಲ್ಯಾಬ್‌ಗಳಲ್ಲಿ ಬಿರುಕು ಕಾಣಿಸಿಕೊಂಡಿದ್ದು, ಹಾನಿಗೊಳಗಾದ ಎಲ್ಲಾ ಸ್ಲ್ಯಾಬ್‌ಗಳನ್ನು ಬದಲಿಸುವ ಕಾಮಗಾರಿ ನಡೆಸಲಾಗುತ್ತಿದೆ.

ಹಾನಿಗೊಳಗಾದ ಎಲ್ಲಾ ಸ್ಲ್ಯಾಬ್‌ಗಳ ಬದಲಾವಣೆ, ಗುತ್ತಿಗೆದಾರನಿಂದಲೇ ವೆಚ್ಚ ಬರಿಸಲು ಕ್ರಮ



ಮಡಿಕೇರಿ ಜನರಲ್ ತಿಮ್ಮಯ್ಯ ವೃತ್ತದ ಬಳಿಯಲ್ಲಿ, ಮಂಗಳೂರು ರಸ್ತೆಯ ಬಲ ಪಾರ್ಶ್ವದ ಬೆಟ್ಟ ಪ್ರದೇಶದಲ್ಲಿ ಜಿಲ್ಲಾಡಳಿತ ಭವನವಿದೆ. ಎರಡು ವರ್ಷಗಳ ಹಿಂದೆ ಭವನದ ಮುಂಭಾಗದ ಬರೆ ಕುಸಿತ ಉಂಟಾಗಿತ್ತು. ಭವಿಷ್ಯದ ದಿನಗಳಲ್ಲಿ ಬರೆ ಕುಸಿತ ಜಿಲ್ಲಾಡಳಿತ ಭವನಕ್ಕೆ ಸಂಕಷ್ಟ ತಂದೊಡ್ಡುವ ಸಾಧ್ಯತೆಗಳನ್ನರಿತು 7 ಕೋಟಿ ರೂ.ಗಳನ್ನು ವ್ಯಯಿಸಿ, ಹೈದರಾಬಾದ್ ಮೂಲದ ಗುತ್ತಿಗೆದಾರರಿಂದ ಜಪಾನ್ ತಂತ್ರಜ್ಞಾನದಂತೆ ನೂರಾರು ಕಾಂಕ್ರೀಟ್ ಸ್ಲ್ಯಾಬ್‌ಗಳನ್ನು ಜೋಡಿಸಿ ತಡೆಗೋಡೆಯನ್ನು ನಿರ್ಮಿಸಲಾಗಿದೆ. 60ಕ್ಕೂ ಹೆಚ್ಚು ಅಡಿ ಎತ್ತರದ ಬರೆಗೆ ಅಡ್ಡಲಾಗಿ ಅಂದಾಜು 100 ಮೀಟರ್‌ಗಳಷ್ಟು ಕಾಂಕ್ರೀಟ್ ಸ್ಲ್ಯಾಬ್‌ಗಳನ್ನು ಅಳವಡಿಸಿ, ನಡುವಿನ ಖಾಲಿ ಜಾಗಕ್ಕೆ ಸಾವಿರಾರು ಲೋಡ್ ಮಣ್ಣು ತುಂಬಿಸಲಾಗಿದೆ.

ಈ ತಡೆಗೋಡೆಯನ್ನು 7 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಕಾಮಗಾರಿಯ ಪ್ರಾರಂಭದಲ್ಲೇ ತಡೆಗೋಡೆಯ ಭದ್ರತೆಯ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅನುಮಾನಗಳು ವ್ಯಕ್ತವಾಗಿತ್ತು. ಇಂತಹ ತಂತ್ರಜ್ಞಾನ ಕೊಡಗಿನಂತಹ ಗುಡ್ಡಗಾಡು ಪ್ರದೇಶಕ್ಕೆ ಸೂಕ್ತವಲ್ಲ ಎಂಬ ಮಾತುಗಳು ಕೇಳಿ ಬಂದಿತ್ತಾದರೂ, ಜಪಾನ್ ತಂತ್ರಜ್ಞಾನ ಎಂದು ಹೇಳಿ ಕೆಲಸ ಮಾಡಲಾಗಿತ್ತು.

ಈ ಕಾಂಕ್ರೀಟ್ ಸ್ಲ್ಯಾಬ್‌ಗಳನ್ನು ಅಳವಡಿಸುವ ಸಂದರ್ಭ ಬರೆಗೆ ಹೊಂದಿಕೊಂಡಂತಹ ಖಾಲಿ ಪ್ರದೇಶಕ್ಕೆ ಸಾವಿರಾರು ಲೋಡ್‌ಗಳಷ್ಟು ಮಣ್ಣು ಸುರಿಯಲಾಗಿದ್ದು, ಸಂಪೂರ್ಣ ಮಣ್ಣನ್ನು ತೆರವುಗೊಳಿಸಲುವ ಕಾರ್ಯ ಇದೀಗ ನಡೆಯುತ್ತಿದೆ. ಸ್ಥಳದಲ್ಲಿ ಹಿಟಾಚಿ ಯಂತ್ರಮತ್ತು ಟಿಪ್ಪರ್ ಲಾರಿಗಳನ್ನು ಬಳಸಿಕೊಂಡು ಮಣ್ಣು ತೆರವು ಕಾರ್ಯ ನಡೆಸಲಾಗುತ್ತಿದೆ. ತೆರವು ಮಾಡುವ ಮಣ್ಣು ಶೇಖರಣೆಗಾಗಿ ಖಾಸಗಿ ಜಾಗವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಕಾಮಗಾರಿಯನ್ನು ನಡೆಸಿದ್ದ ಗುತ್ತಿಗೆದಾರನಿಂದಲೇ ಇದೀಗ ದುರಸ್ಥಿ ಕಾರ್ಯ ನಡೆಸಲಾಗುತ್ತಿದ್ದು, ಅದಕ್ಕೆ ತಗಲುವ ವೆಚ್ಚವನ್ನು ಗುತ್ತಿಗೆದಾರನೇ ಭರಿಸಬೇಕಿದೆ ಎಂದು ಲೋಕೋಪಯೋಗಿ ಇಲಾಖೆ ಮೂಲಗಳು ಮಾಹಿತಿ ನೀಡಿವೆ. ಕಾಂಕ್ರೀಟ್ ಸ್ಲ್ಯಾಬ್‌ಗಳನ್ನು ಬದಲಿಸುವ ಸಂದರ್ಭ ಬೆಂಗಳೂರಿನಿಂದ ತಾಂತ್ರಿಕ ತಜ್ಞರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆ ಮತ್ತು ಗುತ್ತಿಗೆದಾರ ಸಂಸ್ಥೆಯ ಇಂಜಿನಿಯರ್‌ಗಳು ಆಗಮಿಸಲಿದ್ದಾರೆ. ಕಾಂಕ್ರೀಟ್ ಸ್ಲ್ಯಾಬ್‌ಗಳು ಬಿರುಕು ಬಿಡಲು ಕಾರಣ, ಮಣ್ಣು ಹಾಗೂ ಅಂತರ್‌ಜಲ ಒತ್ತಡ ಮತ್ತಿತ್ತರ ವಿಚಾರಗಳ ಕುರಿತು ಪರಿಶೀಲನೆ ನಡೆಸಲಿದ್ದಾರೆ ಎಂದು ತಿಳಿದು ಬಂದಿದೆ.

ಶಾಸಕರ ಅಸಮಾಧಾನ: ತಡೆಗೋಡೆ ಕಾಮಗಾರಿ ಕುಸಿಯುವ ಹಂತಕ್ಕೆ ತಲುಪಿದ ಸಂದರ್ಭ ಸ್ಥಳ ಪರಿಶೀಲನೆ ನಡೆಸಿದ್ದ ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್ ತೀವ್ರ ಆಕ್ರೋಷ ವ್ಯಕ್ತಪಡಿಸಿದ್ದರು. ಕಾಮಗಾರಿ ಕಳಪೆಯಾಗಿದ್ದು, ಸೂಕ್ತ ತನಿಖೆ ನಡೆಸಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದರು. ಮಾತ್ರವಲ್ಲದೇ ಈ ಕುರಿತು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದರು. ಕೊಡಗು ಜಿಲ್ಲೆಗೆ ಈ ಕಾಮಗಾರಿ ಹೊಂದಿಕೊಳ್ಳುವುದಿಲ್ಲ. ಹೀಗಾಗಿ ತಡೆಗೋಡೆಯ ತಳಭಾಗ ದಲ್ಲಿ ದೊಡ್ಡ ಪ್ರಮಾಣದಲ್ಲಿ ಅಡಿಪಾಯ ನಿರ್ಮಿಸಿ ಮೇಲ್ಭಾಗದವರೆಗೆ ಕಾಂಕ್ರೀಟ್ ಗೋಡೆ ನಿರ್ಮಿಸುವಂತೆ ಸಲಹೆ ನೀಡಿದ್ದೆ. ಆ ಸಂದರ್ಭ ಸದರಿ ಕಾಮಗಾರಿಯನ್ನು ದೆಹಲಿಯಿಂದ ಬಂದ ಇಂಜಿನಿಯರ್ ಅವರ ನಿರ್ದೇಶನದಂತೆ ತಡೆಗೋಡೆ ನಿರ್ಮಿಸುತ್ತಿರುವುದಾಗಿ ಇಲ್ಲಿನ ಇಂಜಿನಿಯರ್ ಮತ್ತು ಗುತ್ತಿಗೆದಾರರು ತಿಳಿಸಿದ್ದಲ್ಲದೇ ತಮ್ಮ ಸಲಹೆಯನ್ನು ಪರಿಗಣಿಸಿಲ್ಲ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು. ಕಾಮಗಾರಿಯನ್ನು ಕೈಗೊಂಡ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಅಲ್ಲದೇ, ಸಂಬಂಧಿಸಿದ ಇಂಜಿನಿಯರ್ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಲೋಕೋಪಯೋಗಿ ಇಲಾಖೆಯ ಸರಕಾರದ ಕಾರ್ಯದರ್ಶಿಗಳಿಗೆ ಶಾಸಕ ಅಪ್ಪಚ್ಚು ರಂಜನ್ ಪತ್ರದ ಮೂಲಕ ಆಗ್ರಹಿಸಿದ್ದರು.

ವಾಕ್ ಸ್ವಾತಂತ್ರ್ಯ ಸಂರಕ್ಷಿಸುವುದು ಪತ್ರಿಕಾ ಕ್ಷೇತ್ರದ ಜವಾಬ್ದಾರಿ

ವಿರಾಜಪೇಟೆ ತಾಲೂಕು ಪತ್ರಕರ್ತಕ ಸಂಘ ಉದ್ಘಾಟನೆ



ವಿರಾಜಪೇಟೆ, ನ.17– ಸಂವಿಧಾನ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ನೀಡಿರುವ 'ವಾಕ್ ಸ್ವಾತಂತ್ರ್ಯ'ವನ್ನು ದುರುಪಯೋಗವಾಗದಂತೆ ಸಂರಕ್ಷಿಸಿಕೊಳ್ಳುವ ಜವಾಬ್ದಾರಿ ಪತ್ರಿಕಾ ಕ್ಷೇತ್ರದ್ದಾಗಿದೆ ಎಂದು ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ ಅಭಿಪ್ರಾಯಿಸಿದರು.

ಕೊಡಗು ಪತ್ರಕರ್ತರ ಸಂಘದ ವೀರಾಜಪೇಟೆ ತಾಲೂಕು ಘಟಕವನ್ನು ಇಲ್ಲಿನ ಮಹಿಳಾ ಸಮಾಜದ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖ 4 ಸ್ತಂಭಗಳಲ್ಲಿ ಒಂದಾದ 'ಪತ್ರಿಕಾ ರಂಗ'ದ ತಳಹದಿಯೇ ಸಂವಿಧಾನ ಕೊಡಮಾಡಿರುವ ವಾಕ್ ಸ್ವಾತಂತ್ರ್ಯವಾಗಿದೆ ಎಂದು ಸ್ಪಷ್ಟಪಡಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆ ಬಂದೊದಗಿದ ಸಂದರ್ಭಗಳಲ್ಲೆಲ್ಲ ಪತ್ರಿಕಾ ಕ್ಷೇತ್ರ ಮಹತ್ತರವಾದ ಕಾರ್ಯ ನಡೆಸುವ ಮೂಲಕ, ನಿಜ ಸ್ಥಿತಿಯನ್ನು ಜನರಿಗೆ ತಿಳಿಸುವ ಪ್ರಯತ್ನಗಳನ್ನು ಮಾಡಿದೆ. ಪ್ರಜಾತಂತ್ರ ವ್ಯವಸ್ಥೆಗೆ ವಿರುದ್ಧವಾಗಿದ್ದ ಎಮರ್ಜೆನ್ಸಿ ಸಂದರ್ಭ ಪತ್ರಿಕಾ ಕ್ಷೇತ್ರ ಮಾಡಿದ ಕಾರ್ಯ ಅಪೂರ್ವವೆಂದು ಉದಾಹರಿಸಿದ ಅವರು, ಪತ್ರಿಕಾ ಕ್ಷೇತ್ರ ಸಶಕ್ತವಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಪ್ರಜಾಪ್ರಭುತ್ವ ಉಳಿಯುತ್ತದೆಂದು ದೃಢವಾಗಿ ನುಡಿದರು.

ಸತ್ಯದ ಪ್ರತಿಪಾದನೆಯಾಗಲಿ: ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿಗಳು ಮಾತನಾಡಿ, ಪತ್ರಿಕಾ ಕ್ಷೇತ್ರ ಇಂದಿನ ಮಾಧ್ಯಮಗಳ ಬಿರುಸಿನ ಓಟದ ನಡುವೆ 'ಸತ್ಯ' ಪ್ರತಿಪಾದನೆಯ ಕಾರ್ಯಕ್ಕೆ ಹೆಚ್ಚಿನ ಒತ್ತನ್ನು ನೀಡುವುದು ಅತ್ಯವಶ್ಯವೆಂದು ನುಡಿದರು. ಗ್ರಾಮೀಣ ಜನರ ದುಃಖ ದುಮ್ಮಾನ, ಸಂಕಷ್ಟಗಳನ್ನು ಬಿಂಬಿಸುವ ಸೂಕ್ಷ್ಮತೆಯನ್ನು ಪತ್ರಕರ್ತರು ಹೊಂದಬೇಕು. ಗ್ರಾಮೀಣರ ಸಂಕಷ್ಟಗಳಿಗೆ ಸ್ಪಂದಿಸಿದಾಗ ಮಾತ್ರ ಅವರಿಗೆ ನ್ಯಾಯ ಬದಗಿಸಿದಂತಾಗುತ್ತದೆ ಎಂದು ಸ್ವಾಮೀಜಿಗಳು ಹೇಳಿದರು.

ಎಂಎಲ್‌ಸಿ ಸುಜಾ ಕುಶಾಲಪ್ಪ ಮಾತನಾಡಿ, ಸೈನಿಕರು ದೇಶದ ಗಡಿಗಳನ್ನು ಕಾಯುವಂತೆ, ಸಮಾಜವನ್ನು ತಿದ್ದುವ, ಸರಿ ಹಾದಿಯಲ್ಲಿ ಸಾಗುವಂತೆ ಮಾಡುವ ಮಹತ್ತರ ಕಾರ್ಯ ಪತ್ರಿಕಾ ಕ್ಷೇತ್ರದಿಂದ ನಡೆಯುವಂತಾಗಲಿ ಎಂದು ಹಾರೈಸಿದರು. ರಾಜ್ಯ ಜೆಡಿಎಸ್‌ನ ವಕ್ತಾದ ಸಂಕೇತ್ ಪೂವಯ್ಯ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯ 4ನೇ ಅಂಗವಾದ ಪತ್ರಿಕಾ ಕ್ಷೇತ್ರವನ್ನು ಸರ್ಕಾರಗಳು ಹೇಗೆ ನಡೆಸಿಕೊಳ್ಳುತ್ತಿವೆ ಎಂದು ಪ್ರಶ್ನಿಸಿದರಲ್ಲದೇ, ಗ್ರಾಮೀಣ ಪತ್ರಕರ್ತರ ಸಂಕಷ್ಟಗಳಿಗೆ ಸ್ವಾತಂತ್ರ ನಂತರದ ಅವಧಿಯ ಯಾವುದೇ ಸರ್ಕಾರಗಳು ಇಲ್ಲಿಯವರೆಗೆ ಸೂಕ್ತವಾಗಿ ಸ್ಪಂದಿಸಿಲ್ಲ. ಅವರ ಬದುಕಿಗೊಂದು ಭದ್ರತೆ, ಬದ್ಧತೆಯನ್ನು ಒದಗಿಸುವುದು, ಸೌಲಭ್ಯಗಳನ್ನು ನೀಡುವುದು, ನಿವೇಶನಗಳನ್ನು ಒದಗಿಸುವ ಕಾರ್ಯಗಳು ನಡೆಯಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರಗಳು ಚಿಂತಿಸಬೇಕೆಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೊಲ್ಲೀರ ಧರ್ಮಜ ಉತ್ತಪ್ಪ ಮಾತನಾಡಿ, ಪತ್ರಿಕಾ ರಂಗದಲ್ಲಿ ಕಾರ್ಯನಿರ್ವಹಿಸುವವರು ಜನರ ಭಾವನೆಗಳಿಗೆ ಸ್ಪಂದಿಸಿ, ಪೂರಕ ವಿಚಾರಗಳನ್ನು ನೀಡುವುದು ಅವಶ್ಯವೆಂದು ನುಡಿದರು. ವಿರಾಜಪೇಟೆ ಮಹಿಳಾ ಸಂಘದ ಅಧ್ಯಕ್ಷೆ ಪಟ್ರಪಂಡ ಗೀತಾ ಬೆಳ್ಯಪ್ಪ ನೂತನ ತಾಲೂಕು ಸಂಘಕ್ಕೆ ಶುಭ ಕೋರಿದರು.

ಕೊಡಗು ಪತ್ರಕರ್ತರ ಸಂಘದ ವಿರಾಜಪೇಟೆ ಘಟಕದ ಅಧ್ಯಕ್ಷ ಮುಲ್ಲೆಂಗಡ ಮಧೋಶ್ ಪೂವಯ್ಯ ಮಾತನಾಡಿ, ಸಮಗ್ರ ಶಕ್ತಿಯಲ್ಲಿ ಯಾವತ್ತೂ ಬಲವಿದೆ. ಸಂಘಟನೆಯ ಮೂಲಕ ಸಾಧಿಸಲು ಸಾಧ್ಯವಾಗದ ಯಾವೊಂದು ಕೆಲಸವೂ ಇಲ್ಲ. ತಾಲೂಕು ಘಟಕದ ಮೂಲಕ ಅತ್ಯುತ್ತಮವಾಗಿ ಸರ್ವರ ಸಹಕಾರದೊಂದಿಗೆ ಕಾರ್ಯನಿರ್ವಹಿಸುವುದಾಗಿ ವಿಶ್ವಾಸದಿಂದ ನುಡಿದರು.

ಗೌರವ ಸಮರ್ಪಣೆ: ಕೊಡಗಿನ ಪ್ರಥಮ ಮಹಿಳಾ ಸಂಪಾದಕಿಯಾದ ರಾಷ್ಟ್ರಮತ ಪತ್ರಿಕೆಯ ಜಯಲಕ್ಷ್ಮಿ ಗೋವಿಂದರಾಜ್, ತೂಕ್ ಬೊಳಕ್ ಪತ್ರಿಕೆಯ ಸಂಪಾದಕ ಮುಲ್ಲೇಂಗಡ ಶಂಕರಿ ಪೊನ್ನಪ್ಪ ಪೂಮಾಲೆ ಪತ್ರಿಕೆಯ ಸಂಪಾದಕ ಅಜ್ಜಿನಿಕಂಡ ಮಹೇಶ್ ಮತ್ತು ರಾಷ್ಟ್ರಬಂಧು ಪತ್ರಿಕೆಯ ಸಂಪಾದಕ ಅರುಣ್ ಕುಮಾರ್ ಅವರನ್ನು ಪತ್ರಕರ್ತರ ಸಂಘದ ವಿರಾಜಪೇಟೆ ಘಟಕದ ವತಿಯಿಂದ ಅತಿಥಿಗಣ್ಯರು ಸನ್ಮಾನಿಸಿ ಗೌರವಿಸಿದರು.

ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷರಾದ ಎಸ್.ಎ.ಮುರಳೀಧರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ನಾಳೆಯಿಂದ 'ಪ್ರಾಚೀನ ನಾಣ್ಯಗಳ ಪ್ರದರ್ಶನ' ಕಾರ್ಯಕ್ರಮ

ಮಡಿಕೇರಿ, ನ.17– ನವೆಂಬರ್ 19 ರಿಂದ 25 ರವರೆಗೆ ವಿಶ್ವ ಪರಂಪರೆ ಸಪ್ತಾಹದ ಪ್ರಯುಕ್ತ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ನಗರದ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ನ.19 ರಿಂದ 21 ರವರೆಗೆ ಹುಣಸೂರು ಪ್ರಾಚೀನ ನಾಣ್ಯ ಸಂಗ್ರಹಕಾರರು, ನಾಣ್ಯ ಶಾಸ್ತ್ರಜ್ಞರಾದ ಪಿ.ಕೆ.ಕೇಶವಮೂರ್ತಿ ಅವರಿಂದ 'ಪ್ರಾಚೀನ ನಾಣ್ಯಗಳ ಪ್ರದರ್ಶನ' ಕಾರ್ಯಕ್ರಮ ನಡೆಯಲಿದೆ ಎಂದು ಸರ್ಕಾರಿ ವಸ್ತು ಸಂಗ್ರಹಾಲಯದ ಕ್ಯೂರೇಟರ್ ರೇಖಾ ಅವರು ಅವರು ತಿಳಿಸಿದ್ದಾರೆ.

ಹದಗೆಟ್ಟ ರಸಲ್‌ಪುರ–ದುಬಾರೆ ರಸ್ತೆ ದುರಸ್ತಿಗೆ ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ



ಕುಶಾಲನಗರ, ನ.17– ತಾಲೂಕು ವ್ಯಾಪ್ತಿಯ ರಸುಲ್ ಪುರದಿಂದ ಹಿಡಿದು ದುಬಾರೆ ತನಕ ಹದಗೆಟ್ಟಿರುವ ರಾಜ್ಯ ಹೆದ್ದಾರಿ ದುರಸ್ತಿಗೆ ಒತ್ತಾಯಿಸಿ ಜನಪ್ರತಿ ನಿಧಿಗಳು, ಗ್ರಾಮಸ್ಥರು ಗುರುವಾರ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ರಾಜ್ಯ ಹೆದ್ದಾರಿ–91 ರಲ್ಲಿ ಗುಡ್ಡೆ ಹೊಸೂರು–ಸಿದ್ದಾಪುರ ಮಾರ್ಗ ಮಧ್ಯೆ ರಸುಲ್ ಪುರದ ಬಸವೇಶ್ವರ ದೇವಾಲಯ ಬಳಿಯಿಂದ ದುಬಾರೆ ತನಕ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ರಸ್ತೆಯುದ್ದಕ್ಕೂ ಬೃಹತ್ ಹೊಂಡಗಳು ನಿರ್ಮಾಣಗೊಂಡಿವೆ. ಈ ಮಧ್ಯೆ ಈ ಮಾರ್ಗದಲ್ಲಿ 3 ಕಿಮೀ ಉದ್ದದ ರಸ್ತೆಯನ್ನು 4 ಕೋಟಿ ರೂ. ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಅಭಿವೃದ್ಧಿ ಪಡಿಸಲು ಕಾಮಗಾರಿ ಆರಂಭಿಸಲಾಗಿತ್ತು. ನಾಲ್ಕು ಕಡೆಗಳಲ್ಲಿ ಕಲ್ವರ್ಟ್ ನಿರ್ಮಿಸಿದ ಬಳಿಕ ಕಾಮಗಾರಿ ಸ್ಥಗಿತಗೊಂಡು ತಿಂಗಳುಗಳೇ ಕಳೆದಿವೆ ಎಂದು ಗ್ರಾಮಸ್ಥರು ಆರೋಪಿಸಿದರು.

ಈ ನಡುವೆ ಕಾಮಗಾರಿ ಗುತ್ತಿಗೆ ಪಡೆದವರು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲ ವಾಹನ ಸಂಚಾರದಿಂದ ರಸ್ತೆ ಸಂಪೂರ್ಣ ಧೂಳುಮಯವಾಗಿದೆ. ಇದರಿಂದ ಪ್ರಯಾಣಿಕರು, ಪಾದಚಾರಿಗಳು, ರಸ್ತೆ ಬದಿ ನಿವಾಸಿಗಳಿಗೆ ತೀವ್ರ ಅನಾನುಕೂಲ ಉಂಟಾಗಿದೆ ಎಂದು ಆರೋಪಿಸಿ ಹೊಸಪಟ್ಟಣ ಬಳಿ ಮುತ್ತಪ್ಪ ದೇವಾಲಯ ಬಳಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಲಾಯಿತು. ನಂಜರಾಯಪಟ್ಟಣ ಗ್ರಾಪಂ ಅಧ್ಯಕ್ಷ ಸಿ.ಎಲ್.ವಿಶ್ವ ನೇತೃತ್ವದಲ್ಲಿ ಗ್ರಾಪಂ ಜನಪ್ರತಿನಿಧಿಗಳು, ಗ್ರಾಮಸ್ಥರು ರಸ್ತೆ ತಡೆ ನಡೆಸಿದರು. ಕೂಡಲೇ ಗುಂಡಿ ಮುಚ್ಚುವ ಕಾಮಗಾರಿ ಕೈಗೊಳ್ಳುವಂತೆ ಒತ್ತಾಯಿಸಿ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಿ.ಎಲ್.ವಿಶ್ವ, ಈ ಮಾರ್ಗ ಸಂಪೂರ್ಣ ದುಸ್ಥಿತಿಯಿಂದ ಕೂಡಿರುವ ಕಾರಣ ಪ್ರಯಾಣಿಕರಿಗೆ ಸಂಚಕಾರ ಎದುರಾಗಿದೆ. ಹಲವು ಮಂದಿ ದ್ವಿ ಚಕ್ರ ವಾಹನ ಸವಾರರು ಗುಂಡಿಗೆ ಬಿದ್ದು ಕೈಕಾಲು ಮುರಿದು ಕೊಂಡಿದ್ದಾರೆ. ವಿದ್ಯಾರ್ಥಿಗಳು ರಸ್ತೆಯಲ್ಲಿ ನಡೆದು ಸಾಗಲು ಸಾಧ್ಯವಾಗದ ಪರಿಸ್ಥಿತಿಯಿದೆ. ರಸ್ತೆ ನಿರ್ವಹಣೆ ಹೊಣೆ ಹೊತ್ತವರು ಸಂಪೂರ್ಣ ನಿರ್ಲಕ್ಷ್ಯ ವಹಿಸಿದ ಕಾರಣ ರಸ್ತೆ ಧೂಳುಮಯವಾಗಿದೆ. ಸದ್ಯದಲ್ಲೇ ಎಲ್ಲಾ ರಸ್ತೆಗಳ ಗುಂಡಿ ಮುಚ್ಚಲಾಗುವುದು ಎಂದು ಸಂಸದ ಪ್ರತಾಪ್ ಸಿಂಹ ಸೇರಿದಂತೆ ಶಾಸಕದ್ವರು ತಿಳಿಸಿದ್ದು ಕೂಡಲೆ ಹೇಳಿದಂತೆ ನಡೆದುಕೊಳ್ಳಬೇಕಿದೆ. 15 ದಿನಗಳ ಒಳಗೆ ಪರಿಹಾರ ಲಭಿಸದಿದ್ದರೆ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಗ್ರಾಪಂ ಉಪಾಧ್ಯಕ್ಷೆ ಸಮೀರ, ಸದಸ್ಯರಾದ ಕುಸುಮ, ಜಾಜಿ ತಮ್ಮಯ್ಯ, ಮಾಜಿ ಅಧ್ಯಕ್ಷೆ ಶೈಲಜಾ, ಮಾಜಿ ಸದಸ್ಯ ಜೆ.ಸಿ.ತಮ್ಮಯ್ಯ, ಗ್ರಾಮಸ್ಥರಾದ ಕೆ.ಟಿ.ಹರೀಶ್, ಸುರೇಶ್, ಪ್ರಸನ್ನ, ಎಂ.ಎಚ್. ಉಂಬು, ವೇಲಾಯುಧ, ಸತೀಶ್, ಸನ್ನಿ, ಸುಬ್ಬಪ್ಪ, ಚಂದ್ರಶೇಖರ್, ಮನು, ಮಣಿ, ವಿದ್ಯಾ ಮತ್ತಿತರರು ಇದ್ದರು.

ನಾಳೆ ವಿದ್ಯುತ್ ಅದಾಲತ್

ಮಡಿಕೇರಿ, ನ.17– ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ಹಿನ್ನೆಲೆಯಲ್ಲಿ ಬೆಟ್ಟಗೇರಿ, ಹುದಿಕೇರಿ, ಬಿರುನಾಣಿ ಅವರೆಗುಂದ, ನಂಜ ರಾಯಪಟ್ಟಣ ಹಾಗೂ ಸೋಮವಾರಪೇಟೆಯ ಕಟ್ಟೆಪುರ ಗ್ರಾಮದ ಕಟ್ಟೆಪುರ ನ.19 ರಂದು ಬೆಳಗ್ಗೆ 11 ಗಂಟೆಯಿಂದ ವಿದ್ಯುತ್ ಅದಾಲತ್ ನಡೆಯಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಭೀಮನಗರದ ಬಸವನಿಗೆ ಲಿಂಗ ಮುದ್ರೆಧಾರಣೆ



ಕೊಳ್ಳೇಗಾಲ, ನ.17– ಕೊಳ್ಳೇಗಾಲದ ಭೀಮನಗರ ಬಡಾವಣೆಯ ಶ್ರೀ ಬಸವನಗುಡಿ ದೇವಸ್ಥಾನದ ಬಸವನಿಗೆ ಗುರುವಾರ ತಾಲೂಕಿನ ಹೊಂಡರಬಾಳು ಗ್ರಾಮದ ಶ್ರೀ ಗುರು ಸಿದ್ದೇಶ್ವರಸ್ವಾಮಿ ಬೆಟ್ಟದಲ್ಲಿ ಲಿಂಗಧಾರಣೆ ಹಾಗೂ ಮುದ್ರೆ ಸಂಪ್ರೋಕ್ಷಣೆ ವಿಶೇಷ ಪೂಜಾ ಕೈಂಕರ್ಯ ನೆರವೇರಿತು.

ಹೊಂಡರಬಾಳು ಶಂಕಿನ ಮಠಾಧ್ಯಕ್ಷರಾದ ವಿಧ್ವಾನ್ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮೀಜಿ ಅವರ ನೇತೃತ್ವದಲ್ಲಿ ಬೆಟ್ಟದ ಮೇಲಿರುವ ಶ್ರೀ ಸಿದ್ದೇಶ್ವರ ದೇವಸ್ಥಾನದಲ್ಲಿ ಮುಂಜಾನೆ ಶ್ರೀಸ್ವಾಮಿಗೆ ವಿಶೇಷ ಅಭಿಷೇಕ, ಪಂಚಾಮೃತ ನೈವೇಧ್ಯ, ಧಾರ್ಮಿಕ ಪೂಜೆಯನ್ನು ವಿಧಿ, ವಿಧಾನಗಳೊಂದಿಗೆ ನೆರವೇರಿಸಲಾಯಿತು. ಬಳಿಕ ಆವರಣದಲ್ಲಿ ಬಸವನನ್ನು ಅಲಂಕಾರಗೊಳಿಸಿ, ಮುಹೂರ್ತದೊಂದಿಗೆ ಕಳಸ ಸ್ಥಾಪನೆ ಸಾಂಪ್ರಾದಾಯಿಕ ಪೂಜೆ ಸಲ್ಲಿಸಿದ ಬಳಿಕ ಹೋಮ ಹವನ ಕೈಗೊಂಡು ಬಸವನಿಗೆ ಲಿಂಗಧಾರಣೆ ಹಾಗೂ ಹೊಂಡರಬಾಳು ಗ್ರಾಮದ ಶಂಕರಪ್ಪ ಆರಾಧ್ಯ ಅವರಿಂದ ಲಿಂಗ ಮುದ್ರೆಧಾರಣೆ ಸಂಪ್ರೋಕ್ಷಣೆ ನೆರವೇರಿಸಲಾಯಿತು.

ಬಳಿಕ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮೀಜಿ ಅವರು ಮಾತನಾಡಿ, ಲಿಂಗಧಾರಣೆ ಮತ್ತು ಮುದ್ರೆ ಸಂಪ್ರೋಕ್ಷಣೆಗೊಂಡ ಬಸವನಿಗೆ ಇಂದಿನಿಂದ ಭೀಮನಗರದ ಶ್ರೀ ಬಸವನಗುಡಿ ದೇವಸ್ಥಾನದಲ್ಲಿ ಅಗತ್ಯ ಪೂಜಾ ಪುನಸ್ಕಾರಗಳನ್ನು ಸಲ್ಲಿಸಿ, ಬಡಾವಣೆಯ ಶುಭ ಕಾರ್ಯಗಳು ಹಾಗೂ ಹಬ್ಬಗಳು ಮೆರವಣಿಗೆಗಳಲ್ಲಿ ಸದ್ಬಳಕೆ ಮಾಡಿಕೊಂಡು ದಾರ್ಮಿಕ ಕಾರ್ಯಗಳನ್ನು ಕೈಗೊಳ್ಳಿ ಎಂದರು.

ಈ ವೇಳೆ ಹೊಂಡರಬಾಳು ಗ್ರಾಮದ ಶ್ರೀ ಸಿದ್ದೇಶ್ವರ ಬೆಟ್ಟದ ಶ್ರೀ ಗುರು ಸಿದ್ದೇಶ್ವರಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ಶಿವಕುಮಾರ್, ಅರ್ಚಕರಾದ ಗುರುಸ್ವಾಮಿ ಮಂಜುನಾಥ್, ವೀರತ್ತಪ್ಪ ಪಾಲ್ಗೊಂಡಿದ್ದರು. ಈ ವೇಳೆ ಭೀಮನಗರ ಬಡಾವಣೆಯ ದೊಡ್ಡ ಯಜಮಾನ ಚಿಕ್ಕಮಾಳಿಗೆ, ಯಜಮಾನರುಗಳಾದ ಎಸ್.ರಾಜಶೇಖರಮೂರ್ತಿ, ಪ್ರಭುಸ್ವಾಮಿ, ಲಿಂಗರಾಜು, ಬಸವ ನಿರ್ವಾಹಕ ರಾಚಯ್ಯ ಇನ್ನಿತರರು ಇದ್ದರು.

ದೊಡ್ಡಮೋಳೆಗೆ ಶಾಸಕ ಪುಟ್ಟರಂಗಶೆಟ್ಟಿ ಭೇಟಿ

ಸ್ಮಶಾನಕ್ಕೆ ನುಗ್ಗುವ ನೀರು, ಕೃಷಿ ಚಟುವಟಿಕೆಗೆ ಅಡ್ಡಿ ಬಗ್ಗೆ ಪರಿಶೀಲನೆ, ಕ್ರಮಕ್ಕೆ ಸೂಚನೆ



ಚಾಮರಾಜನಗರ ನ.17– ತಾಲೂಕಿನ ದೊಡ್ಡ ಮೋಳೆ ಗ್ರಾಮದಲ್ಲಿನ ಜನತೆ ಮೃತಪಟ್ಟರೇ ಮೃತದೇಹವನ್ನು ಅಂತ್ಯಸಂಸ್ಕಾರ ಮಾಡಲು ಜಾಗವಿಲ್ಲ. ಕೃಷಿ ಚಟುವಟಿಕೆಗಳಿಗೆ ಜಮೀನು ಮತ್ತು ಸುತ್ತ ಮುತ್ತ ನೀರು ನಿಂತು ಕೃಷಿ ಚಟುವಟಿಕೆಗಳಿಗೂ ತೊಂದರೆಯಾಗಿದ್ದು, ಕೂಡಲೇ ಪರ್ಯಾಯ ಕ್ರಮಕ್ಕೆ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ತಾಲೂಕಿನ ದೊಡ್ಡಮೋಳೆ ಗ್ರಾಮದ ಗ್ರಾಮಸ್ಥರು ಶಾಸಕ ಸಿ.ಪುಟ್ಟರಂಗಶೆಟ್ಟಿಗೆ ಮನವಿ ಮಾಡಿದರು.

ತಾಲೂಕಿನ ಹರದನಹಳ್ಳಿ ಗ್ರಾಮದ ಮರಗದಕೆರೆ, ಚಿಕ್ಕಕೆರೆ, ಸಿಂಡಿಗೆರೆ, ದೊಡ್ಡಕೆರೆಯಿಂದ ನೀರು ಬಿಟ್ಟ ವೇಳೆ ದೊಡ್ಡ ಮೋಳೆ ಗ್ರಾಮದ ಮಧ್ಯೆ ನೀರು ನಿಲ್ಲುತ್ತಿದೆ. ಈ ನೀರು ಸ್ಮಶಾನದ ಜಾಗದಲ್ಲಿ ನಿಲ್ಲುತ್ತಿದೆ. ಇದರಿಂದ ಗ್ರಾಮಸ್ಥರು ಮೃತದೇಹವನ್ನು ಅಂತ್ಯಕ್ರಿಯೆ ಮಾಡಲು ದಾರಿಯಿಲ್ಲದಂತಾಗಿರುವ ಸ್ಥಿತಿಯಿದೆ, ಈ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಸಂಬಂಧಪಟ್ಟ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಜತೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಭೇಟಿ ನೀಡಿ, ಪರಿಸ್ಥಿತಿಯನ್ನು ಅವಲೋಕಿಸಿದರು.

ಸ್ಮಶಾನ ಸೇರಿದಂತೆ ಕೃಷಿ ಜಮೀನುಗಳಿಗೆ ತೆರಳುವ ಸಾರ್ವಜನಿಕರ ಅನುಕೂಲಕ್ಕಾಗಿ ಪರ್ಯಾಯ ರಸ್ತೆ ಮಾರ್ಗ ಕಲ್ಪಿಸಬೇಕು, ಗ್ರಾಮದ ಮಧ್ಯೆ ನೀರು ನಿಲ್ಲದಂತೆ ಕ್ರಮ ಕೈಗೊಳ್ಳುವಂತೆ ಶಾಸಕರು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾಪಂ ಮಾಜಿ ಸದಸ್ಯ ಪುಟ್ಟಸ್ವಾಮಿ, ನಿಗಮದ ಎಇಇ ಮಂಜುನಾಥ್, ಎಂಜಿನಿಯರ್‌ಗಳಾದ ಮಹದೇವಸ್ವಾಮಿ, ಅವಿನಾಶ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ನಾಳೆ ವಿದ್ಯುತ್ ಅದಾಲತ್

ಚಾಮರಾಜನಗರ, ನ.17– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಮಲ್ಲೇದೇವನಹಳ್ಳಿ, ಮಾದಾಪುರ ಮತ್ತು ದೊಡ್ಡರಾಯಪೇಟೆಯಲ್ಲಿ ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ಸಂಬಂಧ ವಿದ್ಯುತ್ ಅದಾಲತನ್ನು ನವೆಂಬರ್ 19ರಂದು ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ.

ನ.20, ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ನ.17– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಚಾಮರಾಜನಗರ ಮತ್ತು ಸಂತೇಮರಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ನ. 20ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಬದನಗುಪ್ಪೆ, ಪಣ್ಯದಹುಂಡಿ, ಬೆಂಡರವಾಡಿ, ಕೆಲ್ಲಂಬಳ್ಳಿ ಎನ್‌ಜೆವೈ, ಇಂಡಸ್ಟ್ರಿಯಲ್ ಏರಿಯಾ, ಕೆಇಡಿಪಿ 10 ಮತ್ತು 11, ಮುತ್ತಿಗೆ, ಹೆಗ್ಗೋಠಾರ ಸುತ್ತಮುತ್ತಲ ಪ್ರದೇಶಗಳು, ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ ಮರಿಯಾಲ, ಬೇಡರಪುರ, ಕೆಲ್ಲಂಬಳ್ಳಿ, ಬಸವನಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಹೊಂಗನೂರು, ಇರಸವಾಡಿ, ಮಸಣಾಪುರ, ಚಾಟಿಪುರ, ಗಂಗವಾಡಿ, ಬೂದಂಬಳ್ಳಿ, ಬೂದಂಬಳ್ಳಿ ಮೋಳೆ, ಗೂಳಿಪುರ, ಹೊಮ್ಮ, ರೇಚಂಬಳ್ಳಿ, ಹೆಚ್. ಮೂಕಳ್ಳಿ, ಕುರುಬರಹುಂಡಿ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಚಾ.ನಗರ ನಗರಸಭೆ ಆನ್‌ಲೈನ್ ಸೇವೆಗೆ ಅಡಚಣೆ

ಚಾಮರಾಜನಗರ, ನ.17– ಚಾಮರಾಜನಗರ ನಗರಸಭಾ ವ್ಯಾಪ್ತಿಯ ಪೌರಸುಧಾರಣಾ ಕೋಶದ ತಂತ್ರಾಂಶದಲ್ಲಿ ತಾಂತ್ರಿಕ ತೊಂದರೆ ಇರುವುದರಿಂದ ನಗರಸಭೆಯ ಆನ್‌ಲೈನ್ ಸೇವೆಗಳಾದ ಇ–ಆಸ್ತಿ ಆಸ್ತಿ ತೆರಿಗೆ ಚಲನ್, ಉದ್ದಿಮೆ ಪರವಾನಗಿ, ಜಲನಿಧಿ, ಇನ್ನಿತರ ಸೇವೆಗಳನ್ನು ಆನ್‌ಲೈನ್‌ನಲ್ಲಿ ನೀಡಲು ಅಡಚಣೆ ಉಂಟಾಗಿದೆ. ತಂತ್ರಾಂಶ ಸರಿಯಾದ ನಂತರ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗುತ್ತದೆ. ನಗರಸಭಾ ವ್ಯಾಪ್ತಿಯ ಆಸ್ತಿಯ ಮಾಲೀಕರು ಸಾರ್ವಜನಿಕರು ಸಹಕರಿಸುವಂತೆ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಪುಟ್ಟಸುಬ್ಬಪ್ಪಗೆ ಗೌರವ ಡಾಕ್ಟರೇಟ್



ಯಳಂದೂರು, ನ.17– ತಾಲೂಕು ವೀರಶೈವ ಲಿಂಗಾಯಿತ ಮಹಾಸಭಾದ ಅಧ್ಯಕ್ಷ, ಎಪಿಎಂಸಿಯ ಮಾಜಿ ನಿರ್ದೇಶಕ, ಹಾಪ್‌ಕಾಮ್ಸ್ ಹಾಲಿ ನಿರ್ದೇಶಕ, ಕೆಸ್ತೂರು ಗ್ರಾಮದ ಪುಟ್ಟಸುಬ್ಬಪ್ಪ ಅವರಿಗೆ ಕರ್ನಾಟಕ ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ ಗೌರವ ಡಾಕ್ಟರೇಟ್ ನೀಡಲಾಗಿದೆ.

ತಮಿಳುನಾಡಿನ ಏಷಿಂಯಾ ವೇದಿಕ್ ಕಲ್ಚರಲ್ ರಿಸರ್ಚ್ ಯೂನಿವರ್ಸಿಟಿಯ ವತಿಯಿಂದ ಈ ಗೌರವ ಸಂದಿದೆ. ಹಲವು ವರ್ಷಗಳಿಂದಲೂ ಇವರು ಸಹಕಾರ ಕ್ಷೇತ್ರದಲ್ಲಿ ಅಪಾರ ಸೇವೆಗೈದಿದ್ದು, ಜಿಲ್ಲೆಯಲ್ಲಿ ಗುರುತಿಸಿಕೊಂಡಿದ್ದಾರೆ. ಇವರಿಗೆ ಡಾಕ್ಟರೇಟ್ ಗೌರವ ಸಂಧಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ಹಾಗೂ ಮುಖಂಡರು ಇವರನ್ನು ಅಭಿನಂದಿಸಿದ್ದಾರೆ.

ಕನ್ನಡ ನಾಡು, ನುಡಿಗಾಗಿ ಕರವೇ ಹೋರಾಟ ನಿರಂತರ



ಚಾಮರಾಜನಗರ, ನ.17– ಕನ್ನಡ ನಾಡಿನಲ್ಲಿ ಕನ್ನಡಿಗರೇ ಪ್ರಥಮ ಅದ್ಯತೆಯಾಗಬೇಕು. ಉದ್ಯಮಗಳು ಹಾಗೂ ಉದ್ಯೋಗ ಬಹುಪಾಲು ಕನ್ನಡಿಗರ ಪಾಲಾಗಬೇಕೆಂಬ ನಮ್ಮ ಹೋರಾಟ ನಿರಂತರವಾಗಿದ್ದು, ಗಡಿನಾಡಿನಲ್ಲಿಯು ಕನ್ನಡದ ಬೆಳೆವಣಿಗೆಗೆ ಹೆಚ್ಚಿನ ಒತ್ತು ನೀಡುವುದಾಗಿ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಪ್ರವೀಣ್ ಕುಮಾರ್ ಶೆಟ್ಟಿ ತಿಳಿಸಿದರು.

ನಗರದಲ್ಲಿರುವ ಡಾ. ರಾಜಕುಮಾರ್ ರಂಗಮಂದಿರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಚಾಮರಾಜನಗರ ತಾಲೂಕು ಹಾಗೂ ನಗರ ಘಟಕದ ವತಿಯಿಂದ ಕರ್ನಾಟಕ ರತ್ನ ಡಾ.ಪುನೀತ್‌ರಾಜಕುಮಾರ್ ನೆನಪಿನಲ್ಲಿ ನಡೆದ ಅದ್ದೂರಿ ಕನ್ನಡ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಭುವನೇಶ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಪುನೀತ್ ರಾಜ್‌ಕುಮಾರ್ ಕನ್ನಡದ ಮೇರು ನಟರು ಜೊತೆಗೆ ದಾನ ಧರ್ಮ ಮಾಡುವುದರಲ್ಲೋ ಎತ್ತಿದ ಕೈ. ಕನ್ನಡಕ್ಕೆ ಧಕ್ಕೆಯಾದ ಕನ್ನಡ ಸಂಘಟನೆಗಳು ಪ್ರಮುಖವಾಗಿ ಹೋರಾಟ ಮಾಡುವ ಮೂಲಕ ತಮ್ಮದೇ ಕೊಡುಗೆ ನೀಡಿದ್ದರೆ. ಕರ್ನಾಟಕ ರಕ್ಷಣಾ ವೇದಿಕೆಯು ಕನ್ನಡ ಭಾಷೆ, ನೆಲ, ಜಲ, ಸಂರಕ್ಷಣೆ ಮಾಡುವಲ್ಲಿ ಮುಂಚೂಣಿಯಲ್ಲಿವೆ. ಕನ್ನಡ ಬೆಳೆಯಲು ನಮ್ಮ ಜಿಲ್ಲೆಯವರಾದ ಡಾ. ರಾಜಕುಮಾರ್, ಹಾಗೂ ಅನೇಕ ಸಾಹಿತಿಗಳ ಹೋರಾಟದ ಶ್ರಮ ಇದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಚಾ.ನಗರ ವಿರಕ್ತ ಮಠಾಧ್ಯಕ್ಷರಾದ ಶ್ರೀ ಚನ್ನಬಸವಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಕನ್ನಡಪರ ಸಂಘಟನೆಗಳ ಹೋರಾಟದಿಂದಾಗಿ ಕನ್ನಡ ಭಾಷೆ ಶ್ರೀಮಂತವಾಗಿದೆ. ಯುವ ಜನಾಂಗವು ಸಹ ಮಾತೃಭಾಷೆ ಕನ್ನಡದ ಬಗ್ಗೆ ಹೆಚ್ಚು ಅಭಿಮಾನವನ್ನು ಮೂಡಿಸಿಕೊಂಡು ಕನ್ನಡದ ಭವ್ಯ ಪರಂಪರೆಯನ್ನು ಉಳಿಸಿ ಬೆಳೆಸಿಕೊಳ್ಳಲು ಮುಂದಾಗಬೇಕು ಎಂದರು.

ಚಲನಚಿತ್ರ ನಾಯಕ ನಟ ಧನ್ವೀರ್ ಸನ್ಮಾನ ಸ್ವೀಕರಿಸಿ ಮಾತನಾಡಿ, ಕನ್ನಡ ನಾಡು ನುಡಿಯ ಬೆಳವಣಿಗೆಯಲ್ಲಿ ನಾವೆಲ್ಲರು ಹೋರಾಟ ಮಾಡೋಣ. ಕನ್ನಡ ಚಿತ್ರಗಳನ್ನು ಹೆಚ್ಚು ನೋಡಿ, ಕನ್ನಡಿಗರನ್ನು ಬೆಳೆಸಿ, ನಿಮ್ಮೆಲ್ಲರ ಆಶೀರ್ವಾದದಿಂದ ಕನ್ನಡ ಚಿತ್ರ ರಂಗದಲ್ಲಿ ನಾನು ಒಬ್ಬ ಯುವ ನಟನಾಗಿ ಅಭಿನಯಿಸುತ್ತಿದ್ದೇನೆ ಎಂದು ಚಿತ್ರದ ಜನಪ್ರಿಯ ಡೈಲಾಗ್ ಹೇಳಿ ರಂಜಿಸಿದರು.

ಸಾಹಿತಿ ಬನ್ನೂರು ಕೆ ರಾಜು ಪುನೀತ್ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ನಗರಸಭಾ ಅಧ್ಯಕ್ಷೆ ಆಶಾನಟರಾಜು, ಕರವೇ ಜಿಲ್ಲಾಧ್ಯಕ್ಷ ಆರ್. ಮೋಹನ್, ತಾಲೂಕು ಅಧ್ಯಕ್ಷ ನವೀನ್ ಕಾಲ್ವಿಟಿ, ಪ್ರಧಾನ ಕಾರ್ಯದರ್ಶಿ ಅರ್ಜುನ್, ಉಪಾಧ್ಯಕ್ಷ ಮಣಿ, ಕಾರ್ಯದರ್ಶಿಗಳಾದ ವಿಶ್ವಾಸ್, ಚುಡಹಾಡಿ ಹೋಬಳಿ ಘಟಕದ ಅಧ್ಯಕ್ಷ ಪ್ರಶಾಂತ್, ನಗರ ಘಟಕದ ಅಧ್ಯಕ್ಷ ಗುರುಸ್ವಾಮಿ, ಪ್ರಧಾನ ಕಾರ್ಯದರ್ಶಿ ರಾಜೇಶ್, ಉಪಾಧ್ಯಕ್ಷರಾದ ಮಹೇಂದ್ರ, ಸುಹೇಲ್, ಕೋಂಟಾ, ಕಾರ್ಯದರ್ಶಿ ಪವನ್, ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್, ಮುಖಂಡರಾದ ಎಸ್ಪಿಕೆ ಉಮೇಶ್, ಮಹೇಶ್ ಕುದರ್, ನಗರಸಭಾ ಮಾಜಿ ಅಧ್ಯಕ್ಷ ಪರಿಸರ ಪ್ರೇಮಿ ವೆಂಕಟೇಶ್, ಬುಲೆಟ್ ಚಂದ್ರು, ನಾಗೇಂದ್ರ, ವೇದಿಕೆಯ ಜಿಲ್ಲಾ ಕಾರ್ಯಾಧ್ಯಕ್ಷ ಉಮ್ಮತ್ತೂರು ಚಂದ್ರು, ರೀಯಾಜ್ ಪಾಷಾ, ನಾಗೇಶ್ ನಾಯಕ, ಯಳಂದೂರು ನಾಗರಾಜು, ಮೊದಲಾದವರು ಇದ್ದರು.

ವೃತ್ತಿ ಶಿಕ್ಷಣದ ಮಾಹಿತಿ ಅಗತ್ಯ: ಮಂಜುನಾಥ್



ಚಾಮರಾಜನಗರ, ನ.17– ಶಿಕ್ಷಣದ ಜೊತೆಯಲ್ಲಿ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಕುರಿತು ಮಾಹಿತಿ ನೀಡುವುದರಿಂದ ಮಕ್ಕಳಿಗೆ ವಿದ್ಯಾಭ್ಯಾಸದ ನಂತರ ಅನುಕೂಲವಾಗಲಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಂಜುನಾಥ್ ತಿಳಿಸಿದರು.

ನಗರದ ರಾಮಸಮುದ್ರದ ಬಾಲರಪಟ್ಟಣ ಶಾಲೆಯಲ್ಲಿ ಜಿಲ್ಲಾ ಪಂಚಾಯಿತ್, ಸಾರ್ವಜನಿಕ ಶಿಕ್ಷಣ ಇಲಾಖೆ, ಸಾಕ್ಷರತಾ ಇಲಾಖೆಯಿಂದ ಪ್ರೌಢಶಾಲಾ ಮಕ್ಕಳಿಗೆ ಆಯೋಜಿಸಿದ್ದ 'ಜಿಲ್ಲಾ ಮಟ್ಟದ ವೃತ್ತಿ ಶಿಕ್ಷಣ ಕಲಿಕೋತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ 222 ಪ್ರೌಢ ಶಾಲೆಗಳಿವೆ, ಅದರೆ ಪ್ರದರ್ಶನ ನೀಡಿರುವುದು ಕೆಲವು ಶಾಲೆಗಳು ಮಾತ್ರ. ಶಿಕ್ಷಕರು ಮಕ್ಕಳ ಆಸಕ್ತಿಗೆ ಅನುಗುಣವಾಗಿ ಶಿಕ್ಷಣವನ್ನು ನೀಡುವುದರಿಂದ ವಿದ್ಯಾರ್ಥಿಗಳ ಜೀವನ ಸುಗಮವಾಗಲಿದೆ. ವಿದ್ಯಾರ್ಥಿಗಳು ವೃತ್ತಿ ಶಿಕ್ಷಣದ ತರಗತಿಗಳಲ್ಲಿ ತಿಳಿಯುವ ವಿಷಯಗಳು ಬಹಳಷ್ಟು ಇರುತ್ತದೆ. ಕಲೆ, ಸಂಸ್ಕೃತಿ, ಕರಕುಶಲ ವಸ್ತುಗಳನ್ನು ತಯಾರಿಸುವ ಪದ್ಧತಿ, ತೋಟಗಳನ್ನು ನಿರ್ಮಾಣ ಮಾಡುವ ವಿಧಾನ ಹಾಗೂ ಇನ್ನು ಮುಂತಾದ ವೃತ್ತಿಯ ಬಗ್ಗೆ ಶಿಕ್ಷಣದಲ್ಲಿ ತಿಳಿಯ ಬಹುದು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಬಾಲರಪಟ್ಟಣ ಶಾಲೆಯ ಮುಖ್ಯ ಶಿಕ್ಷಕರಾದ ಸುಜಯ್‌ಕುಮಾರ್ ಮಕ್ಕಳ ಭವಿಷ್ಯ ಅವರು ಕಲಿಯುವ ಶಿಕ್ಷಣದಲ್ಲಿ ಇರುತ್ತದೆ. ವಿಜ್ಞಾನದಲ್ಲಿ ಹೆಚ್ಚು ಅಸಕ್ತಿ ಇರುವ ವಿದ್ಯಾರ್ಥಿಗಳು ಇದ್ದಾರೆ. ಅಂತಹ ವಿದ್ಯಾರ್ಥಿಗಳು ಶಾಲೆಯಲ್ಲಿ ಅಥವಾ ಮನೆಯಲ್ಲಿ ಹೆಚ್ಚಿನ ಪ್ರಯೋಗಗಳನ್ನು ಮಾಡುವುದರಿಂದ ನಿಮಗೆ ಜ್ಞಾನದ ಹರಿವು ಮೂಡಲಿದೆ. ಎಂದರು. ವೃತ್ತಿ ಶಿಕ್ಷಣ ಸಂಘದ ಅಧ್ಯಕ್ಷ ಶಿವಯ್ಯ, ಕಾರ್ಯದರ್ಶಿ ಗೋಪಾಲಯ್ಯ ಹಾಗೂ ವಿಷಯ ಪರಿವೀಕ್ಷಕ ಕೃಷ್ಣಪ್ರಸಾದ್, ಜಿಲ್ಲಾ ಸಮನ್ವಯ ಅಧಿಕಾರಿಗಳು ಶಂಕರ್, ಪುಷ್ಪರಾಜ್, ಲಕ್ಷ್ಮಿಪತಿ, ವಿರೂಪಾಕ್ಷಪ್ಪ ಹಾಗೂ ಶಿಕ್ಷಕರು ಹಾಜರಿದ್ದರು.

ಅನ್ನಭಾಗ್ಯ ಅಕ್ಕಿ ವಶ: ವ್ಯಕ್ತಿ ಬಂಧನ



ಬೇಗೂರು(ಗುಂಡ್ಲುಪೇಟೆ), ನ.17–ಸಮೀಪದ ಸೋಮಹಳ್ಳಿ ಗ್ರಾಮದ ಬಳಿ 911 ಕೆಜಿ ಅನ್ನ ಭಾಗ್ಯ ಅಕ್ಕಿಯನ್ನು ವಶಪಡಿಸಿಕೊಂಡು ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ.

ಗೂಡ್ಸ್ ಆಟೋವೊಂದರಲ್ಲಿ ಅಕ್ರಮವಾಗಿ ಪಡಿತರ ಅಕ್ಕಿ ಸಾಗಾಟ ಮಾಡುತ್ತಿದ್ದ ಖಚಿತ ಮಾಹಿತಿಯ ಮೇರೆಗೆ ಆಹಾರ ಇಲಾಖೆ ಮತ್ತು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಜಗದೀಶ ಧೂಳಶೆಟ್ಟಿ ದಾಳಿ ನಡೆಸಿ ಮೈಸೂರು ಮೂಲದ ಮಹಮ್ಮದ್ ಎಂಬಾತನನ್ನು ಬಂಧಿಸಿ 911 ಕೆಜಿ ಅಕ್ಕಿ ಹಾಗೂ ಅಕ್ಕಿ ಸಾಗಿಸುತ್ತಿದ್ದ ವಾಹನವನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಒಂದನೇ ಪುಟದಿಂದ

ಎಲೆ ತೋಟದಲ್ಲಿ ಸೆರೆ ಸಿಕ್ಕ ಮೊಸಳೆ

ಕಾರ್ಯಾಚರಣೆ ನಡೆಸಿತ್ತು. ಸಂಜೆ 4.30ರಲ್ಲಿ ಪೊದೆಯೊಂದರ ಬಳಿ ಮೊಸಳೆ ಇದ್ದದ್ದು ಪತ್ತೆಯಾಗಿದೆ. ಒಂದು ತಂಡ ಮೊಸಳೆಯನ್ನು ಅಟ್ಟಿಸಿಕೊಂಡು ಹೋಗಿದೆ. ಕೂಡಲೇ ಚರಂಡಿಗೆ ಇಳಿದ ಮೊಸಳೆ, ನೀರಲ್ಲಿ ಪರಾರಿಯಾಗಲು ಯತ್ನಿಸಿ, ಕೊನೆಗೆ ಬಲೆಯೊಳಗೆ ನುಸುಳಿದೆ. ಈ ವೇಳೆ ಅದನ್ನು ಹಿಂಬಾಲಿಸುತ್ತಿದ್ದ ಸಿಬ್ಬಂದಿ ಬಲೆಯನ್ನು ಮೊಸಳೆಗೆ ಸುತ್ತುವಲ್ಲಿ ಸಫಲರಾಗಿದ್ದಾರೆ. ಅದನ್ನು ಚರಂಡಿಯಿಂದ ಮೇಲೆತ್ತಿ ಪರಿಶೀಲಿಸಿ, ಕಣ್ಣಿಗೆ ಬಟ್ಟೆ, ಕಾಲಿಗೆ ಹಗ್ಗದಿಂದ ಬಿಗಿದು ಅರಣ್ಯ ಇಲಾಖೆಯ ವಾಹನದಲ್ಲಿ ಸಾಗಿಸಲಾಗಿದೆ. ಸೆರೆ ಸಿಕ್ಕ ಮೊಸಳೆ ಅಂದಾಜು 45 ವರ್ಷದ್ದಾಗಿರಬಹುದು ಎಂದು ಅಂದಾಜಿಸಲಾಗಿದೆ.

ಕಬಿನಿಗೆ ರವಾನೆ: ಹೀಗೆ ಸೆರೆ ಹಿಡಿದ ಈ ಮೊಸಳೆಯನ್ನು ಕಬಿನಿ ಹಿನ್ನೀರಿನ ಪ್ರದೇಶಕ್ಕೆ ಕೊಂಡೊಯ್ದು ಸುರಕ್ಷಿತವಾಗಿ ಬಿಡುಗಡೆ ಮಾಡಲಾಯಿತು. ಕಾರ್ಯಾಚರಣೆಯಲ್ಲಿ ಆರ್‌ಎಫ್‌ಒ ಕೆ.ಸುರೇಂದ್ರ, ಡಿಆರ್‌ಎಫ್‌ಒಗಳಾದ ವೆಂಕಟಾಚಲ ಮತ್ತು ಸಂಜೀವ್ ಪಾಟೀಲ್, ಪ್ರಾಣಿ ರಕ್ಷಕ ಪ್ರದೀಪ, ಸ್ನೇಕ್ ಶಿವು, ಅಭಯ ಸಿಬ್ಬಂದಿ ಪಾಲ್ಗೊಂಡಿದ್ದರು. ಸ್ಥಳೀಯ ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ಸ್ಥಳದಲ್ಲಿದ್ದರು.

ಮತದಾರರ ಡಾಟಾಗೆ ಕನ್ನ

ಮಾಜಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್, ಬೆಳ್ಳಂಬೆಳ್ಳಗ್ಗೆ ತುರ್ತು ಪತ್ರಿಕಾಗೋಷ್ಠಿ ಕರೆದು, "ಆಪರೇಷನ್ ಮತದಾರರ ಪಟ್ಟಿ ಪರಿಷ್ಕರಣೆ' ಹಗರಣದಲ್ಲಿ ಭಾಗಿಯಾಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಕ್ಷಣ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಮುಖ್ಯಮಂತ್ರಿಗಳು ಸೇರಿದಂತೆ ಭಾಗಿಯಾಗಿರುವ ಎಲ್ಲಾ ಅಧಿಕಾರಿಗಳನ್ನು ತಕ್ಷಣ ಬಂಧಿಸಬೇಕು ಎಂದು ಆಗ್ರಹ ಪಡಿಸಿದ್ದಾರೆ. ಆಪರೇಷನ್ ಕಮಲದ ಮುಂದುವರಿದ ಭಾಗವಾದ "ಆಪರೇಷನ್ ಮತದಾರರ ಪಟ್ಟಿ ಪರಿಷ್ಕರಣೆ" ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಗಂಭೀರ ಅಪರಾಧ ಪ್ರಕರಣ. ಈ ಬಗ್ಗೆ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ಉಸ್ತುವಾರಿಯಲ್ಲಿಯೇ ನ್ಯಾಯಾಂಗ ತನಿಖೆ ಮಾಡಬೇಕು.

ಈ ಪ್ರಕರಣವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ಮಾತ್ರವಲ್ಲ ಚುನಾವಣಾ ಆಯೋಗ ಕೂಡಾ ಈ ಹೀನ ಕೃತ್ಯದಲ್ಲಿ ಭಾಗಿಯಾಗಿರುವ ಗುಮಾನಿಗಳಿವೆ. ಕೇಂದ್ರ ಚುನಾವಣಾ ಆಯೋಗ ಕೂಡ ಇದನ್ನು ಗಂಭೀರವಾಗಿ ಪರಿಗಣಿಸಿ, ತನಿಖೆ ನಡೆಸಬೇಕು. ಮತದಾರರ ಪಟ್ಟಿಯ ಅಕ್ರಮ ಪರಿಷ್ಕರಣೆಯ ಹಗರಣ ನಡೆಸಿದ ಸಂಸ್ಥೆಯ ಹೆಸರು ರಾಜ್ಯದ ಸಚಿವರೊಬ್ಬರ ಒಡೆತನದ ಸಂಸ್ಥೆಯ ಹೆಸರಿನ ಜೊತೆ ತಾಳೆಯಾಗುವುದು ಕಾಕತಾಳೀಯವಾಗಿರಲಾರದು. ಅದೇ ರೀತಿ ಸಂಸ್ಥೆಯ ಕಚೇರಿ ಇರುವ ಸ್ಥಳದ ಸಮೀಪದಲ್ಲಿಯೇ ಈ ಸಂಶಯಿತ ಸಚಿವರ ಸಂಸ್ಥೆಗಳೂ ಇರುವುದು ಸಂಶಯವನ್ನು ಇನ್ನಷ್ಟು ಬಲಪಡಿಸುತ್ತದೆ.

ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗದೆ ಇಂತಹದ್ದೊಂದು ಹಗರಣ ನಡೆಸಲು ಸಾಧ್ಯವಿಲ್ಲ, ಅಧಿಕಾರಿಗಳು ಸ್ವಇಚ್ಛೆಯಿಂದ ಇಷ್ಟೊಂದು ಬೇಜವಾಬ್ದಾರಿಯಿಂದ ನಡೆದುಕೊಳ್ಳಲು ಸಾಧ್ಯವಿಲ್ಲ. ಮುಖ್ಯಮಂತ್ರಿಯವರಿಂದ ಹಿಡಿದು ಹಿರಿಯ ಸಚಿವರೆಲ್ಲರೂ ಭಾಗಿಯಾಗಿಯೇ ಈ ಕೆಲಸ ಮಾಡಿದ್ದಾರೆ. 'ಮೇಲಿನವರ' ರಕ್ಷಣೆ ಇಲ್ಲದೆ ಮಹಾನಗರ ಪಾಲಿಕೆ ಯಾವುದೇ ಪೂರ್ವಾಪರ ಪರಿಶೀಲನೆ ನಡೆಸದೆ "ಚಿಲುಮೆ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ಮತದಾರರ ಪಟ್ಟಿಯನ್ನು ಉಚಿತವಾಗಿ ಪರಿಷ್ಕರಣೆ ಮಾಡಲು ಅನುಮತಿ ನೀಡಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಮತದಾರರ ಪಟ್ಟಿ ಪರಿಷ್ಕರಣೆ ಮತ್ತು ಮತದಾರರ ಮಾಹಿತಿ ಸಂಗ್ರಹದ ಕೆಲಸವನ್ನು ಚುನಾವಣಾ ಆಯೋಗ ಮಾಡಬೇಕಾಗಿದ್ದು ಖಾಸಗಿ ಸಂಸ್ಥೆಗೆ ಇದನ್ನು ಒಪ್ಪಿಸುವುದೇ ಅಪರಾಧವಾಗಿದೆ. ಖಾಸಗಿ ಸಂಸ್ಥೆಯ ಸಿಬ್ಬಂದಿಯನ್ನು ಬಿಬಿಎಂಪಿಯ ಅಧಿಕಾರಿಗಳೇ ಎಂದು ತಪ್ಪಾಗಿ ತಿಳಿದು ಮತದಾರರು ವೈಯಕ್ತಿಕ ಮಾಹಿತಿಯನ್ನು ನೀಡಿದ್ದಾರೆ. ಇದು ವಿಶ್ವಾಸ ದ್ರೋಹವಾಗಿದೆ. ಚಿಲುಮೆ ಸಂಸ್ಥೆಯ ಮಾಲೀಕ ಕೃಷ್ಣಪ್ಪ ರವಿಕುಮಾರ ಎಂಬುವರು ಈ ಹಗರಣದ ರೂವಾರಿಯಾಗಿ ಮೇಲ್ನೋಟಕ್ಕೆ ಕಾಣಿಸಿದರೂ ಇದರ ಹಿಂದೆ ಸರ್ಕಾರದ ಉನ್ನತ ಸ್ಥಾನದಲ್ಲಿರುವವರ ಕೈವಾಡ ಖಂಡಿತ ಇದೆ. ಈ ಬಗ್ಗೆ ತನಿಖೆ ಮಾಡಿದರೆ ಮಾತ್ರ ಸತ್ಯ ಬಯಲಾಗಲು ಸಾಧ್ಯ. ಯಾವುದೋ ಒಂದು ಸಂಸ್ಥೆ ಅರ್ಜಿ ನೀಡಿ ತಾವು ಮತದಾರರನ್ನು ಜಾಗೃತಗೊಳಿಸುವ ಮತ್ತು ಮತದಾರರ ಪಟ್ಟಿಯನ್ನು ಪರಿಷ್ಕರಿಸುವ ಕಾರ್ಯವನ್ನು ಉಚಿತವಾಗಿ ಮಾಡುವುದಾಗಿ ತಿಳಿಸಿದಾಗಲೇ ಸಂಸ್ಥೆಯ ಉದ್ದೇಶದ ಬಗ್ಗೆ ಸಂಶಯ ಮೂಡಬೇಕಿತ್ತು. ಹೀಗಿದ್ದರೂ 20 ಆಗಸ್ಟ್ 2022ರಂದು ಬಿಬಿಎಂಪಿ ಆಯುಕ್ತರು ಅನುಮತಿ ನೀಡಿದ್ದಾರೆ. ಜಾಹಿರಾತು ನೀಡದೆ. ಟೆಂಡರ್ ಕರೆಯದೆ ಬಿಬಿಎಂಪಿ ಒಂದು ಖಾಸಗಿ ಕಂಪನಿಗೆ ಈ ಕೆಲಸವನ್ನು ನೀಡಲು ಹೇಗೆ ಸಾಧ್ಯ? ಅನುಮತಿ ನೀಡುವಾಗ ಸಂಸ್ಥೆಯ ಹಿನ್ನೆಲೆಯನ್ನು ಯಾಕೆ ಪರಿಶೀಲಿಸಿಲ್ಲ. ಉಚಿತ ಸೇವೆ ನೀಡುವ ಉದ್ದೇಶದ ಹಿನ್ನೆಲೆಯನ್ನು ಯಾಕೆ ತಿಳಿದುಕೊಂಡಿಲ್ಲ. ಚಿಲುಮೆ ಕಂಪನಿಯವರು ಬಿಬಿಎಂಪಿ ಮೂಲಕ ತಮ್ಮ ನೌಕರರಿಗೆ ಬೂತ್ ಮಟ್ಟದ ಅಧಿಕಾರಿ ಎಂಬ ಗುರುತಿನ ಚೀಟಿ ನೀಡಿದ್ದೇ ಅಕ್ರಮವಾಗಿದೆ. ಕಾನೂನಿನ ಪ್ರಕಾರ ಸರ್ಕಾರಿ, ಅರೆ ಸರ್ಕಾರಿ ಹಾಗೂ ನಿವೃತ್ತ ಸರ್ಕಾರಿ ನೌಕರರಲ್ಲದವರು ಬೂತ್ ಲೆವೆಲ್ ಆಫೀಸರ್ ಆಗಲು ಅವಕಾಶ ಇಲ್ಲ.

ಆಧಾರ ರಹಿತ ಆರೋಪ: ಸಿಎಂ ಬೊಮ್ಮಾಯಿ

ಅವರು ಸಮೀಕ್ಷಾ ಕೆಲಸವನ್ನು ಎನ್‌ಜಿಓಗಳಿಗೆ ನೀಡಿರುತ್ತಾರೆ. ಇದೇನು ಮೊದಲ ಬಾರಿ ನೀಡಿರುವುದಲ್ಲ. 2018ರಲ್ಲಿ ಇದ್ದ ಸರ್ಕಾರದ ಕಾಲದಲ್ಲಿಯೂ ನೀಡಿದ್ದಾರೆ. ಎನ್‌ಜಿಓ ಬಿ.ಎಲ್.ಡಿ. ದುರ್ಬಳಕೆ ಮಾಡಿದ್ದಾರೆ. ಆದ್ದರಿಂದ ಚುನಾವಣಾ ಆಯೋಗ ನೀಡಿರುವ ಆದೇಶದಿಂದ ಮೊದಲ್ಗೊಂಡು ಇಡೀ ಪ್ರಕರಣದ ಸಮಗ್ರ ತನಿಖೆಗೆ ಸೂಚನೆ ನೀಡುತ್ತೇನೆ. ನಿಜ ಹೊರಗೆ ಬರಲಿ ಎಂದರು. ಕಾಂಗ್ರೆಸ್ ರಾಜೀನಾಮೆಗೆ ಒತ್ತಾಯಿಸುವುದು ಹಾಸ್ಯಾಸ್ಪದ. ಸಂಬಂಧವಿಲ್ಲದ್ದನ್ನು ಕೇಳುತ್ತಿದ್ದಾರೆ. ಅದೇ ಮಾನದಂಡವಾದರೆ ಕಾಂಗ್ರೆಸ್ ಮುಖ್ಯಮಂತ್ರಿಗಳು ಈವರೆಗೆ ಮೂರು ಬಾರಿ ರಾಜೀನಾಮೆ ನೀಡಬೇಕಿತ್ತು. ಇದೊಂದು ಆಧಾರ ರಹಿತ ಆರೋಪ ಎಂದರು.

ಯಾರಿಗೂ ಅನುಮತಿ ನೀಡಿಲ್ಲ

ಮತದಾರರ ವೈಯಕ್ತಿಕ ವಿವರಗಳನ್ನು ಸಂಗ್ರಹಿಸಲಾಗಿದೆ ಎಂದು ವರದಿಯಾಗಿದೆ. ಸರ್ಕಾರೇತರ ಸಂಸ್ಥೆ ಚಿಲುಮೆಯವರಿಗೆ ಮತದಾರರ ಜಾಗೃತಿ ಅಭಿಯಾನದ ಬಗ್ಗೆ ಅರಿವು ಮೂಡಿಸಲು ನೀಡಿದ್ದ ಅನುಮತಿಯನ್ನು ದೂರು ಬಂದ ಕೂಡಲೇ ಜಿಲ್ಲಾ ಚುನಾವಣಾಧಿಕಾರಿ, ಬಿಬಿಎಂಪಿ ರದ್ದುಪಡಿಸಲಾಗಿದೆ. ಬೂತ್ ಮಟ್ಟದ ಅಧಿಕಾರಿ ಗುರುತಿನ ಚೀಟಿ ದುರುಪಯೋಗ ಸಂಬಂಧ ಮಹದೇವಪುರ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ಅವರು ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದು ತಿಳಿಸಿದ್ದಾರೆ. ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಚುನಾವಣಾ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ತನಿಖೆ ನಡೆಸಿ ಉಲ್ಲಂಘನೆ ಪ್ರಕರಣ ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ವಹಿಸಲಾಗುವುದು. ಈ ಬಗ್ಗೆ ಚುನಾವಣಾಧಿಕಾರಿ ಅವರಿಂದ ಬಿಬಿಎಂಪಿಗೆ ಸೂಚನೆ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಈಗ ಬಿಜೆಪಿ ಮಾಡುತ್ತಿದೆ: ಹೆಚ್‌ಡಿಕೆ

ಹೆಚ್.ಡಿ ಕುಮಾರಸ್ವಾಮಿ ಕಿಡಿಕಾರಿದ್ದಾರೆ. ಚನ್ನಪಟ್ಟಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬೇನಾಮಿ ಹೆಸರಿನಲ್ಲಿ ಮಲ್ಲೇಶ್ವರಂನಲ್ಲಿ ಇರುವ ಕಂಪನಿ ಅದು. ಹಿಂದೆ ಬಿಬಿಎಂಪಿಯಲ್ಲಿ ಅಕ್ರಮ ನಡೆದಿತ್ತು. ಅದಕ್ಕೆ ಸಂಬಂಧಿಸಿದ ಕಡತಗಳಿಗೆ ಇದೇ ಕಂಪನಿ ರಾತ್ರೋರಾತ್ರಿ ಬೆಂಕಿ ಇಟ್ಟಿತ್ತು. ಹಿಂದೆ ಕಾಂಗ್ರೆಸ್‌ನವರು ಇಂತಹ ಹಲವು ಚಟುವಟಿಕೆಗಳಲ್ಲಿ ಶಾಮೀಲಾಗಿದ್ದಾರೆ. ಈಗ ದೊಡ್ಡದಾಗಿ ಮಾತನಾಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು. ಮುಂದೆ ಕಾಂಗ್ರೆಸ್‌ನವರು ಅಧಿಕಾರಕ್ಕೆ ಬಂದರೂ ಇಂಥದ್ದೇ ಕೆಲಸಗಳನ್ನು ಮುಂದುವರಿಸುತ್ತಾರೆ. ಇವಿಎಂ ಇರುವವರೆಗೆ ಬಿಜೆಪಿಗೆ ಯಾವುದೇ ಸಮಸ್ಯೆ ಇಲ್ಲ. ಈ ಬಗ್ಗೆ ಸ್ವತಃ ತೆಲಂಗಾಣ ಸಿಎಂ ಮಾತನಾಡಿದ್ದಾರೆ. ಅಕ್ರಮದ ರೀತಿಯಲ್ಲೇ ಮತ್ತೆ ಅಧಿಕಾರಕ್ಕೆ ಬರಲು ಬಿಜೆಪಿ ಪ್ರಯತ್ನಿಸುತ್ತಿದೆ. ಇದರ ಬಗ್ಗೆ ನಾನು ಹೆಚ್ಚಾಗಿ ತಲೆ ಕೆಡಿಸಿಕೊಳ್ಳುವುದಿಲ್ಲ. ಎರಡೂ ರಾಷ್ಟ್ರೀಯ ಪಕ್ಷಗಳ ಬಗ್ಗೆ ಜನರು ಎಚ್ಚೆತ್ತುಕೊಳ್ಳಬೇಕು ಎಂದು ಹೇಳಿದ್ದಾರೆ. ಸಚಿವ ಅಶ್ವಥ್ ನಾರಾಯಣ ವಿರುದ್ಧ ನಾನು ಸಾಫ್ಟ್ ಆಗಿಲ್ಲ. ಬಿಜೆಪಿ ಎಷ್ಟೇ ಕುತಂತ್ರ ಮಾಡಿದರೂ ಅಧಿಕಾರಕ್ಕೆ ಬರಲು ಆಗುವುದಿಲ್ಲ. ಮುಂದೆ ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಲಿದೆ. ಆಗ ಅಕ್ರಮ ಎಸಗಿರುವವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಾತಿ ನಿಂದನೆ ಕೇಸ್ ದಾಖಲು

ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಮನುಷ್ಯನಿಗೆ ವಯಸ್ಸಾದಂತೆ ಪರಿಪಕ್ವವಾಗಬೇಕೇ ಹೊರತು ಬುದ್ಧಿ ಭ್ರಮಣೆಯಾದಂತೆ ವರ್ತಿಸಬಾರದು. ದೇಶಕ್ಕೆ ಬುದ್ಧಿವಾದ ಹೇಳುವವರು ತಮ್ಮ ಹೇಳಿಕೆಯನ್ನು ಸಮಾಜ ಹೇಗೆ ಸ್ವೀಕರಿಸುತ್ತದೆ ಎಂಬ ಪರಿಜ್ಞಾನ ಇರಬೇಕು. ಪೂರ್ವಾಗ್ರಹಪೀಡಿತರಾಗಿ ಬ್ರಾಹ್ಮಣ ಸಮುದಾಯವನ್ನು ಮನಸ್ಸೋ ಇಚ್ಛೆ ನಿಂದಿಸಿದರೆ ಒಟ್ಟಾಗಿ ಖಂಡಿಸಲೇಬೇಕಿದೆ. ಎಲ್ಲರಿಗೂ ಗೌರವ ನೀಡುವ ನಮ್ಮ ಸಮುದಾಯಕ್ಕೆ ಇಂತಹ ಹೇಳಿಕೆ ನೀಡುವವರಿಗೆ ಬುದ್ಧಿ ಕಲಿಸುವ ಶಕ್ತಿಯೂ ಇದೆ. ಎಲ್ಲಾ ಸಮುದಾಯದ ಬಡವರಿಗೆ ಮೀಸಲಾತಿ ಸಿಗಬೇಕು ಎನ್ನುವುದು ಸಾಮಾಜಿಕ ನ್ಯಾಯ. ಇದನ್ನೇ ವಿರೋಧಿಸಿದರೆ ಅವರು ಯಾವ ರೀತಿಯ ಸಮಾಜವಾದಿ. ಅವರೂ ವ್ಯಾಪಾರ, ಪೆಟ್ರೋಲ್ ಬಂಕ್‌ಗಳನ್ನು ನಡೆಸುತ್ತಾರೆ. ಬ್ರಾಹ್ಮಣ ಸಮುದಾಯದವರು ಅವರೊಂದಿಗೆ ವ್ಯವಹರಿಸಬೇಡಿ ಎಂದು ನಾವು ಕರೆ ನೀಡಬಹುದಲ್ಲವೇ?. ಈ ಸಂಬಂಧ ಎಫ್‌ಐಆರ್ ದಾಖಲಿಸಿ, ಆ ವ್ಯಕ್ತಿಯನ್ನು ಬಂಧಿಸಬೇಕು. ಆಡಿದ ನಂತರ ವಿಷಾದಿಸುವುದರಲ್ಲಿ ಅರ್ಥವಿಲ್ಲ. ವಿವೇಚನೆಯಿಂದ ಮಾತನಾಡಬೇಕಿತ್ತು. ನ.21ರಂದು ಬೃಹತ್ ಮೆರವಣಿಗೆ ಮೂಲಕ ಜಿಲ್ಲಾಡಳಿತ ಹಾಗೂ ಸರ್ಕಾರವನ್ನು ಒತ್ತಾಯಿಸುವುದರ ಜೊತೆಗೆ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ ಎಂದು ತಿಳಿಸಿದರು.

ಧಾರ್ಮಿಕ ಮುಖಂಡ ಡಾ.ಭಾನುಪ್ರಕಾಶ್ ಶರ್ಮ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಆದರ್ಶ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ್, ವಿಪ್ರ ಪ್ರೊಫೆಷನಲ್ ಫೋರಂ ಅಧ್ಯಕ್ಷ ಎಸ್.ಭಾಷ್ಯಂ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಸಂಘಟನಾ ಕಾರ್ಯದರ್ಶಿ ಮಿರ್ಲೆ ಪಣೀಶ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಮಿರ್ಲೆ ಪಣೀಶ್, ಸುಧೀಂದ್ರ, ಕೆ.ಆರ್.ಸತ್ಯನಾರಾಯಣ್, ರಾಕೇಶ್ ಭಟ್, ಎಚ್.ಜಿ.ಗಿರಿಧರ್ ಜಯಸಿಂಹ, ಶ್ರೀನಿವಾಸ್ ಪ್ರಸಾದ್, ಲತಾ ಮೋಹನ್, ವಿಜಯಕುಮಾರ್, ನಾಗೇಂದ್ರ ಬಾಬು, ಯೋಗ ನರಸಿಂಹ ಮುರಳಿ, ರಂಗನಾಥ್, ವಕೀಲ ಶೇಷಗಿರಿ, ವಿಪ್ರ ಮಹಿಳಾ ಸಂಘದ ಅಧ್ಯಕ್ಷೆ ಡಾ.ಲಕ್ಷ್ಮೀದೇವಿ, ನಗರಪಾಲಿಕೆ ಮಾಜಿ ಸದಸ್ಯೆ ಸೌಭಾಗ್ಯ ಮೂರ್ತಿ, ನಿಶಾಂತ್, ಕಡಕೋಳ ಜಗದೀಶ್, ವಿವೇಕಾನಂದ, ಜಯರಾಮ್, ಓಂ ಶ್ರೀನಿವಾಸ ಸೇರಿದಂತೆ 100ಕ್ಕೂ ಹೆಚ್ಚು ಜನ ಠಾಣೆಯೆದುರು ಜಮಾಯಿಸಿದ್ದರು.

ಮೈಸೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ

ವಿಜೇತರಿಗೆ ಸ್ಥಳದಲ್ಲೇ ಬಹುಮಾನ ವಿತರಣೆ





ಮೈಸೂರು, ನ.17(ಎಂಕೆ)- ನಗರದ ಪೊಲೀಸ್ ಕವಾಯತು ಮೈದಾನ(ನಗರ ಸಶಸ್ತ್ರ ಮೀಸಲು ಪಡೆ)ದಲ್ಲಿ ಆಯೋಜಿಸಿರುವ ಮೈಸೂರು ನಗರ ಪೊಲೀಸ್ ವಾರ್ಷಿಕ ಕ್ರೀಡಾಕೂಟ-2022ಕ್ಕೆ ಗುರುವಾರ ಚಾಲನೆ ನೀಡಲಾಯಿತು.

ಸಿಎಆರ್ ವಿಭಾಗ, ಎನ್.ಆರ್, ಕೆ.ಆರ್, ದೇವರಾಜ, ಸಂಚಾರ ವಿಭಾಗ, ವಿಶೇಷ ಪಡೆ, ಮಹಿಳಾ ಪಡೆ ಹಾಗೂ ಕೆಎಆರ್‌ಪಿ ಮೌಂಟೆಡ್ ಪಡೆಗಳ ಗೌರವ ವಂದನೆ ಸ್ವೀಕರಿಸಿದ ನಗರಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ ಹಾಗೂ ಸಿಎಆರ್ ಡಿಸಿಪಿ ಶಿವರಾಜು ಬಲೂನ್‌ಗಳನ್ನು ಹಾರಿಸುವ ಮೂಲಕ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.

ಬಳಿಕ ನಗರಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, ಪೊಲೀಸ್ ಇಲಾಖೆಯಲ್ಲಿ ಮಾತ್ರ ಪ್ರತಿವರ್ಷ ವಾರ್ಷಿಕ ಕ್ರೀಡಾಕೂಟ ಆಯೋಜಿಸಲಾಗುತ್ತದೆ. ಸದಾ ಕರ್ತವ್ಯದ ಒತ್ತಡದಲ್ಲಿರುವ ಪೊಲೀಸರಿಗೆ ಕ್ರೀಡಾಕೂಟ ಅನುಕೂಲವಾಗುವುದಲ್ಲದೆ ಫಿಟ್ ಆಗಿರಲು ಸಹಕಾರಿಯಾಗುತ್ತದೆ. ಮುಖ್ಯವಾಗಿ ಕ್ರೀಡೆ ನಮ್ಮ ಆರೋಗ್ಯಕರ ಜೀವನಕ್ಕೆ ಅತ್ಯಂತ ಅವಶ್ಯಕವಾಗಿದೆ ಎಂದರು.

ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ಇದರ ಪ್ರತಿಫಲವೆಂಬಂತೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಗೆಲ್ಲುವ ಪದಕಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಪೊಲೀಸ್ ವೃತ್ತಿಯಲ್ಲಿ ಇದ್ದುಕೊಂಡು ಹಲವರು ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ವಿಜಯ ಸಾಧಿಸುವ ಮೂಲಕ ಇಲಾಖೆಗೆ ಗೌರವ ತರುತ್ತಿದ್ದಾರೆ ಎಂದರಲ್ಲದೆ ಮೂರು ದಿನಗಳ ಈ ವಾರ್ಷಿಕ ಕ್ರೀಡಾಕೂಟ ನೋಡುಗರಿಗೆ ಸ್ಫೂರ್ತಿ ನೀಡಲಿ ಎಂದು ಹಾರೈಸಿದರು.

ಬಹುಮಾನ ವಿತರಣೆ: ಕ್ರೀಡಾಕೂಟದ ಮೊದಲ ದಿನವೇ ವಿವಿಧ ಸ್ಪರ್ಧೆಗಳಲ್ಲಿ ಜಯಗಳಿಸಿದ ಪೊಲೀಸರಿಗೆ ಬಹುಮಾನ ವಿತರಣೆ ಮಾಡಲಾಯಿತು. **ಪುರುಷರ ವಿಭಾಗದ 200 ಮೀಟರ್** ಓಟದ ಸ್ಪರ್ಧೆಯಲ್ಲಿ ಕೆ.ಆರ್.ವಿಭಾಗದ ಮೈಲಾರಿ (ಸಿಪಿಸಿ) ಪ್ರಥಮ, ಸಿಎಆರ್ ವಿಭಾಗದ ವಿಜಯ್‌ಶಂಕರ್(ಎಪಿಸಿ) ದ್ವಿತೀಯ ಹಾಗೂ ಮೋಹನ್ ನಾಯ್ಕ್(ಎಪಿಸಿ) ತೃತೀಯ ಬಹುಮಾನ ಗೆದ್ದರು. **ಉದ್ದ ಜಿಗಿತ** ಸ್ಪರ್ಧೆಯಲ್ಲಿ ಸಿಎಆರ್ ವಿಭಾಗದ ಎಂ.ವಿಜಯ್‌ಶಂಕರ್(ಎಪಿಸಿ) ಪ್ರಥಮ, ಕೆ.ಆರ್.ವಿಭಾಗದ ಮೈಲಾರಿ(ಸಿಪಿಸಿ) ದ್ವಿತೀಯ ಹಾಗೂ ಸಿಎಆರ್ ವಿಭಾಗದ ಮೋಹನ್ ನಾಯ್ಕ್ ತೃತೀಯ ಬಹುಮಾನ ಪಡೆದರು. **800 ಮೀಟರ್** ಓಟದ ಸ್ಪರ್ಧೆಯಲ್ಲಿ ಕೆ.ಆರ್.ವಿಭಾಗದ ರವೀಶ್ (ಸಿಪಿಸಿ) ಪ್ರಥಮ, ಸಿಎಆರ್‌ನ ಕರಿಯಪ್ಪ ಬಂಡಿ(ಸಿಪಿಸಿ) ದ್ವಿತೀಯ, ಎಂ.ಜಿ.ನಾಗರಾಜ್ ತೃತೀಯ ಸ್ಥಾನ ಪಡೆದರೆ, **4X100 ರಿಲೇ** ಓಟದಲ್ಲಿ ಸಿಎಆರ್ ವಿಭಾಗ ಪ್ರಥಮ, ಕೆ.ಆರ್.ವಿಭಾಗ ದ್ವಿತೀಯ ಪಡೆಯಿತು.

ಗುಂಡು ಎಸೆತ ಸ್ಪರ್ಧೆಯಲ್ಲಿ ಮೌಂಟೆಡ್ ವಿಭಾಗದ ಭರತ್ ಕುಮಾರ್(ಎಪಿಸಿ) ಪ್ರಥಮ, ಎನ್.ಆರ್.ವಿಭಾಗದ ಹರೀಶ್ (ಸಿಪಿಸಿ) ದ್ವಿತೀಯ ಹಾಗೂ ಸಂಪತ್ ಕುಮಾರ್ (ಸಿಪಿಸಿ) ತೃತೀಯ ಸ್ಥಾನ ಪಡೆದರೆ, **ಜಾವಲಿನ್ ಥ್ರೋನಲ್ಲಿ** ಕೆ.ಆರ್. ವಿಭಾಗದ ಯೂಸಫ್ ಅಲಿ(ಸಿಪಿಸಿ) ಪ್ರಥಮ, ಸಿಎಆರ್ ವಿಭಾಗದ ಆರ್.ಕೆ. ಹನುಮಂತ್ (ಎಪಿಸಿ) ದ್ವಿತೀಯ ಹಾಗೂ ಕೆಆರ್.ವಿಭಾಗದ ಮಧು(ಸಿಪಿಸಿ) ತೃತೀಯ ಸ್ಥಾನ ಪಡೆದರು.

45 ವರ್ಷ ಮೇಲಿನ ಎಎಸ್‌ಐ ಮೇಲ್ಪಟ್ಟ ಅಧಿಕಾರಿಗಳಿಗೆ ನಡೆದ **ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ** ಕಂಟ್ರೋಲ್ ರೂಂನ ನಂದಕುಮಾರ್(ಎಎಸ್‌ಐ) ಪ್ರಥಮ, ಎಫ್‌ಪಿಬಿ ವಿಭಾಗದ ರಾಜಶೇಖರ್ (ಎಸಿಪಿ) ದ್ವಿತೀಯ ಹಾಗೂ ಸಿಎಆರ್ ವಿಭಾಗದ ಹೆಚ್.ವಿ.ವೀರಣ್ಣ(ಎಸಿಪಿ) ತೃತೀಯ ಸ್ಥಾನ ಪಡೆದರು. ಹಾಗೆಯೇ **ಡಬಲ್ಸ್‌ನಲ್ಲಿ** ಎಫ್‌ಪಿಬಿ ವಿಭಾಗದ ರಾಜಶೇಖರ್ ಮತ್ತು ಸಿಎಆರ್‌ನ ಹೆಚ್.ವಿ. ವೀರಣ್ಣ ಜೋಡಿ ಪ್ರಥಮ ಸ್ಥಾನ ಜಯಿಸಿದರೆ, ಸಿಎಆರ್‌ನ ಶಿವರಾಜು (ಡಿಸಿಪಿ) ಮತ್ತು ಕಂಟ್ರೋಲ್ ರೂಂನ ನಂದಕುಮಾರ್ ದ್ವಿತೀಯ ಹಾಗೂ ಮೌಂಟೆಡ್ ವಿಭಾಗದ ಸುರೇಶ್(ಎಸಿಪಿ) ಮತ್ತು ಸಿಓಪಿ ವಿಭಾಗದ ಶ್ರೀಧರ್ (ಎಎಸ್‌ಐ) ತೃತೀಯ ಬಹುಮಾನ ಗಳಿಸಿದರು.

45 ವರ್ಷ ಒಳಗಿನ ಎಎಸ್‌ಐ ಮೇಲ್ಪಟ್ಟ ಅಧಿಕಾರಿಗಳಿಗೆ ನಡೆದ **ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ** ಸಿಎಆರ್ ವಿಭಾಗದ ಕೆ.ಎಂ. ಮೂರ್ತಿ(ಆರ್‌ಪಿಐ) ಪ್ರಥಮ, ಪರಶುರಾಮ್ (ಆರ್‌ಎಸ್‌ಐ) ದ್ವಿತೀಯ, ವಿಜಯನಗರ ಠಾಣೆ ಪಿಎಸ್‌ಐ ಕೆಕೆಮೋಹನ್ ತೃತೀಯ ಬಹುಮಾನ ಪಡೆದರು. **ಡಬಲ್ಸ್‌ನಲ್ಲಿ** ಸಿಎಆರ್‌ನ ಕೆ.ಎಂ.ಮೂರ್ತಿ (ಆರ್‌ಪಿಐ) ಮತ್ತು ಲಕ್ಷ್ಮೀಪುರಂ ಠಾಣೆಯ ಪಿಐ ಮೋಹಿತ್ ಸಹದೇವ ಜೋಡಿ ಪ್ರಥಮ, ವಿಜಯನಗರ ಠಾಣೆ ಪಿಎಸ್‌ಐಗಳಾದ ಕೆ.ಕೆ.ಮೋಹನ್ ಮತ್ತು ಪ್ರಭು ದ್ವಿತೀಯ ಹಾಗೂ ಸಿಎಆರ್‌ನ ಸೋಮಣ್ಣ (ಆರ್‌ಪಿಐ) ಮತ್ತು ಪರಶುರಾಮ್ ಜೋಡಿ ತೃತೀಯ ಬಹುಮಾನ ಪಡೆಯಿತು.

ಎಸಿಪಿಗಳಿಗೆ ನಡೆದ **ಪಿಸ್ತೂಲ್ ಶೂಟಿಂಗ್ ಸ್ಪರ್ಧೆಯಲ್ಲಿ** ಮೌಂಟೆಡ್‌ನ ಕೆ.ಎನ್. ಸುರೇಶ್ ಪ್ರಥಮ, ಕಂಟ್ರೋಲ್ ರೂಂನ ಎಸ್.ಸಿ.ಮೋಹನ್ ಮತ್ತು ಎಫ್‌ಪಿಬಿ ವಿಭಾಗದ ರಾಜಶೇಖರ್ ದ್ವಿತೀಯ ಹಾಗೂ ಸಿಎಆರ್‌ನ ಎನ್.ಸುದರ್ಶನ್ ಮತ್ತು ಸಿಸಿಬಿಯ ಅಶ್ವಥ್ ನಾರಾಯಣ್ ತೃತೀಯ ಸ್ಥಾನ ಪಡೆದುಕೊಂಡರು. **ಪಿಐ ಗಳಿಗೆ** ನಡೆದ ಪಿಸ್ತೂಲ್ ಶೂಟಿಂಗ್‌ನಲ್ಲಿ ಸಿದ್ದಾರ್ಥ ಸಂಚಾರ ಪೊಲೀಸ್ ಠಾಣೆಯ ಎಂ.ಆರ್. ನಟರಾಜ ಪ್ರಥಮ, ಸಿಎಆರ್‌ನ ಕೆ.ಎಂ. ಮೂರ್ತಿ ದ್ವಿತೀಯ ಹಾಗೂ ಕಂಟ್ರೋಲ್ ರೂಂನ ಎ.ಮಂಜುನಾಥ ತೃತೀಯ ಸ್ಥಾನ ಪಡೆದರು. **ಎಎಸ್‌ಐ ಮತ್ತು ಪಿಎಸ್‌ಐ** ದರ್ಜೆಯ ಅಧಿಕಾರಿಗಳಿಗೆ ನಡೆದ ಪಿಸ್ತೂಲ್ ಶೂಟಿಂಗ್‌ನಲ್ಲಿ ಸಿಎಆರ್‌ನ ಪರಶುರಾಮ್ ಪ್ರಥಮ, ವಿಜಯನಗರ ಠಾಣೆಯ ಮಾರುತಿ ಅಂಕರಕ್ಟ್ಟಿ ದ್ವಿತೀಯ ಹಾಗೂ ಮಂಡಿ ಠಾಣೆಯ ವಿಶ್ವನಾಥ ಮತ್ತು ಮೇಟಗಳ್ಳಿ ಠಾಣೆಯ ರೇವಣ್ಣ ಸಿದ್ದಪ್ಪ ತೃತೀಯ ಬಹುಮಾನ ಗೆದ್ದರು. ಹಾಗೆಯೇ **ಪಿಸಿ ಮತ್ತು ಹೆಚ್‌ಸಿ** ದರ್ಜೆಯ ಸಿಬ್ಬಂದಿಗೆ ನಡೆದ **ರೈಫಲ್ ಶೂಟಿಂಗ್‌ನಲ್ಲಿ** ಸಿಎಆರ್‌ನ ದಾದಾಫೀರ್ ಪ್ರಥಮ, ಸಂಚಾರ ವಿಭಾಗದ ದೇವರಾಜು ದ್ವಿತೀಯ ಹಾಗೂ ಎನ್.ಆರ್.ವಿಭಾಗದ ಎಸ್.ಮಹದೇವ ತೃತೀಯ ಸ್ಥಾನಕ್ಕೆ ಭಾಜನರಾದರು.

ಮಹಿಳಾ ವಿಭಾಗ: 200 ಮೀಟರ್ ಓಟದಲ್ಲಿ ಎನ್.ಆರ್.ವಿಭಾಗದ ಕೌಶಲ್ಯ (ಮಪಿಸಿ) ಪ್ರಥಮ, ಕೆಆರ್.ವಿಭಾಗದ ಅಶ್ವಿನಿ ದ್ವಿತೀಯ, ದೇವರಾಜ ವಿಭಾಗದ ರತ್ನ ತೃತೀಯ ಬಹುಮಾನ ಗೆದ್ದರೆ, 100 ಮೀ ಓಟದಲ್ಲಿ ಕೆ.ಆರ್.ವಿಭಾಗದ ಅಶ್ವಿನಿ ಪ್ರಥಮ, ಎನ್.ಆರ್.ವಿಭಾಗದ ಬಿಂದು ದ್ವಿತೀಯ, ಕೆ.ಆರ್.ವಿಭಾಗದ ಸವಿತ ತೃತೀಯ ಸ್ಥಾನ ಪಡೆದರು. **ಉದ್ದ ಜಿಗಿತದಲ್ಲಿ** ಕೆಆರ್.ವಿಭಾಗದ ಕೆ.ಅಶ್ವಿನಿ ಪ್ರಥಮ, ದೇವರಾಜ ವಿಭಾಗದ ಜಿ.ಎಂ.ರತ್ನ ದ್ವಿತೀಯ, ಎನ್.ಆರ್. ವಿಭಾಗದ ಕೆ.ಪಿ.ಉಷಾ ತೃತೀಯ ಬಹುಮಾನ ಗೆದ್ದರೆ, ಗುಂಡು ಎಸೆತ ಸ್ಪರ್ಧೆಯಲ್ಲಿ ಎನ್.ಆರ್. ವಿಭಾಗದ ಕೆ.ಪಿ.ಉಷಾ ಪ್ರಥಮ, ಕೆ.ಆರ್. ವಿಭಾಗದ ಆರ್. ಸವಿತ ದ್ವಿತೀಯ, ದೇವರಾಜ ವಿಭಾಗದ ರತ್ನ ತೃತೀಯ ಸ್ಥಾನ ಪಡೆದರು. ಹಾಗೆಯೇ **ಜಾವಲಿನ್ ಥ್ರೋನಲ್ಲಿ** ಕೆ.ಆರ್. ವಿಭಾಗದ ಆರ್.ಸವಿತ ಪ್ರಥಮ, ಎನ್.ಆರ್. ವಿಭಾಗದ ಉಷಾ ದ್ವಿತೀಯ, ದೇವರಾಜ ವಿಭಾಗದ ಎನ್.ಜಯಲಕ್ಷ್ಮಿ ತೃತೀಯ ಬಹುಮಾನ ಗೆದ್ದುಕೊಂಡರು.

ಮಹಿಳಾ ಪಿಎಸ್‌ಐ ಅಧಿಕಾರಿಗಳಿಗೆ ನಡೆದ **ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ** ವಿವಿ ಪುರಂ ಠಾಣೆಯ ಸಿ.ಕೀರ್ತಿ ಪ್ರಥಮ, ಜೆ.ಎಲ್.ಪುರಂ ಠಾಣೆಯ ಭಾನುಕುಮಾರಿ ದ್ವಿತೀಯ, ಎನ್.ಆರ್.ಠಾಣೆಯ ಪಿಎಸ್‌ಐ ಎಸ್.ಎಸ್.ಲತಾ ತೃತೀಯ ಸ್ಥಾನ ಪಡೆದರು. **ಡಬಲ್ಸ್‌ನಲ್ಲಿ** ವಿವಿ ಪುರಂ ಠಾಣೆ ಸಿ.ಕೀರ್ತಿ ಮತ್ತು ಎನ್.ಆರ್.ಠಾಣೆ ಎಸ್.ಎಸ್.ಲತಾ ಜೋಡಿ ಪ್ರಥಮ, ಜೆಎಲ್. ಪುರಂ ಠಾಣೆ ಭಾನುಕುಮಾರಿ ಮತ್ತು ವಿದ್ಯಾರಣ್ಯಪುರಂ ಸಿದ್ದಾಬಾಯಿ ಜೋಡಿ ದ್ವಿತೀಯ ಹಾಗೂ ವಿವಿ ಪುರಂ ಠಾಣೆ ಸುಪ್ರಿಯ ಮತ್ತು ಅಶೋಕಪುರಂ ಠಾಣೆ ಸ್ಮಿತಾ ಜೋಡಿ ತೃತೀಯ ಬಹುಮಾನ ಗೆದ್ದುಕೊಂಡಿತು. ಕಡೆಯಲ್ಲಿ ಪಿಟಿಎಸ್ ಪ್ರಶಿಕ್ಷಣಾರ್ಥಿಗಳಿಗೆ ನಡೆದ 100 ಮೀಟರ್ ಓಟದಲ್ಲಿ ಕೆ.ರಾಧ ಪ್ರಥಮ, ಜಿ.ಆರ್.ರೂಪ ದ್ವಿತೀಯ ಹಾಗೂ ಎನ್.ಆರ್. ಸುಗುಣ ತೃತೀಯ ಬಹುಮಾನ ಗಳಿಸಿದರು.

ಗುಂಡಿಗಳ ಮುಚ್ಚುವ ಮೂಲಕ ವಿನೂತನ ಪ್ರತಿಭಟನೆ



ಮೈಸೂರು,ನ.17(ಎಂಟಿವೈ)- ಕೆ.ಆರ್. ವಿಧಾನಸಭಾ ಕ್ಷೇತ್ರದ ಗುಂಡಿ ಬಿದ್ದಿರುವ ರಸ್ತೆಗಳ ದುರಸ್ತಿಗೆ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ನೇತೃತ್ವದಲ್ಲಿ ಗುಂಡಿಗಳಿಗೆ ಮಣ್ಣು ತುಂಬುವ ಮೂಲಕ ವಿನೂತನ ರೀತಿ ಪ್ರತಿಭಟಿಸಿದರು.

ಮೈಸೂರಿನ ಜೆಎಸ್‌ಬಿ ರಸ್ತೆಯಲ್ಲಿರುವ ತುಳಸಿದಾಸ್ ಮೋಹನ್ ದಾಸ್ ತಾಯಿ ಮಗುವಿನ(ಎಸ್‌ಎಂಟಿ) ಆಸ್ಪತ್ರೆ ಮುಂಭಾಗದಲ್ಲಿ ಬಿದ್ದಿರುವ ಗುಂಡಿಗಳಿಗೆ ಜೆಲ್ಲಿ, ಮಣ್ಣು ಸುರಿಯುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ಕಾರ್ಯಕರ್ತರು, ಗುಂಡಿಗಳಿಂದ ಹಲವು ಮಂದಿ ವಯೋವೃದ್ಧರು, ಮಹಿಳೆಯರು, ವಿದ್ಯಾರ್ಥಿಗಳು ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ. ಈಗಾಗಲೇ ಹಲವು ಬಾರಿ ರಸ್ತೆ ತಡೆದು ಪ್ರತಿಭಟಿಸಿ ಪಾಲಿಕೆಯ ಗಮನ ಸೆಳೆದರೂ ಪ್ರಯೋಜನವಾಗಿಲ್ಲ. ದಸರಾ ವಿಶೇಷ ಅನುದಾನದಲ್ಲೂ ರಸ್ತೆಗಳ ದುರಸ್ತಿ ಮಾಡಿಲ್ಲ ಎಂದು ದೂರಿದರು.

ಈ ವೇಳೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನೀಡಿದ ಕೊಡುಗೆಗಳನ್ನು ಜನರು ಇಂದಿಗೂ ನೆನೆಯುತ್ತಿದ್ದಾರೆ. ಆದರೆ, ಇಂದಿನ ಬಿಜೆಪಿ ಸರ್ಕಾರ ಅಭಿವೃದ್ಧಿಯನ್ನು ಬಿಟ್ಟು ಬೇರೆ ಕೆಲಸಕ್ಕೆ ಬಾರದ ವಿಚಾರಗಳಿಗೆ ನಾಗರಿಕರ ಪೀಡಿಸುತ್ತಿರುವುದು ದುರದೃಷ್ಟ. ಚುನಾವಣೆಯ ಸಂದರ್ಭದಲ್ಲಿ ಮತ ಬ್ಯಾಂಕ್‌ಗಾಗಿ ಕೋಮು ದ್ವೇಷ, ಧರ್ಮದ ರಾಜಕಾರಣ ಮಾಡಿಕೊಂಡು ದೇಶ, ರಾಜ್ಯವನ್ನು ಅಭಿವೃದ್ಧಿಯಿಂದ ವಂಚಿಸಲಾಗುತ್ತಿದೆ. ರಾಜ್ಯದಲ್ಲಿರುವುದು ಶೇ.40 ಕಮಿಷನ್ ಸರ್ಕಾರ ಎಂಬುದು ಸ್ಪಷ್ಟವಾಗಿದೆ. ಗುಂಡಿಬಿದ್ದ ರಸ್ತೆಗಳಿಂದಾಗಿ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಆಡಳಿತ ಎಷ್ಟರ ಮಟ್ಟಿಗೆ ಇದೆ ಎಂಬುದು ಇದರಿಂದ ಅರ್ಥವಾಗುತ್ತದೆ. 224 ಕ್ಷೇತ್ರದಲ್ಲಿಯೇ ಕೆ.ಆರ್.ಕ್ಷೇತ್ರ ಮಾದರಿ ಎಂಬ ಹೇಳಿಕೆ ಕೇವಲ ಪ್ರಚಾರಕ್ಕೆ ಮಾತ್ರ ಸೀಮಿತವಾಗಿದೆ ಎಂದು ವ್ಯಂಗ್ಯವಾಡಿದರು.

ಕೆ.ಆರ್. ಕ್ಷೇತ್ರ ವ್ಯಾಪ್ತಿಯ ರಸ್ತೆಗಳು ಬರೀ ಗುಂಡಿಗಳಿಂದ ಕೂಡಿವೆ. ಎಲ್ಲಾ ಬಡಾವಣೆಗಳಲ್ಲೂ ರಸ್ತೆಗಳು ಹಾಳಾಗಿವೆ. ಪ್ರತಿಭಟನೆ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಬಿಜೆಪಿ ಸರ್ಕಾರಕ್ಕೆ ಕಿವಿ ಇಲ್ಲದಂತಾಗಿದೆ. ಬೆಂಗಳೂರಿನಲ್ಲಿ 21 ಜನ, ಮಂಡ್ಯದಲ್ಲಿ ಯೋಧರೊಬ್ಬರು ಗುಂಡಿಬಿದ್ದ ರಸ್ತೆಗೆ ಬಲಿಯಾಗಿದ್ದಾರೆ. ಮೈಸೂರಿನಲ್ಲಿ ಹಲವು ನಾಗರಿಕರು ಬಿದ್ದು ಆಸ್ಪತ್ರೆ ಸೇರಿದ್ದಾರೆ. ಹೀಗಾಗಿ, ಶೀಘ್ರ ರಸ್ತೆಗಳಲ್ಲಿ ಬಿದ್ದಿರುವ ಗುಂಡಿ ಮುಚ್ಚಿ. ಇಲ್ಲವಾದಲ್ಲಿ ಗುಂಡಿಗೆ ಬಿದ್ದು ಅನಾಹುತವಾದರೆ ಸರ್ಕಾರವೇ ನೇರ ಹೊಣೆ ಹೊರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ. ಸೋಮಶೇಖರ್, ಕೆಆರ್. ಬ್ಯಾಂಕ್ ನಿರ್ದೇಶಕ ಪ್ರತಿಧ್ವನಿ ಪ್ರಸಾದ್, ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷ ಮನೋಜ್, ಉಪಾಧ್ಯಕ್ಷ ರಜತ್, ಮುಖಂಡರಾದ ಶ್ರೀಧರ್, ಭವ್ಯ, ಗುಣಶೇಖರ್, ಪುಟ್ಟಸ್ವಾಮಿ, ಬ್ರಾಡ್‌ವೇ ಕಿರಣ್, ವಿಶ್ವನಾಥ್, ಫಾರುಖ್, ನಾಗೇಂದ್ರ ಶಂಕರ್, ಸಂತೋಷ್, ರಾಘವೇಂದ್ರ ಮನು, ನಾಗಮಹದೇವ, ನಟರಾಜು ಇನ್ನಿತರರು ಪಾಲ್ಗೊಂಡಿದ್ದರು.

ನ.20ರಂದು 'ಮೇರಾ ಭಾರತ್ ನೃತ್ಯೋತ್ಸವ'

30ಕ್ಕೂ ಹೆಚ್ಚು ವಿಧದ ಬೃಹತ್ ನೃತ್ಯ ಪ್ರದರ್ಶನ



ಮೈಸೂರು,ನ.17(ಪಿಎಂ)- ಶ್ರೀ ನಿಮಿಷಾಂಬಾ ಡಾನ್ಸ್ ಪ್ರಮೋಟರ್ಸ್ ನೃತ್ಯ ಶಾಲೆಯ ಬೆಳ್ಳಿಹಬ್ಬದ ಪ್ರಯುಕ್ತ ನೃತ್ಯ ಶಾಲೆ ವತಿಯಿಂದ ನ.20ರಂದು 'ಮೇರಾ ಭಾರತ್ ನೃತ್ಯೋತ್ಸವ' ಶೀರ್ಷಿಕೆಯಡಿ ಬೃಹತ್ ನೃತ್ಯ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ನೃತ್ಯ ಶಾಲೆಯ ಸಂಸ್ಥಾಪಕ ವಿದ್ವಾನ್ ಶ್ರೀಧರ್ ಜೈನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5ಕ್ಕೆ ಮಾನಸ ಗಂಗೋತ್ರಿಯ ಬಯಲು ರಂಗ ಮಂದಿರದಲ್ಲಿ ಈ ಬೃಹತ್ ನೃತ್ಯ ಪ್ರದರ್ಶನ ನಡೆಯಲಿದೆ. ನಿರೂಪಣೆ ರಹಿತ ನಿರಂತರ ನೃತ್ಯ ಪ್ರದರ್ಶನ ಇದಾಗಿದ್ದು, ಸುಮಾರು 500 ಕಲಾವಿದರು ಭಾರತದ ವಿವಿಧ ರಾಜ್ಯಗಳ 30ಕ್ಕೂ ಹೆಚ್ಚು ವಿಧಗಳ ಆಕರ್ಷಕ ನೃತ್ಯ ಪ್ರದರ್ಶನ ನೀಡಲಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಕನ್ನಡ ಖಾಸಗಿ ವಾಹಿನಿಯ ರಾಘವೇಂದ್ರ ಹುಣಸೂರು ಮತ್ತು ಸಿನಿಮಾ ನಟಿ ಪ್ರಿಯಾಂಕ ಉಪೇಂದ್ರ ಅವರಿಗೆ 'ಕನ್ನಡ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಹೆಚ್‌ಸಿಜಿ ಗ್ರೂಪ್ ಆಫ್ ಹಾಸ್ಪಿಟಲ್ಸ್‌ನ ಅಧ್ಯಕ್ಷ ಡಾ.ಬಿ.ಎಸ್.ಅಜಯ್‌ಕುಮಾರ್, ಐಜಿಪಿ ಡಾ.ವಿಪುಲ್‌ಕುಮಾರ್, ಮಾಜಿ ಶಾಸಕ ವಾಸು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸಿನಿಮಾ ನಿರ್ದೇಶಕ ಸುಧಾಕರ್ ಸಾಜಾ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಅಲ್ಲದೆ, ಸಮಾಜ ಸೇವಕ ಪ್ರವೀಣ್ ಜೈನ್, ವೀಣಾ ವಾದಕಿ ರೇವತಿ ಕಾಮತ್, ನೃತ್ಯ ಕಲಾವಿದ ಅನಿಲ್ ಆರ್.ಜೈನ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಸೌಂಡ್ ಅಂಡ್ ಲೈಟ್ ಇಂಜಿನಿಯರ್ ಎ.ಪಿ.ಶ್ರೀನಿವಾಸ್ ಅವರಿಗೆ ಹೆಜ್ಜೆ-ಗೆಜ್ಜೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಜೊತೆಗೆ ದೀಪಕ್ ಗುಪ್ತಾ, ಏಕನಾಥ ರೈ, ಕಿಶೋರ್ ಬಿದ್ದಪ್ಪ, ದಿನೇಶ್ ಜೈನ್ ಮತ್ತು ಶ್ರೀನಾಥ್ ರಂಗಸ್ವಾಮಿ ಅವರನ್ನು ಸನ್ಮಾನಿಸಲಾಗುವುದು ಎಂದರು. ಕಲಾವಿದರಾದ ವಿದುಷಿ ಸೌಮ್ಯ ಶ್ರೀಧರ್ ಜೈನ್, ರೇಖಾ ಮಂಜುನಾಥ್, ಅರ್ಜುನ್ ಶ್ರೀವತ್ಸ, ವರ್ಷ ಸತೀಶ್ ಗೋಷ್ಠಿಯಲ್ಲಿದ್ದರು.

ಶಾಸಕರು, ಸಂಸದರಿಗೆ ಕನಿಷ್ಟ ವಿದ್ಯಾರ್ಹತೆ ನಿಗದಿಯಾದರೆ ಮಾತ್ರ ಜನಪರ ಕಾಯ್ದೆ, ಆಡಳಿತ ಜಾರಿ ಸಾಧ್ಯ

● ಹಿರಿಯ ನಾಗರಿಕರ 20ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಮತ ● ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಭ್ರಷ್ಟಾಚಾರ ಮಾತ್ರ ಕಡಿಮೆ ಆಗದು: ಕಮಿಷನ್‌ನಲ್ಲಿ ಶೇಖಡಾವಾರು ಏರಿಳಿತವಾಗಬಹುದಷ್ಟೇ



ಮೈಸೂರು, ನ.17(ಆರ್‌ಕೆಬಿ)- ಕಾಯ್ದೆ, ಕಾನೂನು, ನೀತಿ, ನಿರ್ಧಾರಗಳನ್ನು ತೆಗೆದುಕೊಳ್ಳುವ ಶಾಸಕರು, ಸಂಸದರಿಗೆ ಕನಿಷ್ಠ ವಿದ್ಯಾರ್ಹತೆ ಇರಬೇಕು. ಹಾಗಾದರೆ ಮಾತ್ರ ಜನಪರ ಕಾಯ್ದೆ, ಆಡಳಿತ ಜಾರಿಯಾಗಲು ಸಾಧ್ಯ ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ಅಖಿಲ ಭಾರತ ಹಿರಿಯ ನಾಗರಿಕರ ಒಕ್ಕೂಟ ಆಯೋಜಿಸಿದ್ದ 20ನೇ ರಾಷ್ಟ್ರೀಯ ಹಿರಿಯ ನಾಗರಿಕರ ಸಮ್ಮೇಳನದ 2ನೇ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ಪ್ರತಿಯೊಂದು ಹುದ್ದೆಗಳಿಗೂ ವಿದ್ಯಾರ್ಹತೆ ನಿಗದಿಪಡಿಸಲಾಗಿದೆ. ಆದರೆ, ಕಾಯ್ದೆ-ಕಾನೂನು, ನೀತಿ-ನಿರ್ಧಾರವನ್ನು ತೆಗೆದುಕೊಳ್ಳುವ ಸಂಸದರು, ಶಾಸಕರು ಸೇರಿದಂತೆ ಯಾವುದೇ ಜನಪ್ರತಿನಿಧಿಗಳಿಗೆ ವಿದ್ಯಾರ್ಹತೆಯೇ ಇಲ್ಲವಾಗಿದೆ. ಇಡೀ ಜನತಂತ್ರ ವ್ಯವಸ್ಥೆ ಹಾಳಾಗಲು ಇದೇ ಕಾರಣವಾಗಿದೆ. ಹಾಗಾಗಿ ಶಾಸಕ, ಸಂಸದರಿಗೆ ಕನಿಷ್ಠ ವಿದ್ಯಾರ್ಹತೆ ಇದ್ದರೆ ಮಾತ್ರ ಜನಪರ ಕಾಯ್ದೆ, ಆಡಳಿತ ನೀಡಲು ಸಾಧ್ಯ ಎಂದು ಹೇಳಿದರು.

ಇಂದು ರಾಜಕೀಯ ವ್ಯವಸ್ಥೆ ಬಹಳಷ್ಟು ತಳಮಟ್ಟಕ್ಕೆ ಕುಸಿದಿದ್ದು, ಭ್ರಷ್ಟಾಚಾರ ತಾಂಡವವಾಡುತ್ತಿದೆ. ರಾಜಕೀಯ ವ್ಯವಸ್ಥೆಯೇ ಭ್ರಷ್ಟಾಚಾರಕ್ಕೆ ಮೂಲ. ಯಾವ ಕ್ಷೇತ್ರವನ್ನೂ ಬಿಡದ ಭ್ರಷ್ಟಾಚಾರದಿಂದಾಗಿ ಹಣದ ಮುಂದೆ ಮಾನವೀಯತೆ, ಸಾಮಾಜಿಕ ಮೌಲ್ಯ ನಗಣ್ಯವಾಗಿದೆ ಎಂದರು.

ವಿಧಾನಸಭೆ, ವಿಧಾನ ಪರಿಷತ್, ಲೋಕಸಭೆ, ರಾಜ್ಯಸಭೆ ಪರಿಣಾಮಕಾರಿಯಾಗಿ ನಡೆಯುತ್ತಿಲ್ಲ. ಇಡೀ ಸದನ ಕಳೆದುಹೋಗುತ್ತಿದೆ. ಈ ನಡುವೆಯೇ ಯಾವುದೇ ಚರ್ಚೆ ಇಲ್ಲದೆ ಮಸೂದೆಗಳು ಅಂಗೀಕಾರವಾಗಿ ಕಾನೂನುಗಳಾಗಿ ಜನ್ಮ ತಾಳುತ್ತಿವೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮತ್ತು ಜನರಿಗೆ ಮಾರಕವಾಗುತ್ತಿದೆ. ಅಷ್ಟರ ಮಟ್ಟಿಗೆ ರಾಜಕೀಯ ವ್ಯವಸ್ಥೆ ಬಹಳಷ್ಟು ತಳಮಟ್ಟಕ್ಕೆ ಕುಸಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾಜಕ್ಕೆ ಅಂಟಿಕೊಂಡಿರುವ ಭ್ರಷ್ಟಾಚಾರ ಅಷ್ಟು ಸುಲಭವಾಗಿ ಹೋಗುವುದಿಲ್ಲ. ಈಗ ಭ್ರಷ್ಟಾಚಾರ ಎಲ್ಲಾ ಕ್ಷೇತ್ರಕ್ಕೂ ವ್ಯಾಪಿಸಿಕೊಂಡಿದೆ. ರಾಜಕಾರಣಿಗಳಷ್ಟೇ ಅಲ್ಲ, ವೈದ್ಯರು, ವಕೀಲರು, ಪತ್ರಕರ್ತರು ಸೇರಿದಂತೆ ಎಲ್ಲೆಡೆ ಭ್ರಷ್ಟಾಚಾರಿಗಳಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ರಾಜಕೀಯ ವ್ಯವಸ್ಥೆಯೇ ಭ್ರಷ್ಟಾಚಾರದ ಮೂಲ. ಇದು ಸಡಿಲಗೊಂಡರೆ ಉಳಿದ ಕಡೆಗೂ ಲಂಚಾವತಾರ ವಿಸ್ತರಣೆ ಆಗುತ್ತದೆ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಭ್ರಷ್ಟಾಚಾರ ಕಡಿಮೆಯಾಗಲ್ಲ. ಅದು ಶೇ.10, ಶೇ.30 ಶೇ.40 ಅಥವಾ ಶೇ.60ರಷ್ಟು ಕಮಿಷನ್ ವ್ಯವಹಾರದಲ್ಲಿ ಏರಿಳಿತವಾಗಬಹುದಷ್ಟೇ ಎಂದು ಹೇಳಿದರು.

ರಾಜ್ಯದಲ್ಲಿ ಉದ್ಯೋಗವನ್ನೂ ದುಡ್ಡು ಕೊಟ್ಟು ಖರೀದಿ ಮಾಡಲಾಗುತ್ತಿದೆ. ಕರ್ನಾಟಕ ಲೋಕಸೇವಾ ಆಯೋಗದಿಂದ ನಡೆಯುವ ವಿವಿಧ ನೇಮಕಾತಿಯಲ್ಲಿ ವ್ಯಾಪಕ ಭ್ರಷ್ಟಾಚಾರ, ಅವ್ಯವಹಾರ ನಡೆಯುತ್ತಿದೆ. ಸಬ್ ಇನ್ಸ್‌ಪೆಕ್ಟರ್ ಹುದ್ದೆಯೊಂದು 50 ಲಕ್ಷ ರೂ.ಗೆ ಬಿಕರಿಯಾಗಿದೆ. ಈ ಸಂಬಂಧ ಅಧಿಕಾರಿಗಳನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ಹೀಗಾದರೆ ಅರ್ಹರಿಗೆ ಸರ್ಕಾರಿ ಹುದ್ದೆಗಳು ದೊರೆಯುವುದು ಸಾಧ್ಯವೇ? ಭ್ರಷ್ಟಾಚಾರ ಮಾಡಿ ನೌಕರಿ ಪಡೆದವರಿಂದ ಪ್ರಾಮಾಣಿಕತೆಯನ್ನು ನಿರೀಕ್ಷಿಸಲು ಸಾಧ್ಯವೇ? ಎಂದು ಪ್ರಶ್ನಿಸಿದರು.

ಭ್ರಷ್ಟಾಚಾರ ಮುಕ್ತ ಪರ್ಯಾಯ ವ್ಯವಸ್ಥೆ ರೂಪಿಸಬೇಕಾಗಿದೆ. ಅದು ಬಹಳ ಸುದೀರ್ಘ ಅವಧಿಯ ಪಯಣ. ಅದಕ್ಕಾಗಿ ಕಾಯಬೇಕು. ಆ ನಿಟ್ಟಿನಲ್ಲಿ ಪ್ರಯತ್ನಿಸಬೇಕಾಗಿದೆ. ಅದನ್ನು ಹೊರತು ಬೇರೆ ದಾರಿಗಳು ಸದ್ಯಕ್ಕೆ ಗೋಚರವಾಗುತ್ತಿಲ್ಲ ಎಂದರು.

ಸಮಾಜ, ದೇಶ, ರಾಜಕೀಯ ವ್ಯವಸ್ಥೆ ಬದಲಾಗುವುದನ್ನು ಕಾಯುವ ಬದಲು, ಮತ ಹಾಕುವ ಪ್ರತಿಯೊಬ್ಬ ಪ್ರಜೆಯೂ ಸ್ವಯಂ ಬದಲಾಗಬೇಕು. ಭ್ರಷ್ಟಾಚಾರಿಗಳನ್ನು ತಿರಸ್ಕರಿಸಬೇಕು. ಅವರಿಗೆ ಗೌರವ ಕೊಡಬಾರದು. ಆಗ ಎಲ್ಲವೂ ತನ್ನಷ್ಟಕ್ಕೆ ತಾನೇ ಪರಿವರ್ತನೆಯತ್ತ ಮುಖ ಮಾಡುತ್ತದೆ ಎಂದು ಹೇಳಿದರು.

ಅಖಿಲ ಭಾರತ ಹಿರಿಯ ನಾಗರಿಕರ ಸಮ್ಮೇಳನದ ಅಧ್ಯಕ್ಷ ವಿಶ್ವಾಸರಾವ್ ಭದಾನೆ, ಸಮ್ಮೇಳನದ ಸಂಘಟನಾಧ್ಯಕ್ಷ ಎನ್.ಓಬಯ್ಯ, ಕಾರ್ಯದರ್ಶಿ ಶ್ರೀಹರಿ ಶಿಧಯೆ, ರಾಜ್ಯ ಸಮಿತಿ ಅಧ್ಯಕ್ಷ ಎ.ವೈ.ಬೆಂಡಿಗೇರಿ, ಉಪಾಧ್ಯಕ್ಷ ಮಲ್ಲಪ್ಪ ಮುದಕವಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬರುವುದು ನಿಶ್ಚಿತ

ನಂಜನಗೂಡಿನಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ

ನಂಜನಗೂಡು, ನ.17– ಬಿಜೆಪಿ ಸರ್ಕಾರ ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿಲ್ಲ. ಸರ್ಕಾರದ ನಡವಳಿಕೆಯಿಂದ ಜನತೆ ಬೇಸತ್ತಿದ್ದಾರೆ. ರಾಜ್ಯದಲ್ಲಿ ಜೆಡಿಎಸ್ ಪರ ಅಲೆ ಎದ್ದಿರುವುದರಿಂದ ಈ ಬಾರಿ ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.



ನಗರದ ಶ್ರೀಕಂಠೇಶ್ವರ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳ ಬಗ್ಗೆ ಜನತೆಗೆ ಅರಿವು ಮೂಡಿಸುವ ಪಂಚರತ್ನ ರಥಯಾತ್ರೆ ನ.1 ರಂದು ಆರಂಭವಾಗಬೇಕಿತ್ತು. ಆದರೆ ಭಾರೀ ಮಳೆ ಹಿನ್ನೆಲೆಯಲ್ಲಿ ವಿಘ್ನಗಳಾಗಿ ರದ್ದಾಯಿತು. ನಂತರ ನ.15ರಂದು ಚಾಲನೆ ನೀಡಲು ಉದ್ದೇಶಿಸಲಾಗಿತ್ತು. ಆಗಲೂ ಕೆಲ ಕಾರಣಗಳಿಂದ ನ.18ಕ್ಕೆ ಮುಂದೂಡಲಾಯಿತು. ಹೀಗಾಗಿ ನಂಜನಗೂಡಿಗೆ ಬಂದು ಶ್ರೀಕಂಠೇಶ್ವರನ ದರ್ಶನ ಪಡೆದು ಸಂಪೂರ್ಣ ಅನುಗ್ರಹ ಪಡೆದಿದ್ದೇನೆ. ನಾಳೆ ಶುಕ್ರವಾರ ನಾಡ ದೇವತೆ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿ, ಮುಳಬಾಗಿಲಿಗೆ ತೆರಳಿ ಪಂಚರತ್ನ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ನಂತರ ಬೃಹತ್ ಸಭೆ ನಡೆಸಿದ ಬಳಿಕ ಗ್ರಾಮ ವಾಸ್ತವ್ಯ ನಡೆಸಲಾಗುವುದು. ಪ್ರತಿದಿನ 1 ವಿಧಾನಸಭಾ ಕ್ಷೇತ್ರದ ಕನಿಷ್ಟ 30 ಹಳ್ಳಿಗಳಿಗೆ ತೆರಳಿ ಜನರನ್ನು ಭೇಟಿ ಮಾಡಿ ಜನತೆಗೆ ಮಾಹಿತಿ ನೀಡುವ ಮೂಲಕ ಜನತೆ ವಿಶ್ವಾಸ ಗಳಿಸುತ್ತೇನೆ. ಮಾರ್ಚ್ ತಿಂಗಳ ವೇಳೆಗೆ 22 ಜಿಲ್ಲೆಗಳ ಪ್ರವಾಸ ಮುಗಿಸಿ ಮೈಸೂರಿನ ಆಸುಪಾಸಿನಲ್ಲಿ 10 ಲಕ್ಷ ಜನತೆ ಸಮ್ಮುಖದಲ್ಲಿ ಪಂಚರತ್ನ ರಥಯಾತ್ರೆ ಯಶಸ್ವಿ ಸಮಾವೇಶ ನಡೆಸಲಾಗುವುದು. ಅಲ್ಲಿವರೆಗೆ ಚುನಾವಣೆ ದಿನಾಂಕವೂ ಪ್ರಕಟವಾಗುವ ಸಂಭವವಿದ್ದು, ಶ್ರೀಕಂಠೇಶ್ವರ, ಚಾಮುಂಡೇಶ್ವರಿ ಆಶೀರ್ವಾದದಿಂದ ಈ ಬಾರಿ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲಿದ್ದೇವೆ. ಜನರ ಭಾವನೆ ಕೂಡ ಜೆಡಿಎಸ್ ಸರ್ಕಾರ ಬರಬೇಕು ಎಂಬುದೇ ಆಗಿದೆ ಎಂದರು.

ರಾತ್ರಿ 8 ಗಂಟೆ ವೇಳೆಗೆ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ದೇವಾಲಯಕ್ಕೆ ಆಗಮಿಸಿದರು. ಈ ಸಂದರ್ಭ ಸ್ವಾಮಿಗೆ ಕೊನೆ ಜಾವದ ಅಭಿಷೇಕ ಪೂಜೆ ನಡೆಯುತ್ತಿದ್ದ ಕಾರಣ 1 ಗಂಟೆಗೂ ಹೆಚ್ಚು ಕಾಲ ಕುಳಿತು ಕುಮಾರಸ್ವಾಮಿ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಶ್ರೀಕಂಠೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದರು. ದೇವಾಯದ ವತಿಯಿಂದ ಅವರಿಗೆ ಶೇತವಸ್ತ್ರ ನೀಡಿ ಗೌರವಿಸಲಾಯಿತು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಮಂಜೇಗೌಡ, ಬಂಡೆಪ್ಪ ಕಾಶಂಪುರ್, ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಟಿಕೆಟ್ ಆಕಾಂಕ್ಷಿಗಳಾದ ಬೆಳವಾಡಿ ಶಿವಕುಮಾರ್, ಮಾದೇಶ, ಮಾಜಿ ಮೇಯರ್ ರವಿಕುಮಾರ್, ಮುಖಂಡರಾದ ಡಿ.ಎಸ್. ಆನಂದ, ಸಂಜುಗೌಡ, ಆರ್.ವಿ.ಮಹದೇವಸ್ವಾಮಿ, ಲತಾ ಮೋಹನ್ ಸೇರಿದಂತೆ ಇತರರಿದ್ದರು.

ಮುಂದಿನ 10 ದಿನದಲ್ಲಿ ನಂ.ಗೂಡು ಅಭ್ಯರ್ಥಿ ಘೋಷಣೆ

ಮುಂದಿನ 10 ದಿನದೊಳಗೆ ನಂಜನಗೂಡು ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ಘೋಷಿಸಲಾಗುವುದು. ಮಾದೇಶ ಮತ್ತು ಬೆಳವಾಡಿ ಶಿವಕುಮಾರ ಸ್ವಾಮಿ ಕ್ಷೇತ್ರದ ಆಕಾಂಕ್ಷಿ ಗಳಾಗಿದ್ದು, ಪಕ್ಷ ಸಂಘಟನೆಯಲ್ಲಿ ತೊಡಗಿದ್ದಾರೆ. ಯಾರು ಹೆಚ್ಚು ಜನತೆ ವಿಶ್ವಾಸ ಗಳಿಸಿದ್ದಾರೆ ಎಂಬ ವರದಿ ಆಧಾರದ ಮೇಲೆ ಅಭ್ಯರ್ಥಿ ಅಂತಿಮಗೊಳಿಸಲಾಗುವುದು. ಶಿವಕುಮಾರ ಸ್ವಾಮಿ ನಮ್ಮ ಮನೆ ಹುಡುಗನಾಗಿದ್ದು ಕಳೆದ ಬಾರಿ ಅವರಿಗೆ ಟಿಕೆಟ್ ಕೈ ತಪ್ಪಿತ್ತು. ಈ ಬಾರಿ ಎಲ್ಲವನ್ನು ಸರಿಪ ಡಿಸಲಾಗುವುದು ಎನ್ನುವ ಮೂಲಕ ಜೆಡಿಎಸ್ ಅಭ್ಯರ್ಥಿ ಯಾರೂ ಎಂಬ ಬಗ್ಗೆ ಕುಮಾರಸ್ವಾಮಿ ಸುಳಿವು ನೀಡಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಬೆಟ್ಟದಪುರ, ನ.17– ಇಲ್ಲಿಗೆ ಸಮೀಪದ ಅತ್ತಿಗೋಡು ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಮಹದೇವ್ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕರು, ಈ ವರ್ಷ ಭಾರೀ ಮಳೆಯಿಂದಾಗಿ ರಸ್ತೆಗಳು ಹದಗೆಟ್ಟಿದ್ದು ಅವುಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು ಎಂದರು.

ಜೆಡಿಎಸ್ ಮುಖಂಡ ಗಗನ್ ಮಾತನಾಡಿ, ತಾಲೂಕಿನ ಅಭಿವೃದ್ಧಿ ಪರ್ವ ಆರಂಭವಾಗಿದ್ದು, ಮುಂಬರುವ ಚುನಾವಣೆಯಲ್ಲಿ ಶಾಸಕ ಮಹದೇವ್ ಅವರನ್ನು ಮತ್ತೊಮ್ಮೆ ಆಯ್ಕೆ ಮಾಡಿದರೇ ಮತಷ್ಟು ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖಂಡರಾದ ಮಣಿ, ಗ್ರಾಪಂ ಅಧ್ಯಕ್ಷ ಮಂಜುಳಾ, ಮಾಜಿ ಸದಸ್ಯ ಸ್ವಾಮಿ, ಪುಟ್ಟರಾಜ, ಸತೀಶ, ಗೌರೀಶ, ಸಿರಿಯಾಳಶೆಟ್ಟಿ, ಮಾಜಿ ಗ್ರಾಪಂ ಸದಸ್ಯ ಮಹದೇವ್, ರಾಜೇಶ್, ಸದಸ್ಯರಾದ ರಮೇಶ್, ಗುತ್ತಿಗೆದಾರ ಲೋಕೇಶ್, ಪಟೇಲ್, ನಟೇಶ್, ರಾಜೇಶ್, ರಾಜಶ್ರೀ ನಿರೀಕ್ಷಕ ಆನಂದ್, ಪಿಡಿಓ ಮನು ಸೇರಿದಂತೆ ಇನ್ನಿತರರಿದ್ದರು.

ಅಬ್ಬೂರಿನಲ್ಲಿ ಹುಲಿ ದಾಳಿಗೆ ಸಾಕುಪ್ರಾಣಿಗಳ ಬಲಿ

ಹನಗೋಡು, ನ.17– ಹಾಡಹಗಲೇ ನಾಗರಹೊಳೆ ಉದ್ಯಾನವನದಂಚಿನ ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ಹಸುವಿನ ಮೇಲೆ ಹುಲಿ ದಾಳಿ ನಡೆಸಿದ್ದು, ಮೇಕೆಯೊಂದನ್ನು ಹೊತ್ತೊಯ್ದಿರುವ ಘಟನೆ ಇಲ್ಲಿಗೆ ಸಮೀಪದ ಅಬ್ಬೂರಿನಲ್ಲಿ ನಡೆದಿದೆ.



ಅಬ್ಬೂರು ಗ್ರಾಮದ ತಿಮ್ಮೇಗೌಡರಿಗೆ ಸೇರಿದ ಹಸು ಹಾಗೂ ಮೇಕೆಯಾಗಿದ್ದು, ಗುರುವಾರದಂದು ಶೆಟ್ಟಹಳ್ಳಿಯ ಅರಣ್ಯದಂಚಿನಲ್ಲಿರುವ ತಮ್ಮ ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ಹಸುವನ್ನು ಕೊಂದು ಹಾಕಿದೆಯಲ್ಲದೆ ಪಕ್ಕದಲ್ಲೇ ಮೇಯುತ್ತಿದ್ದ ಮೇಕೆಯನ್ನು ಹೊತ್ತೊಯ್ದಿದೆ.

ತಿಂಗಳಲ್ಲಿ ಐದು ಜಾನುವಾರುಗಳ ಸಾವು: ವಾರದ ಹಿಂದಷ್ಟೇ ಗೌಡಿಕೆರೆ ಗ್ರಾಮದ ಶೇಖರ್ ಅವರಿಗೆ ಸೇರಿದ ಹಸುವಿನ ಮೇಲೆ ದಾಳಿ ನಡೆಸಿ ಸಾಯಿಸಿತ್ತು ಅಲ್ಲದೆ 3 ದಿನಗಳ ಹಿಂದೆ ಸಮೀಪದ ಬೀರತಮ್ಮನಹಳ್ಳಿಯಲ್ಲಿ ಹುಲಿ ಹೆಜ್ಜೆ ಪತ್ತೆಯಾಗಿತ್ತು.

ಘಟನ ಸ್ಥಳಕ್ಕೆ ಹುಣಸೂರು ವಲಯದ ಡಿ.ಆರ್.ಎಫ್.ಓ.ಸಿದ್ದರಾಜು ಸ್ಥಳಕ್ಕೆ ಭೇಟಿ ನೀಡಿ ಮಹಜರ್ ನಡೆಸಿ ಇಲಾಖೆಯಿಂದ ಬರುವ ಪರಿಹಾರ ನೀಡಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಭಯಭೀತರಾದ ಜನತೆ: ಇತ್ತೀಚಿನ ದಿನಗಳಲ್ಲಿ ಹುಲಿಯು ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿರುವ ಹಿನ್ನೆಲೆಯಲ್ಲಿ ಈ ಭಾಗದ ಜನತೆ ಆತಂಕಗೊಂಡಿದ್ದು, ಶಾಲಾ ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು ಹಾಗೂ ತೋಟಗಳಿಗೆ ಕೆಲಸಕ್ಕೆ ತೆರಳುವ ಕೂಲಿ ಕಾರ್ಮಿಕರು ಭಯಭೀತರಾಗಿದ್ದಾರೆ. ಅರಣ್ಯದಂಚಿನ ಗ್ರಾಮಗಳಾದ ಬಿಲ್ಲೆನಹೊಸಹಳ್ಳಿ, ನೇರಳಕುಪ್ಪೆ, ಕಚುವಿನ ಹಳ್ಳಿ, ಶೆಟ್ಟಹಳ್ಳಿ, ಕೊಳವಿಗೆ, ನೇಗತ್ತೂರು ಸುತ್ತಮುತ್ತಲಿನ ಜಮೀನಿನಲ್ಲಿ ಹುಲಿ ಹೆಜ್ಜೆ ಪತ್ತೆಯಾಗಿದ್ದು, ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ.

ಹುಲಿ ಸೆರೆಗೆ ಆಗ್ರಹ: ತಕ್ಷಣ ಹುಲಿ ಸೆರೆ ಹಿಡಿಯಲು ಅರಣ್ಯ ಇಲಾಖೆ ಕ್ರಮ ವಹಿಸಬೇಕೆಂದು ನೇರಳಕುಪ್ಪೆ ಮಹದೇವ್ ಹಾಗೂ ಗ್ರಾಪಂ ಸದಸ್ಯ ಕುಮಾರ್ ಅರಣ್ಯ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ತಳಮಟ್ಟದಿಂದ ಪಕ್ಷ ಸಂಘಟಿಸಿ: ಧ್ರುವನಾರಾಯಣ್ ಕರೆ

ಮಲ್ಲುಂಡಿ, ನ.17– ತಳಮಟ್ಟದಿಂದ ಪಕ್ಷ ಸಂಘಟಿಸುವಂತೆ ಕಾರ್ಯಕರ್ತರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಕರೆ ನೀಡಿದರು.



ನಂಜನಗೂಡು ವಿಧಾನಸಭಾ ಕ್ಷೇತ್ರದ ಕಣೆನೂರು, ಮಾದನಹಳ್ಳಿ, ಇಬ್ಬಾಲ, ಅಲಯ್ಯನಪುರ, ಕಾಟೂರು, ಬಸಾಪುರ, ರಾಜೂರು, ಮೊತ್ತ, ಶೆಟ್ಟಹಳ್ಳಿ ಗ್ರಾಮಗಳಿಗೆ ಭೇಟಿ ನೀಡಿ, ನಂತರ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 5 ವರ್ಷ ಯಶಸ್ವಿಯಾಗಿ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರ ಬಡವರ, ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಕೋಟ್ಯಾಂತರ ರೂ. ಅನುದಾನ ನೀಡಿತ್ತು. ಆದರೆ ಈಗಿನ ಬಿಜೆಪಿ ಸರ್ಕಾರದ ದುರಾಡಳಿತದಿಂದ ರಾಜ್ಯದ ಜನತೆಗೆ ಅನುಕೂಲವಾಗಿಲ್ಲ. ದಿನಬಳಕೆ ವಸ್ತುಗಳು, ಪೆಟ್ರೋಲ್, ಡೀಸೆಲ್, ಗ್ಯಾಸ್ ಸಿಲಿಂಡರ್‌ಗಳ ಬೆಲೆ ಏರಿಕೆ ಮಾಡಿ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ತೊಲಗಿಸಲು ರಾಜ್ಯದ ಜನತೆ ಕಾಯುತ್ತಿದ್ದಾರೆ. ಕಾಂಗ್ರೆಸ್ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಅವರ ಭಾರತ್ ಜೋಡೋ ಯಾತ್ರೆ ಬಗ್ಗೆ ವಿಪಕ್ಷಗಳು ವ್ಯಂಗ್ಯ ಮಾಡಿದವು. ಆದರೆ ರಾಹುಲ್ ಗಾಂಧಿ ಅವರ ಆದರ್ಶಗಳನ್ನು ರಾಜ್ಯದ ಜನರು ಕೊಂಡಾಡುತ್ತಿದ್ದಾರೆ. ಬಡವರ, ಯುವಕರ, ಅಲ್ಪಸಂಖ್ಯಾತರ ವಿರೋಧಿಯಾಗಿರುವ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕು. ಬಿಜೆಪಿಯವರು ಅಧಿಕಾರಕ್ಕೆ ಬಂದು 4 ವರ್ಷವಾಗಿದ್ದು, ರಾಜ್ಯದ ಸಂಪತ್ತನ್ನು ಲೂಟಿ ಮಾಡಿದ್ದು, ಬಿಟ್ಟರೆ ಜನರ ಕಷ್ಟಕ್ಕೆ ಸ್ಪಂದಿಸಿಲ್ಲ. ಬಿಜೆಪಿ ಸರ್ಕಾರವನ್ನು 40 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ನಾವು ಹೇಳುತ್ತಿಲ್ಲ. ಗುತ್ತಿಗೆದಾರರ ಸಂಘವೇ ಈ ಮಾತನ್ನು ಹೇಳಿ ಪ್ರಧಾನಿಯವರಿಗೆ ಪತ್ರ ಬರೆದಿದೆ. ಈ ಭ್ರಷ್ಟ ಬಿಜೆಪಿ ಸರ್ಕಾರದ ವಿರುದ್ಧ ಜನ ಸಿಡಿದೆದ್ದಿದ್ದಾರೆ. ಆದ್ದರಿಂದ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಬೇಕು ಎಂದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕೆ.ಜಿ.ಮಹೇಶ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹೆಚ್.ಸಿ. ಬಸವರಾಜ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಎಸ್‌ಟಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ಶ್ರೀಕಂಠ ನಾಯಕ, ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್, ಎಸ್ಸಿ ಘಟಕದ ಅಧ್ಯಕ್ಷ ಸೋಮೇಶ್, ಮುಖಂಡರಾದ ಅಭಿನಂದ್ ಪಟೇಲ್, ಸೂರ್ಯಕುಮಾರ್, ಮಾದಪ್ಪ, ಶಂಕರಪ್ಪ, ಗ್ರಾಪಂ ಸದಸ್ಯ ಜಗದೀಶ್ ಸೇರಿದಂತೆ ಇನ್ನಿತರರಿದ್ದರು.

ಕೊಂಗಳ್ಳಿ ಬೆಟ್ಟದಲ್ಲಿ ಕಾರ್ತಿಕ ಪೂಜೆ

ತಿ.ನರಸೀಪುರ, ನ.17– ಪಟ್ಟಣದ ಹೆಳವರಹುಂಡಿ ಗ್ರಾಮದವರಿಂದ ಚಾಮರಾಜನಗರ ಜಿಲ್ಲಾ ಗಡಿ ವ್ಯಾಪ್ತಿಯ ತಾಳವಾಡಿ ತಾಲ್ಲೂಕಿನ ಕೊಂಗಳ್ಳಿ ಬೆಟ್ಟದಲ್ಲಿ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವ, ಹುಲಿ ವಾಹನೋತ್ಸವ ಹಾಗೂ ದೊಡ್ಡಪರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಬೆಟ್ಟದಲ್ಲಿರುವ ಕೊಂಗಳ್ಳಿ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದಲ್ಲಿ ಕಾರ್ತಿಕ ಉತ್ಸವದ ಅಂಗವಾಗಿ ಮಲ್ಲಿಕಾರ್ಜುನ ಸ್ವಾಮಿಗೆ ವಿಶೇಷ ಪೂಜೆಗಳು ಜರುಗಿದವು.

ಮಧ್ಯಾಹ್ನದ ವೇಳೆಗೆ ಹೂವಿನ ಅಲಂಕೃತ ಹುಲಿವಾಹನೋತ್ಸವಕ್ಕೆ ಪೂಜೆ ಸಲ್ಲಿಸಿ ದೇವಾಲಯದ ಮುಂಭಾಗದ ರಸ್ತೆಯಲ್ಲಿ ಮೆರವಣಿಗೆ ಮಾಡಲಾಯಿತು. ಬಳಿಕ ದೇವಾಲಯದ ಅನತಿ ದೂರದಲ್ಲಿರುವ ಮೈದಾನದಲ್ಲಿ ಸಹಸ್ರಾರು ಭಕ್ತರಿಗೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಕಳೆದ ಶನಿವಾರ ರಾತ್ರಿ ಹೆಳವರ ಹುಂಡಿ ಗ್ರಾಮದಿಂದ ಹೊರಟ ಬಸವಗಳು ಸೋಮವಾರ ಬೆಳಗ್ಗೆ ಬೆಟ್ಟಕ್ಕೆ ಆಗಮಿಸಿದ ಬಳಿಕ ಪೂಜಾ ಕೈಂಕರ್ಯಗಳು ನಡೆದವು. ಸೋಮವಾರ ರಾತ್ರಿ ಚಿಕ್ಕಪರ ಹಾಗೂ ಮಂಗಳವಾರ ದೊಡ್ಡಪರ (ಅನ್ನ ಸಂತರ್ಪಣೆ) ನಡೆಯಿತು.

4.07 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ



ಹುಣಸೂರು, ನ.17– ಲೋಕೋಪಯೋಗಿ ಇಲಾಖೆಯ 4.07 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಪಿ. ಮಂಜುನಾಥ್ ಚಾಲನೆ ನೀಡಿದರು.

ತಾಲೂಕಿನ ಆಸ್ವಾಳು–ಯಲಚನಹಳ್ಳಿ ರಸ್ತೆ 2.80 ರಿಂದ 3.40 ಕಿಮೀವರೆಗಿನ ಅಭಿವೃದ್ಧಿ ಕಾಮಗಾರಿ ಅಂದಾಜು ಮೊತ್ತ 88.00 ಲಕ್ಷ ರೂ., ಜೇಮ್ಸ್ ನಗರ ಗ್ರಾಮ ಪರಿಮಿತಿಯಲ್ಲಿ ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ 30.00 ಲಕ್ಷ ರೂ., ಶಾಂತಪುರ ಗ್ರಾಮ ಪರಿಮಿತಿಯಲ್ಲಿ ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ 40.00 ಲಕ್ಷ ರೂ., ಕುಡಿಯುವ ನೀರು ಮುದ್ದನಹಳ್ಳಿ ಗ್ರಾಮ ಪರಿಮಿತಿಯಲ್ಲಿ ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ 35.00 ಲಕ್ಷ ರೂ., ಗುರುಪುರ ಕಾಳೇನಹಳ್ಳಿ ರಸ್ತೆ 20.40 ರಿಂದ 160 ಕಿಮೀ ಮತ್ತು 3.50 ರಿಂದ 3.80 ಕಿಮೀವರೆಗೆ ಅಭಿವೃದ್ಧಿ ಕಾಮಗಾರಿ 164.00 ಲಕ್ಷ ರೂ. ಕೊಯಮತ್ತೂರು ಕಾಲೋನಿ ಮೊದಲನೇ ಬ್ಲಾಕ್ ಗ್ರಾಮ ಪರಿಮಿತಿಯಲ್ಲಿ ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ 50 ಲಕ್ಷ ರೂ. ಕಾಮಗಾರಿಗಳಿಗೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಲೋಕೋಪಯೋಗಿ ಇಲಾಖೆ ಎಇಇ ಭೋಜರಾಜ್, ಮಾಜಿ ಶಾಸಕ ದಿ.ಚಿಕ್ಕಮಾದು ಪುತ್ರ ರಂಜಿತ, ಸಿಂಗರಮಾರನಹಳ್ಳಿ ಗ್ರಾಪಂ ಅಧ್ಯಕ್ಷೆ ಲಕ್ಷ್ಮಿ, ಉಪಾಧ್ಯಕ್ಷ ಅಂಜನ್ ಕುಮಾರ್, ಮುಖಂಡರಾದ ಮರಿಗೌಡ, ಈಶ್ವೇಗೌಡ, ಎಸ್.ಕುಮಾರ್ ಅಂಕೇಗೌಡ, ಆನಂದ್, ಯ.ಶಿವಣ್ಣ, ಮೀನಾಕ್ಷಾ ಮಣಿ, ಪಳನಿಸ್ವಾಮಿ ಇತರರಿದ್ದರು.


ನಾಳೆ ವಿದ್ಯುತ್ ಅದಾಲತ್


ನಂಜನಗೂಡು, ನ.17– ಸರ್ಕಾರಿ ಆದೇಶದಂತೆ ಪ್ರತಿ ತಿಂಗಳು 3ನೇ ಶನಿವಾರ ಗ್ರಾಮೀಣ ಪ್ರದೇಶಗಳ ವಿದ್ಯುತ್‌ಗೆ ಸಂಬಂಧಿಸಿದ ಗ್ರಾಹಕರ ಅಹವಾಲನ್ನು ಆಲಿಸುವ ಸಲುವಾಗಿ ನ.19 ರಂದು ನಂಜನಗೂಡು ಉಪವಿಭಾಗ 1ರ ಸಿಂಧುವಳ್ಳಿ ಶಾಖೆ ಸಭೆಯನ್ನು ತಾಲೂಕಿನ ದೇಪೇಗೌಡನಪುರದಲ್ಲಿ, ಉಪವಿಭಾಗ 2ರ ಹುರಾ ಶಾಖೆ ಸಭೆಯನ್ನು ಯಡಹಳ್ಳಿಯಲ್ಲಿ, ತಗಡೂರು ಶಾಖೆ ಸಭೆಯನ್ನು ತಾಯೂರು ಗ್ರಾಮದಲ್ಲಿ ಬೆಳಗ್ಗೆ 11 ರಿಂದ 1 ಗಂಟೆವರೆಗೆ ಗ್ರಾಹಕರ ಕುಂದು ಕೊರತೆ ಸಭೆ ಮತ್ತು ವಿದ್ಯುತ್ ಅದಾಲತ್ ಕಾರ್ಯಕ್ರಮ ಆಯೋಜಿಸಲಾಗಿದೆ. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ವಿದ್ಯುತ್‌ಗೆ ಸಂಬಂಧಿಸಿದ ದೂರುಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ ಎಂದು ಸಹಾಯಕ ಕಾರ್ಯಪಾಲಕ ಇಂಜಿಯರ್ ದೇವರಾಜಯ್ಯ ಮತ್ತು ಕಿರಣ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಎಂ.ಅಶ್ವಿನ್ ಕುಮಾರ್ ಹುಟ್ಟುಹಬ್ಬ ಅದ್ದೂರಿ ಆಚರಣೆ

● ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳಿಂದ ವಿಶೇಷ ಪೂಜೆ, ಪ್ರಾರ್ಥನೆ ● ಬಿಜೆಪಿ, ಕಾಂಗ್ರೆಸ್ ಮುಖಂಡರಿಂದಲೂ ಶುಭಾಶಂಯ

ತಿ.ನರಸೀಪುರ, ನ.17– ಶಾಸಕ ಎಂ. ಅಶ್ವಿನ್ ಕುಮಾರ್ ಅವರ 41ನೇ ಹುಟ್ಟುಹಬ್ಬವನ್ನು ಪಟ್ಟಣದಲ್ಲಿ ಜೆಡಿಎಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅದ್ದೂರಿಯಾಗಿ ಆಚರಿಸಿದರು.





ಮುಂಜಾನೆಯೇ ನಗರದ ಕಪಿಲಾ ನದಿತಟದಲ್ಲಿರುವ ಶ್ರೀಗುಂಜಾ ನರಸಿಂಹ ಸ್ವಾಮಿ ದೇವಾಲಯಕ್ಕೆ ಶಾಸಕ ಅಶ್ವಿನ್ ಕುಮಾರ್ ಅವರೊಂದಿಗೆ ತೆರಳಿದ ಸಾವಿರಾರು ಜೆಡಿಎಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಶಾಸಕರ ಹೆಸರಲ್ಲಿ ಅರ್ಚನೆ ಮಾಡಿಸಿ ವಿಶೇಷ ಪೂಜೆ ಸಲ್ಲಿಸಿದರು. ಅಲ್ಲದೇ ಹೆಚ್ಚಿನ ಅಧಿಕಾರ ದೊರೆಯಲಿ ಎಂದು ದೇವರಲ್ಲಿ ಪ್ರಾರ್ಥಿಸಿದರು.

ಇದೇ ವೇಳೆ ಶಾಸಕ ಅಶ್ವಿನ್ ಕುಮಾರ್, ಗುಂಜಾ ನರಸಿಂಹಸ್ವಾಮಿ ಹಾಗೂ ಮಹಾಲಕ್ಷ್ಮಿ ಅಮ್ಮನವರ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಈ ವೇಳೆ ಅವರನ್ನು ಕಸಾಪ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ಭಾರೀ ಗಾತ್ರದ ಹಾರ ಹಾಕಿ ಸನ್ಮಾನಿಸಿದರು.

ನಂತರ ಪಟ್ಟಣದ ಜೆಡಿಎಸ್ ಕಚೇರಿಗೆ ಆಗಮಿಸಿದ ಶಾಸಕರನ್ನು ಕಾರ್ಯಕರ್ತರು ಭರ್ಜರಿಯಾಗಿ ಸ್ವಾಗತಿಸಿದರು. ಈ ವೇಳೆ ಸುಮಾರು 500 ಕೆ.ಜಿ ತೂಕವುಳ್ಳ ಭಾರೀ ಗಾತ್ರದ ಸೇಬಿನ ಹಾರ ಹಾಕಿದ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಶಾಸಕರ ಮೇಲಿನ ಅಭಿಮಾನ ಪ್ರದರ್ಶಿಸಿದರು. ಅಲ್ಲದೇ ಕಚೇರಿಯಲ್ಲಿ ಕೇಕ್ ಕತ್ತರಿಸುವ ಮೂಲಕ ಅಶ್ವಿನ್ ಕುಮಾರ್ ಅಭಿಮಾನಿಗಳೊಂದಿಗೆ ಹುಟ್ಟುಹಬ್ಬ ಆಚರಿಸಿಕೊಂಡರು.

ತಾಲೂಕಿನ ತುಂಬಲ ಗ್ರಾಮದಲ್ಲಿರುವ ಶಾಸಕರ ತೋಟದ ಮನೆಯಲ್ಲಿ ಆಯೋಜಿಸಿದ್ದ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಕಾರ್ಯಕರ್ತರು ಶಾಸಕರಿಗೆ ಶುಭ ಕೋರಿದರು. ಜೆಡಿಎಸ್ ಕಾರ್ಯಕರ್ತರಲ್ಲದೇ ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರೂ ಹುಟ್ಟುಹಬ್ಬಕ್ಕೆ ಶುಭ ಕೋರಿದ್ದು ವಿಶೇಷವಾಗಿತ್ತು.

ಅಭಿಮಾನಕ್ಕೆ ತಲೆ ಬಾಗಿದ ಅಶ್ವಿನ್: ನಿರೀಕ್ಷೆಗೂ ಮೀರಿ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಆಗಮಿಸಿ ಶುಭ ಕೋರಿದ್ದರಿಂದ ಭಾವುಕರಾದ ಅಶ್ವಿನ್ ಕುಮಾರ್ ಅಭಿಮಾನಿಗಳ ಅಭಿಮಾನಕ್ಕೆ ತಲೆ ಬಾಗಿದರು. ಈ ವೇಳೆ ಮಾತನಾಡಿದ ಅವರು ಕ್ಷೇತ್ರದ ಜನತೆ ಪ್ರೀತಿಯಿಂದ ನನಗೆ ಶುಭ ಕೋರಿದ್ದಾರೆ. ಕ್ಷೇತ್ರದ ಜನತೆ ಜಿಪಂ ಸದಸ್ಯನಾಗಿದ್ದಾಗಿನಿಂದಲೂ ನನ್ನನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಶಾಸಕನಾಗಿ ನನ್ನ ಕೈಲಾದಷ್ಟು ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿದ್ದೇನೆ. ಜನತೆ ಈ ಹಿಂದೆ ನೀಡಿರುವ ಬೆಂಬಲವನ್ನು ಮುಂದೆಯೂ ನೀಡಿದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಮಾಡುತ್ತೇನೆ. ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಮತ್ತೆ ಅಧಿಕಾರದ ಗದ್ದುಗೆ ಹಿಡಿಯಲಿದ್ದು, ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲಿದ್ದಾರೆ. ಹಾಗಾಗಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ದೊರಕಲಿದ್ದು, ಕ್ಷೇತ್ರದ ಜನತೆ ಸೇವೆಗೆ ಮತ್ತೊಂದು ಅವಕಾಶ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಜೆಡಿಎಸ್‌ಯುವ ಘಟಕದ ಉಪಾಧ್ಯಕ್ಷ ಮಹೇಶ್, ಉಕ್ಕಲಗೆರೆ ಗ್ರಾಪಂ ಮಾಜಿ ಅಧ್ಯಕ್ಷ ಅಡುಗೆ ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಸಿದ್ದಾರ್ಥ, ಸದಸ್ಯ ಜಯಪಾಲ್ ಭರಣಿ, ಗ್ರಾಪಂ ಮಾಜಿ ಅಧ್ಯಕ್ಷ ಶಂಭುದೇವನಪುರ ರಮೇಶ್, ಗದ್ದೆ ಮೋಳೆ ಹೊನ್ನನಾಯಕ, ಸೋಸಲೆ ರಾಜೇಶ್, ರಾಜಣ್ಣ, ಕಟ್ಟೆಪುರ ಸಿದ್ದಪ್ಪ, ಕುರುಬೂರು ಡೈರಿ ಅಧ್ಯಕ್ಷ ವೀರೇಶ್, ಕೆಂಪಯ್ಯನ ಹುಂಡಿ ಅಂದಾನಿಗೌಡ, ಎಸ್.ಮಾದಯ್ಯ, ಜಯರಾಮು, ಮೂಗೂರು ಶಿವಮೂರ್ತಿ, ಅತ್ತಹಳ್ಳಿ ರವಿ, ದೀಪು ದರ್ಶನ್, ಬೇವಿನ ಹಳ್ಳಿ ಸತೀಶ್, ಮಾವಿನ ಹಳ್ಳಿ ರಾಜೇಶ್, ಕನ್ನಳ್ಳಿ ಶಿವಕುಮಾರ್, ಮಹದೇವ್, ಹೆಮ್ಮಿಗೆ ವೆಂಕಟೇಶ್, ಪ್ರಸಾದ್ ಹೆಳವರ ಹುಂಡಿ ನಾಗೇಂದ್ರ, ಭರತ್ ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಮಠ (ಕ): ಬೆ.10ಕ್ಕೆ, ಅಬ್ಬರ (ಕ): ಮ.1.05ಕ್ಕೆ, ರಾ.10.05ಕ್ಕೆ, ಕಾಲಗ ತಲೈವನ್ (ತ): ಸಂ.4ಕ್ಕೆ, ಉಂಚೈ (ಹಿಂ): ಸಂ.6.55ಕ್ಕೆ.
ಸ್ಕ್ರೀನ್ 3	ಗಂಧದ ಗುಡಿ (ಕ): ಬೆ.10.05ಕ್ಕೆ, ಮ.12.05ಕ್ಕೆ, ಮ.2.10ಕ್ಕೆ, ಯಶೋಧಾ (ತೆ): ಸಂ.4.15ಕ್ಕೆ, ದೃಶ್ಯಂ–2 (ಹಿಂ): ರಾ.7.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ದೃಶ್ಯಂ–2 (ಹಿಂ): ಬೆ.10.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ದೃಶ್ಯಂ–2 (ಹಿಂ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಮಠ (ಕ): ಬೆ.11.30ಕ್ಕೆ, ಖಾಸಗಿ ಪುಟಗಳು (ಕ): ಮ.2.35ಕ್ಕೆ, ಅಬ್ಬರ (ಕ): ಸಂ.5ಕ್ಕೆ, ಗಂಧದ ಗುಡಿ (ಕ): ರಾ.8ಕ್ಕೆ, ಕಾಲಗ ತಲೈವನ್ (ತ): ರಾ.10.10ಕ್ಕೆ.
ಸ್ಕ್ರೀನ್ 4	ದೃಶ್ಯಂ–2 (ಹಿಂ): ಬೆ.10.45ಕ್ಕೆ, ರಾ.10.30ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.5ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಅಬ್ಬರ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೃಶ್ಯಂ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗಂಧದ ಗುಡಿ (ಕ) ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬನಾರಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಾನ್ ಮಿರುಗಮೈ ಮಾರಾ (ತ)	2 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ಅಬ್ಬರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಬ್ಬರ (ಕ)	4 ಪ್ರದರ್ಶನಗಳು
ಪ್ರಭಾ	
ದಿಲ್ ಪಸಂದ್ (ಕ)	4 ಪ್ರದರ್ಶನಗಳು



ಕಂಪಲಾಪುರದ ನೂರಕ್ಕೂ ಹೆಚ್ಚು ಮುಸ್ಲಿಂ ಬಾಂಧವರು ಕಾಂಗ್ರೆಸ್ ತೊರೆದು ಶಾಸಕ ಕೆ.ಮಹದೇವ್ ಸಮ್ಮುಖದಲ್ಲಿ ಜೆಡಿಎಸ್‌ಗೆ ಸೇರ್ಪಡೆಗೊಂಡರು. ತಾಲೂಕು ಜೆಡಿಎಸ್ ಉಪಾಧ್ಯಕ್ಷ ಕುಮಾರ್, ಸಹಕಾರ ಸಂಘದ ಅಧ್ಯಕ್ಷ ಜಯಣ್ಣ, ಡೇರಿ ಅಧ್ಯಕ್ಷ ಲಕ್ಷ್ಮಣ್, ಸೂರಿ, ಆಸೀಫ್, ಗಿರೀಶ್, ಕೃಷ್ಣ, ರಿಜ್ವಾನ್, ವಜೀರ್ ಖಾನ್, ಲೋಕೇಶ್ ಮತ್ತಿತರರು ಹಾಜರಿದ್ದರು.




ಉದ್ಯಮಿ ಎಸ್.ಶ್ರೀಕಾಂತ್ ತಮ್ಮ ಹುಟ್ಟುಹಬ್ಬದ ಪ್ರಯುಕ್ತ ಜಯಪುರ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ವೆಂಕಟೇಶ್ ಸಮ್ಮುಖದಲ್ಲಿ ಗರ್ಭಿಣಿಯರು ಮತ್ತು ಆಸ್ಪತ್ರೆ ಸಿಬ್ಬಂದಿ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಹಣ್ಣು ಹಂಪಲು ವಿತರಿಸಿದರು.

ಮೂರ್ತಿ ನಿಧನ



ನಂಜನಗೂಡು, ನ.17– ತಾಲೂಕಿನ ಹೊಸಕೋಟೆ ಗ್ರಾಮದ ನಿವಾಸಿ, ಪತ್ರಕರ್ತ ಮೂರ್ತಿ(40) ಗುರುವಾರ ನಿಧನರಾದರು. ಮೃತರು ತಾಯಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚೌಡಪ್ಪ



ಹುಣಸೂರು, ನ.17– ಕಟ್ಟೆಮಳಲವಾಡಿ ಗ್ರಾಮದ ನಿವಾಸಿ, ಸವಿತಾ ಸಮಾಜದ ಮುಖಂಡ ಹಾಗೂ ಬೆಲ್ಲದ ವ್ಯಾಪಾರಿ ಚೌಡಪ್ಪ (58) ಗುರುವಾರ ಸಂಜೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹಿಳೆಯ ಮೋಹದ ಮಾತಿಗೆ ಬಲಿಯಾಗಿ 6.50 ಲಕ್ಷ ಕಳೆದುಕೊಂಡ ಹಿರಿಯ ನಾಗರಿಕ!

- ಕೆವೈಸಿ ಅಪ್‌ಡೇಟ್ ಸಂದೇಶ ಕಳಿಸಿ 89715 ರೂ. ದೋಖಾ
- ಲಾಭದ ಆಸೆ ತೋರಿಸಿ ವಿದ್ಯಾರ್ಥಿನಿಗೆ 1.19 ಲಕ್ಷ ವಂಚನೆ

ಮೈಸೂರು, ನ.17– ಡೇಟಿಂಗ್ ವೆಬ್‌ಸೈಟ್‌ನಿಂದ ನಂಬರ್ ಪಡೆದು ತನ್ನ ಜೊತೆ ಸಂವಾದಿಸಿದ ವೃದ್ಧರೊಬ್ಬರನ್ನು ಬ್ಲಾಕ್‌ಮೇಲ್ ಮಾಡಿದ ಮಹಿಳೆ 6.50 ಲಕ್ಷ ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ಮತ್ತೆ ಹಣಕ್ಕಾಗಿ ಬ್ಲಾಕ್‌ಮೇಲ್ ಮಾಡುತ್ತಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಹೆಬ್ಬಾಳ 1ನೇ ಹಂತದ ನಿವಾಸಿ ಎಸ್. ಗೋಪಿನಾಥ್ (67) ಅವರು ಡೇಟಿಂಗ್ ವೆಬ್‌ಸೈಟ್‌ನಿಂದ ಮಹಿಳೆಯೊಬ್ಬಳ ನಂಬರ್ ಪಡೆದು ಆಕೆಯೊಂದಿಗೆ ಸಂವಾದಿಸಿದ್ದಾರೆ. ಮಹಿಳೆಯೂ ಕೂಡ ಅವರನ್ನು ಪ್ರಚೋದಿಸಿ, ಅವರ ಮಾತುಗಳನ್ನು ರೆಕಾರ್ಡ್ ಮಾಡಿಕೊಂಡು ಬ್ಲಾಕ್‌ಮೇಲ್ ಮಾಡಲು ಆರಂಭಿಸಿದ್ದಾಳೆ. ಬೇರೆ ವಿಧಿಯಿಲ್ಲದೆ ಗೋಪಿನಾಥ್ ಆಕೆ ತಿಳಿಸಿದ ಖಾತೆಗಳಿಗೆ ಹಂತ ಹಂತವಾಗಿ 6.50 ಲಕ್ಷ ರೂ. ವರ್ಗಾವಣೆ ಮಾಡಿದ್ದರೂ ಮತ್ತೆ ಮತ್ತೆ ಆಕೆ ಹಣಕ್ಕಾಗಿ ಪೀಡಿಸುತ್ತಿರುವುದಲ್ಲದೆ, ಹಣ ನೀಡದಿದ್ದರೆ ವಾಯ್ಸ್ ರೆಕಾರ್ಡ್ ಅನ್ನು ವೈರಲ್ ಮಾಡುವುದಾಗಿ ಹೆದರಿಸುತ್ತಿದ್ದಾಳೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ವಿಜಯನಗರ 1ನೇ ಹಂತದ ನಿವಾಸಿ ಎಸ್. ಚಂದ್ರಶೇಖರ್ (65) ಅವರಿಗೆ ಮೊಬೈಲ್ ಸಂಖ್ಯೆಗೆ ಕೆವೈಸಿ ಅಪ್‌ಡೇಟ್ ಮಾಡುವಂತೆ ಸಂದೇಶ ರವಾನಿಸಲಾಗಿದೆ. ಮೆಸೇಜ್‌ನಲ್ಲಿ ಬಂದ ಲಿಂಕ್ ಮೇಲೆ ಕ್ಲಿಕ್ ಮಾಡಿ ಓಟಿಪಿ ನಮೂದಿಸುತ್ತಿದ್ದಂತೆಯೇ ಅವರ ಬ್ಯಾಂಕ್ ಖಾತೆಯಿಂದ 89,715 ರೂ. ಕಡಿತಗೊಂಡಿದೆ. ಇನ್ನೊಂದು ಪ್ರಕರಣದಲ್ಲಿ ಜನತಾನಗರದ ನಿವಾಸಿಯಾಗಿರುವ ವಿದ್ಯಾರ್ಥಿನಿ ವಿ. ಸೋನಿಕಾ (19) ಅವರನ್ನು ಬ್ಲಿಂಕಿಟ್ ಆಪ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಬರುತ್ತದೆ ಎಂದು ನಂಬಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅವರು 1,19,936 ರೂ. ಹೂಡಿಕೆ ಮಾಡಿದ್ದು, ಲಾಭವಾಗಲೀ, ತಾನೂ ಹೂಡಿಕೆ ಮಾಡಿದ ಹಣವಾಗಲೀ ಬಾರದೆ ವಂಚನೆಗೊಳಗಾಗಿದ್ದಾರೆ.

ಕ್ರೈಂ ಬಾಕ್ಸ್

ಅಪಾರ್ಟ್‌ಮೆಂಟ್ ಕೊಡುವುದಾಗಿ ವಂಚನೆ

ಮೈಸೂರಿನ ಪಾಠಕ್ ಡೆವಲಪರ್ಸ್ ಮಾಲೀಕ ಶ್ರೀಹರಿ ಪಾಠಕ್, ಜಯರಾಂ ಪಾಠಕ್ ವಿರುದ್ಧ ಕೇಸ್

ಮೈಸೂರು, ನ.17– ಅಪಾರ್ಟ್‌ಮೆಂಟ್ ಕೊಡುವುದಾಗಿ ಸಾರ್ವಜನಿಕರಿಂದ ಲಕ್ಷಾಂತರ ರೂ ಹಣ ಪಡೆದು ವಂಚಿಸಿದ ಆರೋಪದ ಮೇಲೆ ಮೈಸೂರಿನ ಪಾಠಕ್ ಡೆವಲಪರ್ಸ್ ಮಾಲೀಕರಾದ ಶ್ರೀಹರಿ ಪಾಠಕ್ ಮತ್ತು ಜಯರಾಂ ಪಾಠಕ್ ವಿರುದ್ಧ ಮತ್ತೊಂದು ವಂಚನೆ ಪ್ರಕರಣ ವಿವಿಪುರಂ ಠಾಣೆಯಲ್ಲಿ ದಾಖಲಾಗಿದೆ.

ಸಾರ್ವಜನಿಕರಿಗೆ ವಂಚಿಸಿರುವ ಆರೋಪದ ಮೇರೆಗೆ ಶ್ರೀಹರಿ ಪಾಠಕ್ ವಿರುದ್ಧ ಮೈಸೂರಿನ ವಿವಿಧ ಠಾಣೆಗಳು ಹಾಗೂ ಗ್ರಾಹಕರ ನ್ಯಾಯಾಲಯದಲ್ಲಿ ಹಲವಾರು ಪ್ರಕರಣಗಳು ದಾಖಲಾಗಿದ್ದವು. ನ್ಯಾಯಾಲಯದಲ್ಲಿ ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ಜಾಮೀನು ಪಡೆದಿದ್ದ ಶ್ರೀಹರಿ ಪಾಠಕ್, ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ಈತನನ್ನು ನ.3ರಂದು ಮೈಸೂರು ಪೊಲೀಸರು ಮುಂಬೈನ ಅಂಧೇರಿಯಲ್ಲಿ ಬಂಧಿಸಿದ್ದರು.

ಈ ಮಧ್ಯೆ ಪಾಠಕ್ ವಿರುದ್ಧ ಬೆಂಗಳೂರಿನ ವ್ಯಕ್ತಿಯೊಬ್ಬರು ದೂರು ಸಲ್ಲಿಸಿದ್ದಾರೆ. ವಿವಿ ಮೊಹಲ್ಲಾದ 6ನೇ ಮುಖ್ಯರಸ್ತೆಯಲ್ಲಿರುವ ಪ್ರಥಮ್ ಶಿಲ್ಪ ಅಪಾರ್ಟ್‌ಮೆಂಟ್‌ನ ಮೊದಲನೇ ಮಹಡಿಯಲ್ಲಿ ಎಫ್‌ಎಫ್003 ಸಂಖ್ಯೆಯ ಫ್ಲಾಟ್ ಅನ್ನು ನೀಡುವುದಾಗಿ ಬೆಂಗಳೂರಿನ ಬಿ. ಕಾರ್ತಿಕ್ ಅವರಿಂದ 65 ಲಕ್ಷ ರೂ. ಪಡೆದು 2018ರ ಮಾರ್ಚ್ 16ರಂದು ಮೈಸೂರು ದಕ್ಷಿಣ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಅವರಿಗೆ ಫ್ಲಾಟ್ ಅನ್ನು ರಿಜಿಸ್ಟರ್ ಮಾಡಿಕೊಟ್ಟಿದ್ದಾರೆ. ಆದರೆ ಇಂಟೀರಿಯರ್ ಕೆಲಸಗಳು ಬಾಕಿ ಇರುವುದರಿಂದ ಅದು ಮುಗಿದ ನಂತರ ಫ್ಲಾಟ್ ಸ್ವಾಧೀನಕ್ಕೆ ಕೊಡುವುದಾಗಿ ತಿಳಿಸಿದ್ದ ಪಾಠಕ್, ಅದೇ ಫ್ಲಾಟ್ ಅನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾನೆ ಎಂದು ಕಾರ್ತಿಕ್ ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕೋರ್ಟ್‌ನಿಂದ ಜೈಲಿಗೆ ಹೋಗುವಾಗ ಮಾಸ್ಕ್‌ನಲ್ಲಿ ಗಾಂಜಾ ಸಾಗಾಟ: ಖೈದಿ ಮೇಲೆ ಕೇಸ್

ಮೈಸೂರು, ನ. 16– ನ್ಯಾಯಾಲಯಕ್ಕೆ ಹಾಜರಾಗಿ ಹಿಂತಿರುಗುವಾಗ ಮಾಸ್ಕ್‌ನಲ್ಲಿ ಜೈಲಿಗೆ ಗಾಂಜಾ ಸಾಗಿಸಿದ ಆರೋಪದ ಮೇರೆಗೆ ವಿಚಾರಣಾಧೀನ ಖೈದಿ ವಿರುದ್ಧ ಪ್ರಕರಣ ದಾಖಲಾಗಿದೆ. ಮೈಸೂರಿನ ಬೋಗಾದಿ 2ನೇ ಹಂತದ ನಿವಾಸಿಯಾಗಿದ್ದು, ವಿಚಾರಣಾಧೀನ ಖೈದಿಯಾಗಿ ಮೈಸೂರು ಕೇಂದ್ರ ಕಾರಾಗೃಹದಲ್ಲಿರುವ ಪೃಥ್ವಿರಾಜ್(29) ಆರೋಪಕ್ಕೆ ಗುರಿಯಾದವನಾಗಿದ್ದು, ಈತನನ್ನು ನ. 14ರಂದು ವಿಚಾರಣೆಗಾಗಿ ಜೈಲು ಸಿಬ್ಬಂದಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಜೈಲಿಗೆ ವಾಪಸ್ ಕರೆತಂದಿದ್ದರು. ಈ ವೇಳೆ ಜೈಲು ಸಿಬ್ಬಂದಿ ಆತನನ್ನು ತಪಾಸಣೆಗೊಳಪಡಿಸಿದಾಗ ಪೃಥ್ವಿರಾಜ್ ಧರಿಸಿದ್ದ ಮಾಸ್ಕ್‌ನಲ್ಲಿ 13 ಗ್ರಾಂ ತೂಕದ ಗಾಂಜಾ ಪತ್ತೆಯಾಗಿದೆ. ಈ ಸಂಬಂಧ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ. ದಿವ್ಯಶ್ರೀ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಂಡಿ ಠಾಣೆ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಲಾಭದ ಆಸೆ ಹುಟ್ಟಿಸಿ ಆನ್‌ಲೈನ್‌ನಲ್ಲಿ 5.66 ಲಕ್ಷ ವಂಚನೆ

ಮೈಸೂರು, ನ. 17– ಕಂಪನಿಯೊಂದರಲ್ಲಿ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಗಳಿಸಬಹುದು ಎಂದು ನಂಬಿಸಿ ಗುತ್ತಿಗೆದಾರನಿಗೆ ಆನ್‌ಲೈನ್ ಮೂಲಕ 5.66 ಲಕ್ಷ ರೂ. ವಂಚಿಸಿರುವ ಬಗ್ಗೆ ದೂರು ದಾಖಲಾಗಿದೆ.

ಮೈಸೂರಿನ ವಿಜಯನಗರ 4ನೇ ಹಂತದ ನಿವಾಸಿ ಎ.ಎಂ. ಪ್ರದೀಪ್(28) ವಂಚನೆಗೊಳಗಾದವರಾಗಿದ್ದು, ಅಮೆಜಾನ್ ಎಫ್–ಕೆ ಮಾಲ್ ಎಂಬ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚು ಲಾಭ ದೊರೆಯುತ್ತದೆ ಎಂದು ತಿಳಿಸಿ ಅವರಿಂದ 5,66,235 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಸಕ ತನ್ವೀರ್ ಸೇಠ್‌ಗೆ ಜೀವ ಬೆದರಿಕೆ: ಪೊಲೀಸರಿಗೆ ದೂರು



ಮೈಸೂರು, ನ.17(ಎಸ್‌ಬಿಡಿ)– ಮೈಸೂರಿನ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರಿಗೆ ಸಾಮಾಜಿಕ ಜಾಲತಾಣದ ಮೂಲಕ ಜೀವ ಬೆದರಿಕೆ ಹಾಕಿರುವ ವ್ಯಕ್ತಿಯೊಬ್ಬನ ವಿರುದ್ಧ ಪೊಲೀಸರಿಗೆ ದೂರು ನೀಡಲಾಗಿದೆ.

ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಕೆ.ಸಿ.ಶೌಖತ್ ಪಾಷ ಉದಯಗಿರಿ ಪೊಲೀಸ್ ಠಾಣೆಗೆ ಗುರುವಾರ ದೂರು ನೀಡಿದ್ದು, ಶಾಸಕ ತನ್ವೀರ್ ಸೇಠ್ ಅವರಿಗೆ ಜೀವ ಬೆದರಿಕೆ ಹಾಕಿರುವ ವ್ಯಕ್ತಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಸದ್ಯ ಹಾಸನ ಜಿಲ್ಲೆ, ಸಕಲೇಶಪುರದ ರಘು ಎಂದು ತಿಳಿದು ಬಂದಿರುವ ವ್ಯಕ್ತಿ, 2–3 ದಿನಗಳಿಂದ ಸಾಮಾಜಿಕ ತಾಣದಲ್ಲಿ ಶಾಸಕ ತನ್ವೀರ್ ಸೇಠ್ ಅವರ ಬಗ್ಗೆ ಅವಹೇಳನಕಾರಿಯಾಗಿ ಬರೆಯುತ್ತಿದ್ದಾನೆ. ಟಿಪ್ಪು ಪ್ರತಿಮೆ ನಿರ್ಮಿಸುವುದಾಗಿ ಹೇಳಿದ್ದನ್ನು ಉಲ್ಲೇಖಿಸಿ 'ಈ ಬಗ್ಗೆ ಕ್ಷಮೆಯಾಚಿಸದಿದ್ದರೆ ಭೂಮಿಯೊಳಗೆ ನಿನಗೆ ಜಾಗ ಫಿಕ್ಸ್ ಆಗಿದೆ ಎಂದುಕೋ?' ಎಂದು ಕೊಲೆ ಬೆದರಿಕೆ ಹಾಕಿದ್ದಾನೆ. ಅಲ್ಲದೆ ಟಿಪ್ಪು ಸುಲ್ತಾನರ ಕುರಿತು ಪ್ರಚೋದನಾಕಾರಿಯಾಗಿ ಹೇಳಿದ್ದಾನೆ ಎಂದು ತಿಳಿಸಿದ್ದಾರೆ.

ಆತನ ಹೇಳಿಕೆಯಿಂದ ಅಲ್ಪಸಂಖ್ಯಾತರಿಗೆ ತೀವ್ರ ನೋವುಂಟಾಗಿದೆ. ಸಮಾಜದ ಶಾಂತಿ ಹಾಗೂ ಸ್ವಾಸ್ಥ್ಯ ಕದಡುವಂತಹ ಹೇಳಿಕೆ ನೀಡಿರುವ ಆ ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲಿಸಿ, ಶೀಘ್ರ ಬಂಧಿಸಬೇಕು. ಸಮಾಜದಲ್ಲಿ ಗಲಭೆ ಸೃಷ್ಟಿಸುವ ಈ ಹುನ್ನಾರದ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ಆಯುಕ್ತರ ಗಮನಕ್ಕೆ ತಂದು ಆರೋಪಿ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಶೌಖತ್ ಪಾಷ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆಗ್ರಹಿಸಿದ್ದಾರೆ.

ಕೋರ್ಟ್‌ಗೆ ನಕಲಿ ಆರ್‌ಟಿಸಿ ಸಲ್ಲಿಕೆ: ವ್ಯಕ್ತಿ ವಿರುದ್ಧ ಪ್ರಕರಣ ದಾಖಲು

ಮೈಸೂರು, ನ. 17– ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ನಕಲಿ ಆರ್‌ಟಿಸಿ ಸಲ್ಲಿಸಿರುವ ಬಗ್ಗೆ ವ್ಯಕ್ತಿಯೋರ್ವನ ವಿರುದ್ಧ ಪ್ರಕರಣ ದಾಖಲಾಗಿದೆ.

ನಂಜನಗೂಡು ತಾಲೂಕು ದೊಡ್ಡ ಕವಲಂದೆ ಗ್ರಾಮದ ಇಮ್ತಿಯಾಜ್ ಅಹಮದ್(49) ಆರೋಪಕ್ಕೆ ಗುರಿಯಾದವನಾಗಿದ್ದು, ಈತ ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಶ್ರೀಮತಿ ಶಾರದಮ್ಮ ಎಂಬುವರ ಪರವಾಗಿ ನಕಲಿ ಆರ್‌ಟಿಸಿ ಸಲ್ಲಿಸಿದ್ದಾನೆ ಎಂದು ಮೈಸೂರಿನ 3ನೇ ಜೆಎಂಎಫ್‌ಸಿ ನ್ಯಾಯಾಲಯದ ಶಿರಸ್ತೇದಾರ್ ಪರಮೇಶಮೂರ್ತಿ ಅಶೋಕಪುರಂ ಠಾಣೆಗೆ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಹುಣಸೂರು ತಾಲೂಕು ಕಚೇರಿಯಲ್ಲಿ ಕಡತ ನಾಪತ್ತೆ

ಹುಣಸೂರು, ನ. 17– ತಾಲೂಕು ಕಚೇರಿಯಲ್ಲಿ ಕಡತಗಳು ನಾಪತ್ತೆಯಾಗಿರುವ ಬಗ್ಗೆ ತಾಲೂಕು ತಹಸೀಲ್ದಾರ್ ಡಾ. ಅಶೋಕ್, ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಹುಣಸೂರು ತಾಲೂಕಿನ ಬೀಜಗನಹಳ್ಳಿ ಗ್ರಾಮದ ಸರ್ವೆ ನಂ. 19/2(ಎ) ಸಂಬಂಧಿಸಿದ ಎಂಆರ್ 3/68–69, ಎಂಆರ್ 18/59–60, ಎಂಆರ್ 38/95–96, ಎಂಆರ್ 2/60–61, ಎಂಆರ್ 15/70–71 ಮತ್ತು ಅದೇ ಗ್ರಾಮದ ಸರ್ವೆ ನಂ. 19/1(ಎ)ಗೆ ಸಂಬಂಧಿಸಿದ ಎಂಆರ್ 3/48–49, ಸರ್ವೆ ನಂ. ಎಂಆರ್ 1/97–98, ಎಂಆರ್ 3/48–49 ಕಡತಗಳು ನಾಪತ್ತೆಯಾಗಿವೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಸಾರ್ವಜನಿಕರೊಬ್ಬರು ಆರ್‌ಟಿಐ ಮೂಲಕ ಒಟ್ಟು 9 ಎಂಆರ್ ಕಡತಗಳಲ್ಲಿನ ದೃಢೀಕರಣ ಪ್ರತಿಯನ್ನು ಕೋರಿದಾಗ ಮೇಲ್ಕಂಡ ಕಡತಗಳು ನಾಪತ್ತೆಯಾಗಿರುವುದು ಬೆಳಕಿಗೆ ಬಂದಿದೆ ಎಂದು ದೂರಿನಲ್ಲಿ ಹೇಳಲಾಗಿದೆ. ಎಂಆರ್ ಕಡತಗಳ ಪೈಕಿ 59–60, 60–61ನೇ ಮತ್ತು ಬೇರೆ ಬೇರೆ ಸಾಲಿನದ್ದಾಗಿದ್ದು, ಯಾವ ಅಭಿಲೇಖಾಲಯ ವಿಷಯ ನಿರ್ವಾಹಕರ ಅವಧಿಯಲ್ಲಿ ಈ ಕಡತಗಳು ನಾಪತ್ತೆಯಾಗಿವೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಸದರಿ ಶಾಖೆಗೆ ಸಾರ್ವಜನಿಕರು ಸಾಕಷ್ಟು ಪ್ರತಿಗಳನ್ನು ಕೇಳಿಕೊಂಡು ಭೇಟಿ ನೀಡುತ್ತಿದ್ದು, ಅಭಿಲೇಖಾಲಯ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಸಿಬ್ಬಂದಿಯ ಬೇಜವಾಬ್ದಾರಿಯಿಂದ ಕಡತಗಳು ಕಳೆದುಹೋಗಿವೆಯೇ ಅಥವಾ ಬೇರೆ ರೀತಿಯಲ್ಲಿ ಕಳೆದುಹೋಗಿವೆಯೇ ಎಂಬುದರ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ ಎಂದು ತಹಸೀಲ್ದಾರರರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹುಣಸೂರು ಟೌನ್ ಪೊಲೀಸರು, ತನಿಖೆ ಮುಂದುವರೆಸಿದ್ದಾರೆ.

ಶುದ್ಧ ಹಾಲು ಉತ್ಪಾದನೆ; ಚರ್ಮಗಂಟು ರೋಗ ಕುರಿತು ಒಂದು ದಿನದ ತರಬೇತಿ



ಮೈಸೂರು, ನ.17(ಎಂಕೆ)– ಮೈಸೂರು ತಾಲೂಕಿನ ದೇವಗಳ್ಳಿ ಗ್ರಾಮದಲ್ಲಿ ನಾಗನಹಳ್ಳಿಯ ವಿಸ್ತರಣಾ ಶಿಕ್ಷಣ ಘಟಕ ಹಾಗೂ ಆರ್ಗನೈಜೇಶನ್ ಫಾರ್ ದ ಡೆವಲಪ್‌ಮೆಂಟ್ ಆಫ್ ಪೀಪಲ್ ವತಿಯಿಂದ ಶುದ್ಧ ಹಾಲಿನ ಉತ್ಪಾದನೆ ಹಾಗೂ ಚರ್ಮಗಂಟು ರೋಗದ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮ ನಡೆಯಿತು.

ಈ ವೇಳೆ ನಾಗನಹಳ್ಳಿಯ ವಿಸ್ತರಣಾ ಶಿಕ್ಷಣ ಘಟಕದ ಹೈನುಗಾರಿಕೆ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಎ.ನಾಗಮಣಿ ಮಾತನಾಡಿ, ಚರ್ಮಗಂಟು ರೋಗ ವೈರಸ್‌ನಿಂದ ಬರುವ ಸಾಂಕ್ರಾಮಿಕ ಕಾಯಿಲೆಯಾಗಿದ್ದು, ಸಿಡುಬು ರೋಗದ ವೈರಾಣು 'ಕ್ಯಾಪ್ರಿಪಾಕ್ಸ್' ಮತ್ತು 'ಫಾಕ್ಸಿವಿರಿಡೆ' ಕುಟುಂಬ ವರ್ಗಕ್ಕೆ ಸೇರಿದೆ. ಚರ್ಮಗಂಟು ರೋಗದ ಲಕ್ಷಣ, ರೋಗವಾಹಕಗಳು, ವೈರಾಣುವಿನ ಕೋಶಾವಸ್ಥೆ ಹಾಗೂ ನಿರ್ವಹಣಾ ಕ್ರಮಗಳ ಮತ್ತು ಪ್ರಾರಂಭಿಕ ಹಂತದಲ್ಲಿ ರೋಗಗ್ರಸ್ತ ರಾಸುಗಳ ಮನೆ ಮದ್ದು ತಯಾರಿಕೆ ಬಗ್ಗೆ ಮಾಹಿತಿ ನೀಡಿದರು.

ವರ್ಷವಿಡೀ ನಿರಂತರ ಆದಾಯ ನೀಡುವಂತಹ ಹೈನುಗಾರಿಕೆಯಲ್ಲಿ ರೈತರು ತಮ್ಮನ್ನು ತಾವು ತೊಡಗಿಸಿಕೊಂಡು ಸ್ವಾವಲಂಬಿಗಳಾಗಿ ಜೀವನ ನಡೆಸಬಹುದಾಗಿದೆ. ಕೊಟ್ಟಿಗೆ ನಿರ್ವಹಣೆ ಹಾಗೂ ಸಮತೋಲನ ಪಶು ಆಹಾರ ನೀಡುವ ಮೂಲಕ ರಾಸುಗಳ ಆರೋಗ್ಯ ಕಾಪಾಡಲು ರೈತರು ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಮೈಮುಲ್ ಅಧಿಕಾರಿ ಪರಮೇಶ್ ಮಾತನಾಡಿ, ಮೈಮುಲ್ ವತಿಯಿಂದ ರೈತರುಗಳಿಗೆ ಸಿಗುವ ಸೌಲಭ್ಯಗಳು, ತರಬೇತಿ ಕಾರ್ಯಕ್ರಮಗಳ ಬಗ್ಗೆ ವಿವರಿಸಿ ಹಾಲು ಉತ್ಪಾದಕರು ಸಕ್ರೀಯವಾಗಿ ಪಾಲ್ಗೊಳ್ಳುವಂತೆ ತಿಳಿಸಿದರು. ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಉಪಾಧ್ಯಕ್ಷ ಬಸವರಾಜಪ್ಪ, ಜಾನ್ ರಾಡ್ರಿಗಸ್, ದೇವಗಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸುರೇಶ್, ಗ್ರಾಮಸ್ಥರಾದ ನಿಂಗರಾಜಪ್ಪ, ಪುಷ್ಪಾಮೇರಿ, ಆಸಿಫ್ ಪಾಷಾ ಮತ್ತಿತರರಿದ್ದರು.

ನಾಳೆಯಿಂದ ಮೈಸೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ

ಎರಡು ದಿನಗಳಲ್ಲಿ 20ಕ್ಕೂ ಹೆಚ್ಚು ಚಿತ್ರ ಪ್ರದರ್ಶನ ; ಪ್ರವೇಶ ಉಚಿತ



ಮೈಸೂರು,ನ.17(ಪಿಎಂ)– ಶ್ರೀ ಪ್ರನವಃ ಪಿಚ್ಚರ್ಸ್ ವತಿಯಿಂದ ನ.19 ಮತ್ತು 20ರಂದು ಮೈಸೂರಿನಲ್ಲಿ 2ನೇ ವರ್ಷದ ಮೈಸೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಆಯೋಜಿಸಲಾಗಿದೆ ಎಂದು ಚಲನಚಿತ್ರೋತ್ಸವ ನಿರ್ದೇಶಕಿ ರಂಜಿತಾ ಸುಬ್ರಹ್ಮಣ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮಕೃಷ್ಣನಗರದ ರಮಾ ಗೋವಿಂದ ರಂಗ ಮಂದಿರದಲ್ಲಿ ಈ ಎರಡು ದಿನಗಳ ಚಲನಚಿತ್ರೋತ್ಸವ ನಡೆಯಲಿದೆ. ಕನ್ನಡವೂ ಸೇರಿದಂತೆ ವಿವಿಧ ಭಾಷೆಗಳ ದೇಶ–ವಿದೇಶದ ಸುಮಾರು 20 ಚಿತ್ರಗಳು ಪ್ರದರ್ಶನಗೊಳ್ಳಲಿವೆ. ಇದರಲ್ಲಿ ಕಿರುಚಿತ್ರ, ಸಾಕ್ಷ್ಯಚಿತ್ರಗಳೂ ಇರಲಿವೆ. ಲಾಯಲ್ ವರ್ಲ್ಡ್, ಸೈಕಲ್ ಪ್ಯೂರ್ ಅಗರಬತ್ತಿ ಸೇರಿದಂತೆ ವಿವಿಧ ಕಂಪನಿಗಳು ಪ್ರಾಯೋಜಕತ್ವನೀಡಿದ್ದು, ಪ್ರವೇಶ ಉಚಿತವಿದೆ ಎಂದು ಹೇಳಿದರು.

ನ.19ರಂದು ಬೆಳಗ್ಗೆ 9.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಅತಿಥಿಗಳಾಗಿ ಡಾ.ರಾಜ್‌ಕುಮಾರ್ ಕುಟುಂಬ ವರ್ಗ, ನಟರಾದ ಮಂಡ್ಯ ರಮೇಶ್, ನಾಗೇಂದ್ರ ಅರಸ್, ನಿರ್ದೇಶಕ ಪ್ರವೀಣ್‌ಕೃಪಾಕರ್, ಟ್ರಾಫಿಕ್ ವಾರ್ಡನ್ ಆರ್ಗನೈಜೇಷನ್ ತಂಡದ ಮುಖ್ಯಸ್ಥೆ ಮಾಲಿನಿ ಪಾಲಾಕ್ಷ ಪಾಲ್ಗೊಳ್ಳಲಿದ್ದಾರೆ ಎಂದರು.

ನ.20ರಂದು ಸಂಜೆ 6ಕ್ಕೆ ಪ್ರಶಸ್ತಿ ಪುರಸ್ಕೃತ ಚಿತ್ರ ತಂಡಗಳಿಗೆ ಚಿತ್ರೋತ್ಸವದ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು. ಈ ಕಾರ್ಯಕ್ರಮದಲ್ಲಿ ಹಿರಿಯ ನಟಿ ಗಿರೀಜಾ ಲೋಕೇಶ್, ಹಿರಿಯ ರಂಗಭೂಮಿ ಕಲಾವಿದೆ ರಾಮೇಶ್ವರಿ ವರ್ಮ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು. ಚಲನಚಿತ್ರೋತ್ಸವದ ತಂಡದ ಸದಸ್ಯರಾದ ವೈ.ಕೆ.ರಾಮಮೂರ್ತಿ, ಇಂದಿರಾ ನಾಯರ್, ರಂಜಿನಿ, ನಾಗರತ್ನ ಮತ್ತಿತರರು ಗೋಷ್ಠಿಯಲ್ಲಿದ್ದರು.